ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ—ನಂ. ೮

ಭಕ್ತಿ ಗೀತೆಗಳು

ಪ್ರಕಾಶಕರು:

ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು,

ಮುರುಘಾಮಠ, ಧಾರವಾಡ.


೧೯೫೨

ಪ್ರಕಾಶಕರು:
ಶ್ರೀ. ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು,
ಶ್ರೀ ಮುರುಘಾಮಠ, ಹಾವೇರಿಪೇಟೆ,
ಧಾರವಾಡ.

ಪ್ರಥಮ ಮುದ್ರಣ ೧೯೫೦.
ದ್ವಿತೀಯ ಮುದ್ರಣ ೧೯೫೭.

ಮುದ್ರಕರು:
ಶ್ರೀ. ಎಂ. ಜಿ. ವಿರೂಪಾಕ್ಷನ್,
ವ್ಯವಸ್ಥಾಪಕರು:
ಮೃತ್ಯುಂಜಯ ಮುದ್ರಕರು, (ಮುದ್ರಣಾಲಯ) ಕಿಲ್ಲೆ,
ಧಾರವಾಡ.

ಶ್ರೀ ಮ. ನಿ. ಪ್ರ. ಮುರುಘೇಂದ್ರ ಮಹಾ ಶಿವಯೋಗಿಗಳು



— ಅರ್ಪಣೆ —

ಶ್ರೀ ಬಸವಾದಿ ಪ್ರಮಥರಂತೆ ನುಡಿದು, ನುಡಿದಂತೆ ನಡೆದು,
ವೀರಶೈವ ಧರ್ಮಾಚರಣೆಯನ್ನು ತಮ್ಮ ಜೀವಿತದಲ್ಲಿ
ನಡೆ – ನುಡಿಗಳ ಮೂಲಕ ಆಚರಿಸಿ
ಶಿವಯೋಗದ ಘನತೆಯನ್ನು ಬೀರಿದ
ಮಹಾ ತಪಸ್ವಿಗಳೂ
ವೈರಾಗ್ಯ ಮೂರ್ತಿಗಳೂ ಕಾರಣ ಪುರುಷರೂ ಆದ
ಅಥಣಿ ಗಚ್ಚಿನ ಮಠದ
ಲಿಂಗೈಕ್ಯ

ಶ್ರೀ. ಮ. ನಿ. ಪ್ರ.
ಮುರುಘೇಂದ್ರ ಮಹಾ ಶಿವಯೋಗಿಗಳ
ಸ್ಮಾರಕವಾಗಿ

ಅವರ ಅಡಿದಾವರೆಗಳಿಗೆ ಈ ಗ್ರಂಥವನ್ನು
ಭಕ್ತಿಯ ಮುಡಿಪೊಂದು
ಅರ್ಪಿಸಲಾಗಿದೆ.

ಶ್ರೀ ಬಾಲಲೀಲಾ ಮಹಂತ ಶಿವಯೋಗೀಶ್ವರ ಗ್ರಂಥಮಾಲೆ



— ಅಚ್ಚಿನಲ್ಲಿರುವ ಗ್ರಂಥಗಳು —

೧ ರಾಘವಾಂಕ ಚರಿತೆ
ಸಂಪಾದಕರು : ಸ. ಸ. ಮಾಳವಾಡ, ಎ. ಎ.

೨ ಲಿಂಗಲೀಲಾ ವಿಲಾಸ ಚಾರಿತ್ರ

೦ ಪ್ರೌಢದೇವರಾಯನ ಕಾವ್ಯ
ಸಂಪಾದಕರು : ಸಂ. ಶಿ. ಭೂಸನೂರಮಠ, ಎಂ. ಎ.

ಮುನ್ನುಡಿ

ಇಂದಿನ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ನಡೆದ ಚಟುವಟಿಕೆಗಳನ್ನು ಚನ್ನಾಗಿ ಪರಿಶೀಲಿಸಿ ನೋಡಿದರೆ ಕನ್ನಡ ಸಾಹಿತ್ಯಕ್ಕೆ ಅತ್ಯುಜ್ವಲವಾದ ಭವಿಷ್ಯವು ಕಾದ್ದು ಕುಳಿತಿರುವದೆಂದು ಕಂಡು ಬರುತ್ತದೆ. ಸುಮಾರು ಮೂರು ಶತಮಾನಗಳ ಪೂರ್ವದಲ್ಲಿಯೇ ಸುಜೇಸನೇಬ ಮಹಾನುಭಾವಿಯು ತನ್ನ ಕಾಲಜ್ಞಾನ ವಚನದಲ್ಲಿ :

ಕನ್ನಡದ ನುಡಿಯೊಮ್ಮೆ ಕನ್ನಡಿಯ ತೆರದಿಂದೆ
ಚನ್ನಾಗಿ ಬೆಳೆದು ಬೆಳಗುವದು ಜಗದೊಳಗೆ
ಮುನ್ನುಡಿಯು ಎಂದು ಸಂಜೇಶ

ಎಂದು ಹೇಳಿರುವದನ್ನು ಕಂಡಾಗ ನಮ್ಮ ಮಾತಿಗೆ ಪ್ರತಿಷ್ಟೆ ಕಸುವು ಬಂದು ಬಿಡುವದು. ಕನ್ನಡ ಸಾಹಿತ್ಯವು ಕನ್ನಡಿಗರ ಸೋಜ್ವಲ ಜೀವನದ ಪ್ರತೀಕವಾಗಿದೆ ಕನ್ನಡ ಕವಿಗಳು ತಮ್ಮ ಹೃದಯಮಂದಿರದ ಗರ್ಭಗುಡಿಯಲ್ಲಿ ಬೆಳಗುವ ಜ್ಞಾನಜ್ಯೋತಿಯನ್ನೇ ಲೋಕಕಲ್ಯಾಣದ ದೃಷ್ಟಿಯಿಂದ ಭಾಷೆಯ ರೂಪದಲ್ಲಿ ವ್ಯಕ್ತಪಡಿಸಿದುದೆ ಕನ್ನಡ ಸಾಹಿತ್ಯವೆನಿಸಿರುವದು. ಕನ್ನಡಿಗರ ಭಾಗ್ಯವು ಕನ್ನಡ ಸಾಹಿತ್ಯದಲ್ಲಿ ಹುದುಗಿಕೊಂಡಿರುವದು.

ಕನ್ನಡ ಸಾಹಿತ್ಯಜ್ಯೋತಿ ಗಂಗೆಯು ಯಾವಾಗ ಉದಯವಾಯ್ತೆಂಬದನ್ನು ನಿರ್ಣಯಿಸಿ ಹೇಳಲು ಇದುವರೆಗೆ ಯಾವ ಸಾಹಿತಿಗೂ ಸಾಧ್ಯವಾಗಿಲ್ಲ. ಆದರೆ ಅದು ಬಹು ದೂರದಿಂದ ಹರಿದು ಬಂದಿರುವದೆಂಬುವಲ್ಲಿ ಸಂದೇಹವೇನಿಲ್ಲ. ಇಷ್ಟರಲ್ಲಿಯೇ ಒಂಬತ್ತನೇ ಶತಮಾನದಲ್ಲಿ ನೃಪತುಂಗನ ಕವಿರಾಜಮಾರ್ಗವೆಂಬ ಗ್ರಂಥಕ್ಕಿಂತ ಮೊದಲಿನ ಯಾವ ಸಾಹಿತ್ಯಗ್ರಂಥವೂ ಉಪಲಬ್ಧವಿಲ್ಲ. ಆದರೆ ಕ್ರಿ. ಶ. ೪೫೦ರ ಹಲ್ಮಿಡಿ ಶಿಲಾಶಾಸನದಲ್ಲಿ ಕನ್ನಡ ಸಾಹಿತ್ಯ ವಾಹಿನಿಯ ಪಾವನ ಪಿಚಾರೋದಕದ ದರ್ಶನವನ್ನು ಕನ್ನಡ ಸಾಹಿತ್ಯ ಸಂಶೋಧಕರು ಮಾಡಿಕೊಂಡಿರುತ್ತಾರೆ. ಇನ್ನು ಕೆಲವರು ಕ್ರಿ. ಶ. ಪೂರ್ವದಲ್ಲಿಯೇ ಕನ್ನಡ ಸಾಹಿತ್ಯವು ಪ್ರಸಿದ್ಧವಾಗಿದ್ದಿತೆಂದು ಹೇಳುತ್ತಾರೆ. ಕ್ರಿ. ಶ. ೨ನೇ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ ನಾಟಕದಲ್ಲಿ ಕೆಲವು ಕನ್ನಡ ಶಬ್ದಗಳು ಇರುವವೆಂದು ಡಾ. ಹುಲ್ಷ್ ಎಂಬ ಪಂಡಿತರು ಹೇಳಿರುವದನ್ನು ಕವಿಚರಿತ್ರಕಾರರಾದ ಆರ್. ನರಸಿಂಹಾಚಾರ್ಯರು ಎತ್ತಿ ಹೇಳಿದ್ದಾರೆ. ಒಟ್ಟಿನಲ್ಲಿ ಹೇಳುವದಾದರೆ ಕನ್ನಡ ಸಾಹಿತ್ಯವು ಬಹು ಪುರಾತನ

ವಾದದಲ್ಲೆಂಬುವಲ್ಲಿ ಯಾರ ಮತಭೇದವಿಲ್ಲ. ನೆರೆಹೊರೆಯ ಭಾಷೆಗಳು ಇನ್ನೂ ಕಣ್ತೆರೆಯದಿರುವಾಗಲೇ ಕನ್ನಡವು ಹುಟ್ಟಿ ಬೆಳೆದು ಬೆಳಗುತ್ತಿದ್ದಿತು! ಇದು ಕನ್ನಡಿಗರಿಗೆ ಹೆಮ್ಮೆಯ ಮಾತಾಗಿರುವದು ಸಹಜವೆ!

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ನಿಂತು ಕೃಷಿ ಮಾಡಿದವರಲ್ಲಿ ಜೈನ ಕವಿಗಳು ತಮ್ಮ ಧರ್ಮ ಪ್ರಚಾರ ಮಾಡುವ ಧ್ಯೇಯುವನ್ನಿಟ್ಟುಕೊಂಡು ಕನ್ನಡದಲ್ಲಿ ಗ್ರಂಥರಚನೆ ಮಾಡಲು ತೊಡಗಿದರು. ಅವರ ಗ್ರಂಥಗಳೆಲ್ಲಾ ಹೆಚ್ಚಾಗಿ ಚಂಪೂ ರೂಪದಲ್ಲಿರುತ್ತವೆ. ಪಂಪ, ರನ್ನ ಜನ್ನ, ನಾಗಚಂದ್ರ ಮುಂತಾದ ಜೈನ ಕವಿಗಳು ತಮ್ಮ ಗ್ರಂಥಗಳಲ್ಲಿ ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಆಗ ಸಂಸ್ಕೃತಭಾಷೆಯು ಪ್ರಭುತ್ವವು ಅಧಿಕವಾಗಿದ್ದುದೇ ಇದಕ್ಕೆ ಮೂಲ ಕಾರಣವಾಗಿರುವದು. ೧೨ನೇ ಶತಮಾನದ ವರೆಗೂ ಜೈನ ಕವಿಗಳು ಬರೆದ ಗ್ರಂಥಗಳೇ ವಿಶೇಷವಾಗಿ ದೊರೆಯುತ್ತವೆ.

೧೨ನೇ ಶತಮಾನ ಪ್ರಾಪ್ತವಾಗುತ್ತಲೇ ಕನ್ನಡ ನಾಡಿನಲ್ಲಿ ಭಾಗ್ಯರವಿಯು ಉದಯನಾದನು. ಆಗ ಕನ್ನಡ ಸಾಹಿತ್ಯದಲ್ಲಿ ಅಭೂತಪೂರ್ವವಾದ ಕ್ರಾಂತಿಯುಂಟಾಯಿತು. ಆ ಕ್ರಾಂತಿಗೆ ಕನ್ನಡ ಕುಲಋಷಿಗಳಾದ ಶರಣ ಶರಣೆಯರೇ ಮುಂದಾದರು. ಅವರಲ್ಲಿ ಬಸವ, ಚನ್ನಬಸವ, ಪ್ರಭು, ಸಿದ್ಧರಾಮ, ಅಕ್ಕಮಹಾದೇವಿಯವರು ಅಗ್ರೇಸರರು. ಅವರು ನಾಡಿನ ತುಂಬ ತಮ್ಮ ವಿಚಾರದ ಕಿಡಿಗಳನ್ನು ಜಾಗ್ರತೆಮಾಡಲು ಹೋರಾಡಿದರು. ಮತ್ತು ಕನ್ನಡ ಸಾಹಿತ್ಯದೇವಿಯು ಮೈ ಮೇಲೆ ಅಸ್ವೈಸರ್ಗಿಕವಾಗಿ ತೊಡಿಸಿಪ್ಪ ಸಂಸ್ಕೃತ ಶಬ್ದಾಡಂಬರದ ತೊಡಿಗೆಗಳನ್ನು ಕಿತ್ತುಹಾಕಿ ಆಕೆಯ ಸಹಜ ಸೌಂದರ್ಯವನ್ನು ನೋಡಿ ಕನ್ನಡಿಗರು ನಲಿಯುವಂತೆ ಮಾಡಿದರು. ಅಲ್ಲಿಂದ ಮೊದಲು ಮಾಡಿಕೊಂಡು ಲಿಂಗವಂತ ಕವಿಗಳಲ್ಲಿ ಕೆಲವರು ಗದ್ಯದಲ್ಲಿಯೂ ಕೆಲವರು ಪದ್ಯದಲ್ಲಿಯೂ ಸಾಹಿತ್ಯರಚನೆ ಮಾಡಹತ್ತಿದರು. ಮತ್ತೆ ಕೆಲವರು ಸಾಹಿತ್ಯದಲ್ಲಿ ಸಂಗೀತವನ್ನು ಬೆರೆಸಿ ಜನರ ಮನಸ್ಸನ್ನು ಸರಿಯಾಗಿ ಅರಳಿಸಿ ಅವರಿಗೆ ಅನುಭವದ ರಸದೂಟ ಮಾಡುವ ಅರ್ಹತೆಯನ್ನುಂಟುಮಾಡಿದರು. ಅಂಥ ಸರಸ ಕವಿಯೋಗಿಗಳಲ್ಲಿ ನಿಜಗುಣ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಂತ ಶಿವಯೋಗಿಗಳು, ಘನಮಠದ ನಾಗಭೂಷಣ ಶಿವ

ಯೋಗಿಗಳು ಮುಂತಾದವರು ಬರುತ್ತಾರೆ. ಅವರ ಗ್ರಂಥಗಳು ಕನ್ನಡ ಸಾಹಿತ್ಯೋದ್ಯಾನದಲ್ಲಿ ತತ್ವಗಂಧವನ್ನು ಬೀರುವ ಅಮೋಘ ಪುಷ್ಪಗಳಾಗಿರುವವು. ಅಂಥ ಗ್ರಂಥ ಪುಷ್ಪದೊಳಗಿನ ತನಿರಸವನ್ನು ವ ನಪಣಿಯ ಸವಿಯುವ ಭಾಗ್ಯವನ್ನು ಪಡೆದ ಕನ್ನಡಿಗರು ಧನ್ಯರೇ ಸರಿ

ಇಂದಿನ ಪರಿಸ್ಥಿತಿಯಲ್ಲಿ ಅನುಭಾವಿಗಳ ಸಮಗ್ರ ಗ್ರಂಥಗಳನ್ನು ಓದುವದು ಬಹುಜನ ಕನ್ನಡ ಬಾಂಧವರಿಗೆ ಸಾಧ್ಯವಿಲ್ಲ. ಅವರಿಗಾಗಿ ಕೆಲವು ಮಹತ್ವದ ಪದ್ಯಗಳನ್ನು ಸಂಗ್ರಹಿಸಿ ಗ್ರಂಥ ರೂಪದಲ್ಲಿ ಹೊರಡಿಸುವದು ಅತ್ಯವಶ್ಯವಾಗಿದ್ದಿತು. ಈ ಕೆಲಸವನ್ನು ಧಾರವಾಡದ ಮುರಘಾಮಠ ಪ್ರಸಾದ ನಿಲಯದ ವಿದ್ಯಾರ್ಥಿಗಳಾದ ಶ್ರೀ ಗುರುಪಾದಯ್ಯ ಗುರುಪಾದ ದೇವರ ಮಠ, ಬಿ ಎ (ಆನರ್ಸ) ಅವರು ಪೂರೈಸಲು ಪರಮಪೂಜ್ಯ ಮೃತ್ಯುಂಜಯ ಸ್ವಾಮಿಗಳ ಆಜ್ಞಾನುಸಾರ ಮುಂದೆ ಬಂದುದು ಪರಮ ಸಂತೋಷದ ವಿಷಯ. ಇವರು ಹಿಂದಿನ ಅನುಭಾವಿಗಳ ಕೆಲವು ಉತ್ತಮೋತ್ತಮ ಪದ್ಯಗಳನ್ನು ಮತ್ತು ಆಧುನಿಕ ಕವಿಗಳ ಹಾಡುಗಳನ್ನು ಸಂಗ್ರಹಿಸು ವಲ್ಲಿ ಮಧುಕರ ವೃತ್ತಿಯನ್ನು ತಾಳಿರುವರು. ಮಧುಕರ (ಜೇನ್ನೊಣ)ವು ಬೇರೆ ಬೇರೆ ಪುಷ್ಪಗಳಲ್ಲಿಯ ರಸವನ್ನು ಹೀರಿಕೊಂಡು ಮಧುರವಾದ ಮಧುವನ್ನು ಸಿದ್ಧಪಡಿಸಿದಂತಾಗಿದೆ ಇವರ ಭಕ್ತಿಗೀತೆಗಳ ಸಂಗ್ರಹ ಗ್ರಂಥದಲ್ಲಿಯ ಕೆಲವು ಪದ್ಯಗಳನ್ನು ಮಾದರಿಗಾಗಿ ವಾಚಕರೆದುರು ಇಡಬಯಸುತ್ತೇನೆ.

ಜಗತ್ತಿನ ಭೋಗ ಸುಖವು ಉಪೇಕ್ಷಣೀಯವಲ್ಲದಿದ್ದರೂ ಶಿವನನ್ನು ಮರೆತು ನಡಿಸುವ ಭೋಗವು ದುಃಖದ ಬೀಜವೆಂಬದನ್ನು ತಿಳಿದುಕೊಂಡ ಮುಪ್ಪಿನ ಷಡಕ್ಷರ ಯೋಗಿಗಳು 'ಧರೆಯ ಸುಖದ ಭೋಗವೆನಗೆ ಹರಿದು ಹೋಗಲಯ್ಯ ನಿಮ್ಮ ಚರಣ ಕಮಲದಲ್ಲಿ ಮನವು ಮಗ್ನವಾಗಲಿ' ಎಂಬ ಪದ್ಯದಲ್ಲಿ ಒಳ್ಳೇ ಸ್ವಾರಸ್ಯವಾಗಿ ಹೇಳಿದ್ದಾರೆ. ಇದರಂತೆ ನಿಜಗುಣ ಶಿವ ಯೋಗಿಗಳ 'ಶ್ರೀಗುರುವಚನುಪದೇಶವನಾಲಿಸಿದಾಗಲಹುದು ನರರಿಗೆ ಮುಕುತಿ" 'ಶ್ರೀಗುರು ವಚನದಿಂದಧಿಕ ಸುಧೆಯುಂಟೇ ರಾಗದಿಂ ಬೇರಿನ್ನು ಭವ ಬೀಜವುಂಟೆ' ಮುಂತಾದ ಪದ್ಯಗಳು ಮಾನವರ ಶ್ರೇಯೋಮಾರ್ಗ ಪ್ರದರ್ಶಕವಾಗಿರುವವು. ಹಿಂದಿನ ಅನಂತ ಜನ್ಮಗಳ ಸಂಸ್ಕಾರ ಬಲದಿಂದ ಅಸ್ಥಿರವಾದ ಸಂಸಾರದತ್ತ ಚಲಿಸುವ ಮನಸ್ಸಿಗೆ ಬಾಲಲೀಲಾ ಮಹಂತ

ಶಿವಯೋಗಿಗಳು 'ಎಲೇ ಮನವೆ ಕೇಳು ಸ್ಥಿರವೆಂದು ಸಂಸಾರ ಮಲದೇಹ ವಸು ಮೆಚ್ಚಿ ಕೆಡಬೇಡ ಬರಿದೆ' ಎಂದು ಬೋಧಿಸಿರುವದು ಮನಸ್ಸಿನ ಕಲ್ಮಿಷವನ್ನು ಹೋಗಲಾಡಿಸಿಕೊಳ್ಳಬೇಕೆಂಬ ಸಾಧಕರಿಗೆ ಬಹಳ ಸಹಾಯಕವಾಗಿರುವದು. ಘನಮಠ ಶಿವಯೋಗಿಗಳು 'ಎಲ್ಲಿಭಕ್ತಿಯದೆಲ್ಲಿಮುಕ್ತಿಯದೋ" ಎಂಬ ಪದ್ಯದಲ್ಲಿ ನಿಜವಾದ ಭಕ್ತಿಯ ಸ್ಥಿತಿಯನ್ನು ಮತ್ತು ಸರ್ಪಭೂಷಣ ಶಿವಯೋಗಿಗಳ 'ಕಾಯ ಕಾಂತಾರವ ಹೊಕ್ಕು ಬೇಟೆಯನಾಡಿರೊ' ಎಂಬ ಪದ್ಯದಲ್ಲಿ ನಿಜವಾದ ಬೇಟೆಯನ್ನು ಮನಮುಟ್ಟುವಂತೆ ಬೋಧಿಸಿದ್ದಾರೆ ಇನ್ನು ಅನೇಕ ಆಧುನಿಕ ಕವಿಗಳ ಸರಸ ವಚನಗಳು ಇದರಲ್ಲಿ ಸಂಗ್ರಹವಾಗಿದ್ದು ವಾಚಕರು ಇವೆಲ್ಲವುಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುವದು ಒಳ್ಳೇದು.

ನಮ್ಮ ಕನ್ನಡ ನಾಡು ಒಂದು ದಿವ್ಯ ಭೂಮಿಯಾಗಿರುವದು. ಇದರ ಪ್ರತಿಯೊಂದು ಧೂಳಿ ಕಣಗಳಲ್ಲಿ ದೈವೀಶಕ್ತಿಯು ತುಂಬಿಕೊಂಡಿರುತ್ತದೆ. ಹಿಂದೆ ಅನಂತ ಮಹಾನುಭಾವಿಗಳು ಇಲ್ಲಿ ತಮ್ಮ ಲೀಲೆಯನ್ನು ಮಾಡಿ ಹೋಗಿರುವದೇ ಇದಕ್ಕೆ ಮೂಲವಾಗಿದೆ. ಈಗ ನಮ್ಮ ನಾಡು ಎಷ್ಟು ಹಿಂದುಳಿದಿದೆಂದು ಹೇಳಿದರೂ ಮಹಾನುಭಾವಿಗಳ ಕೃಪೆಯಿಂದ ಇದರಲ್ಲಿ ಸಂಸ್ಕೃತಿ ಜಾಗೃತವಾಗಿದ್ದು ಅಶಾಂತಿಯಿಂದ ತಪ್ತವಾದ ಜಗತ್ತಿಗೆ ಜ್ಞಾನದಾನ ಮಾಡುವ ಬಲವನ್ನು ಕಾಯ್ದುಕೊಂಡಿರುವದು ಕನ್ನಡಿಗರಿಗೆ ಹೆಮ್ಮೆಯ ವಿಷಯವಲ್ಲವೇ ? ವಿಶ್ವದ ಸಮಸ್ತ ವಿದ್ವಾಂಸರು ಆಧ್ಯಾತ್ಮಿಕ ಜ್ಞಾನಕ್ಕಾಗಿ ಭಾರತಕ್ಕೆ ಮೊರೆ ಹೋಗಬೇಕಾಗಿರುವಾಗ, ಅದರಲ್ಲಿ ಕನ್ನಡ ನಾಡಿನ ಅನುಭಾವವು ಭಾರತೀಯ ತತ್ವಜ್ಞಾನಕ್ಕೆ ಸಲ್ಲಿಸಿದ ಕಾಣಿಕೆಯನ್ನು ನೆನೆದುಕೊಂಡರೆ, ಕನ್ನಡ ನಾಡಿನ ಅನುಭಾವಿಗಳ ಗೌರವವೆಷ್ಟಿದೆ ಎಂಬದು ಸ್ಪಷ್ಟವಾಗುತ್ತದೆ. ಅಂಥ ಕಾಲವು ಇನ್ನು ಬಹಳ ದೂರವಿಲ್ಲ. ಕನ್ನಡಿಗರೆಲ್ಲರೂ ಒಮ್ಮನಸ್ಸಿನಿಂದ ಕೂಡಿಕೊಂಡು ತತ್ವ ಸೇವೆಗೆ ಮುಂದೆ ಬರಬೇಕು. ಅದಕ್ಕಾಗಿ ಇಂಥ ಅನೇಕ ಸಂಗ್ರಹ ಪುಸ್ತಕಗಳು, ಕನ್ನಡಿಗರ ಹಸ್ತಗತವಾಗಬೇಕು.

ಗದಗ
ಅಖಿಲಭಾರತ ವೀ. ವಿದ್ಯಾಪೀಠ

ನಾಗಭೂಷಣ ಶಾಸ್ತ್ರಿ
ಸಂಪಾದಕ, 'ಸಾವಧಾನ'

ಪ್ರಸ್ತಾವನೆ

—***—

ಈ ಹಿಂದೆ ನನಗೆ ಒಳ್ಳೇ ಪದ್ಯಗಳನ್ನು ಕಂಡರೆ ಬರೆದುಕೊಂಡು ಅವುಗಳನ್ನು ಅನ್ನುವ ಅಭ್ಯಾಸವಿತ್ತು. ಹೀಗಿ ಎಲ್ಲ ಕೈವಲ್ಯಕಾರರ ೧೫೦ ಪದ್ಯಗಳು ನನ್ನಲ್ಲಿ ಸಂಗ್ರಹವಾದವು. ಅವುಗಳನ್ನು ಒಂದು ಅಚ್ಚುಕಟ್ಟಾದ ಪುಸ್ತಕ ಸ್ವರೂಪಕ್ಕೆ ತರಲು ನನ್ನ ಪೂಜ್ಯ ಗುರುಗಳಾದ ಶ್ರೀ ಮ ನಿ ಪ್ರ. ಮೃತ್ಯುಂಜಯ ಸ್ವಾಮಿಗಳವರು ಸಲಹೆಯಿತ್ತು ನನ್ನನ್ನು ಹಾಗೆ ಮಾಡಲು ಪ್ರೇರೇಪಿಸಿದರು. ಅವರ ಕೃಪೆಯಿಂದಲೇ ಈ ಪುಸ್ತಕ ಓದುಗರ ಕೈಸೇರಿದ್ದರಿಂದ ತುಂಬ ಸಂತೋಷವೆನಿಸುವದು. ಇನ್ನು ಈ ಪುಸ್ತಕದ ವೈಶಿಷ್ಟ್ಯವನ್ನು ಕುರಿತು ಕೆಲವು ಮಾತು ತಿಳಿಸಿಕೊಡಲು ಪ್ರಯತ್ನಿಸುತ್ತೇನೆ.

ಕನ್ನಡ ಸಾಹಿತ್ಯದಲ್ಲಿ ವೀರಶೈವ ಸಾಹಿತ್ಯವು ಹೇಗೆ ಒಂದು ವಿಶಿಷ್ಟತೆಯನ್ನು ಪಡೆದಿದೆಯೋ ಹಾಗೆ ವೀರಶೈವ ಸಾಹಿತ್ಯದಲ್ಲಿ ಕೈವಲ್ಯ ಸಾಹಿತ್ಯವು ಒಂದು ಸ್ಥಾನ ಪಡೆದಿದೆ. ಬಸವಾದಿ ಪ್ರಮಥರ ವಚನಗಳ ತಿರುಳನ್ನೇ ಹೇಳುತ್ತಿರುವದರಿಂದ ಈ ಸಾಹಿತ್ಯಕ್ಕೆ ವಚನ ಸಾಹಿತ್ಯವೇ ಅಡಿಗಲ್ಲು. ಈ ಅನುಭವದ ಹಾಡುಗಳು ವೀರಶೈವ ತತ್ವವನ್ನೂ, ವಿಶಾಲದೃಷ್ಟಿ, ನೀತಿ ಮತ್ತವನ್ನೂ ಮತ್ತು ವಿಶ್ವಧರ್ಮಕ್ಕೇ ಬೇಕಾಗುವ ತತ್ವಗಳನ್ನೂ ಬೋಧಿಸುತ್ತವೆ ಆದುದರಿಂದ ಕೈವಲ್ಯಕಾರರು ಜಗತ್ಪೂಜ್ಯರು. ಅವರ ಗೀತೆಗಳು ಜಗದ್ಬೋಧಕವಾದವುಗಳು. ಜಗತ್ತಿನಲ್ಲಿ ಸಾಹಿತ್ಯ ಸೃಷ್ಟಿಕರ್ತೃಗಳು ಅನೇಕರು ಸಿಗಬಹುದು, ಆದರೆ ನುಡಿದಂತೆ ನಡೆದು ನಡೆದ ಮಾರ್ಗವನ್ನು ಸಾಹಿತ್ಯರೂಪದಿಂದ ಉಣ್ಣಿಸಿದವರಲ್ಲಿ ವಚನಕಾರರು, ಕೈವಲ್ಯಕಾರರು ಅಗ್ರಗಣ್ಯರು. "ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗ ರಸವ ತರಂಗಿಣಿ" ಎಂಬ ನಿಜಗುಣ ಶಿವಯೋಗಿಗಳ ನುಡಿಯು ಇಲ್ಲಿಯ ಗೀತೆಗಳಿಗೆ ಸಹಜವಾಗಿ ಅನ್ವಯಿಸುತ್ತದೆ. ಆದುದರಿಂದ ಇಂಥ ಅನುಭಾವಿಗಳ ಜೀವನ ಸಂಗೀತ ಅಭ್ಯಾಸ ಮಾಡುವದು ನಮ್ಮೆಲ್ಲರ ಕರ್ತವ್ಯವಾಗಿದೆ. ವೀರಶೈವ ಧರ್ಮದಲ್ಲಿ ಬಸವಾದಿ ಪ್ರಮಥರಿಂದಲೂ ಭಕ್ತಿಗೇ ಮಹತ್ವ ಕೊಟ್ಟಿದ್ದರಿಂದ ಈ ಕೈವಲ್ಯಕಾರರಾದರೂ ಆ ಹಾದಿಯನ್ನೇ ಅನುಸರಿಸಿ ತಮ್ಮ ಗೀತೆಗಳಲ್ಲಿಯೂ ಭಕ್ತಿಗೇ ಪ್ರಾಮುಖ್ಯತೆ ಕೊಟ್ಟಿದ್ದರಿಂದ ಈ ಪುಸ್ತಕಕ್ಕೆ 'ಭಕ್ತಿ ಗೀತೆಗಳು' ಎಂದು ಹೆಸರಿಡಲಾಗಿದೆ.

ಈ ಭಕ್ತಿಗೀತೆಯ ಮೊದಲಿನ ೧೬ ಪದ್ಯಗಳು ಎಲ್ಲ ಕೈವಲ್ಯಕಾರರ ವಿದ್ದು ಅವು ಇಲ್ಲಿಯ ಪ್ರಸಾದನಿಲಯದ ವಿದ್ಯಾರ್ಥಿಗಳು ನಿತ್ಯವೂ ಪಠಿಸುವ ಗೀತೆಗಳು. ಮುಂದೆ ಕ್ರಮವಾಗಿ (೧) ಸರ್ಪಭೂಷಣ ಶಿವಯೋಗಿಗಳು (೨) ಘನಮಠ ಶಿವಯೋಗಿಗಳು (೩) ನಿಜಗುಣ ಶಿವಯೋಗಿಗಳು (೪)ಮುಪ್ಪಿನ ಷಡಕ್ಷರಿ ಸ್ವಾಮಿಗಳು (೫) ಬಾಲಲೀಲಾ ಮಹಂತ ಶಿವಯೋಗಿಗಳು (೬) ಬಸವಲಿಂಗ ಶರಣರು (೭) ಆಧುನಿಕ ಕವಿಗಳು. ಹೀಗೆ ಇವರ ಕೆಲಕೆಲವು ಹಾಡುಗಳನ್ನು ಆಯ್ದುಕೊಂಡಿದ್ದೇನೆ. ಜನರು ಇವರು ಬರೆದ ಒಂದೊಂದು ಮೂಲ ಪ್ರತಿಗಳನ್ನು ಕೊಂಡು ಓದುವದು ಅಸಾಧ್ಯ. ಯಾಕಂದರೆ ಅವು ಅಚ್ಚುಕಟ್ಟಾಗಿ ಮುದ್ರಿಸಲ್ಪಟ್ಟಿಲ್ಲ, ಕೆಲವು ಪ್ರತಿಗಳು ಸಿಗುವದಿಲ್ಲ; ಸಿಕ್ಕವುಗಳನ್ನು ಹೆಚ್ಚು ಬೆಲೆಯನ್ನುಕೊಟ್ಟುಕೊಂಡು ದೀರ್ಘವಾದವುಗಳನ್ನು ಓದುವದಾಗುವದಿಲ್ಲ. ಕಾರಣ ಈ ತೊಂದರೆ ನಿವಾರಣೆ ಮಾಡಲು ಈ ಪುಸ್ತಕವು ಸಹಾಯ ಮಾಡದೆ ಇರದು. ತೋಟದಲ್ಲಿಯ ಅನೇಕ ಗಿಡಗಳಲ್ಲಿಯ ಸುಗಂಧವಾದ ಮಧುರವಾದ ಹೂಗಳನ್ನಷ್ಟೇ ಮಾತ್ರ ಒಂದುಗೂಡಿಸಿದಂತೆ ಈ ಗೀತೆಗಳನ್ನು ಒತ್ತಟ್ಟಿಗೆ ಕೂಡಿಸಿ ಮಾಲೆಯನ್ನಾಗಿ ಮಾಡಲು ಸಾಧ್ಯವಾದಷ್ಟು ಪ್ರಯತ್ನಿಸಿದ್ದೇನೆ.

ಇನ್ನು ಈ ಅನುಭಾವಿಗಳ ಮತ್ತು ಅವರ ಹಾಡುಗಳ ಅಲ್ಪ ಪರಿಚಯ ಮಾಡಿ ಕೊಡುವದು ಅವಶ್ಯವೆನಿಸಿದ್ದರಿಂದ ಕೆಳಗೆ ಕೊಟ್ಟಿದ್ದೇನೆ.

(೧) ಸರ್ಪಭೂಷಣ ಶಿವಯೋಗಿಗಳು:— ಇವರು ಶ್ರಿ. ಶ. ೧೭೯೫ ರಲ್ಲಿ ಬೆಂಗಳೂರಲ್ಲಿ ಜನಿಸಿದರು. ಮುಂದೆ ಅವರ ತಂದೆ ತಾಯಿಗಳು ಅಲ್ಲಿಯ ಗುರುಸಿದ್ಧ ಸ್ವಾಮಿಗಳಲ್ಲಿ ವಿಧ್ಯಾಭ್ಯಾಸಕ್ಕಾಗಿ ಇಟ್ಟರು. ಗುರುಗಳಿಂದ ವಿದ್ಯಾಭ್ಯಾಸ ಸಂಪಾದಿಸಿ, ವಿರಕ್ತಾಶ್ರಮಹೊಂದಿ ಅವರ ಅಪ್ಪಣೆಯ ಮೇರೆಗೆ ೧೮೧೫ರಲ್ಲಿ ದೇಶಾಟನೆಗೆ ಹೊರಟರು. ಆ ಮೇಲೆ ಅಖಂಡ ಕರ್ನಾಟಕವನ್ನೇ ಸಂಚರಿಸಿ ಭಕ್ತರನ್ನು ಉದ್ಧರಿಸುತ್ತ ೧೮೨೪ರಲ್ಲಿ ಮರಳಿ ಬೆಂಗಳೂರಿಗೆ ಬಂದು ಗುರುಗಳ ದರ್ಶನಕ್ಕೆ ಪಾತ್ರರಾದರು. ಗುರುಗಳು ಲಿಂಗೈಕ್ಯರಾದನಂತರ ಅವರ ಮಠಕ್ಕೆ ಅಧಿಕಾರಿಗಳಾದರು. ಇವರು ರಚಿಸಿರುವ ಗ್ರಂಥಗಳೆಂದರೆ ಕೈವಲ್ಯ ಕಲ್ಪವಲ್ಲರಿ (ಇದರಿಂದಲೇ ನಾನು ಆಯ್ದುಕೊಂಡದ್ದು) ಮತ್ತು ಸಂಸ್ಕೃತದಲ್ಲಿ ಜ್ಞಾನಶತಕ. ವರಕವಿಗಳ ಮಾಲಿಕೆ

ಯಲ್ಲಿ ಇವರು ಬರುವರು. ಇವರ ಶೈಲಿ ಲಲಿತ ಮತ್ತು ರಮ್ಯವಾಗಿದೆ. ಗಹನವಾದ ವಿಷಯಗಳನ್ನು ಮನದಟ್ಟಾಗುವ ಉದಾಹರಣೆಗಳಿಂದ ಕೊಡುವ ಸಾಮರ್ಥ್ಯ ಅಗಾಧವಾಗಿದೆ. ನಿರಾಭಾರಿಗಳಾದರೂ ಲೋಕಾನುಭವವಿದೆ ಇವರ ಗೀತೆಗಳು ಕ್ಲಿಷ್ಟತೆ ಇಲ್ಲದ್ದರಿಂದ ಕಾವ್ಯಪಾಕ ದ್ರಾಕ್ಷಾಪಾಕದಂತಿವೆ. ಇವರ ಗೀತೆಗಳಿಕ್ಕಿ ನಿಜಗುಣ ಶಿವಯೋಗಿಗಳ ಗೀತೆಗಳಿಗೆ ಹೋಲುತ್ತವೆ. ತಮ್ಮ ಗುರುಗಳಾದ "ಗುರುಸಿದ್ಧ" ಸ್ವಾಮಿಗಳ ಮುದ್ರಿಕೆಯಿಂದ ಹಾಡುಗಳನ್ನು ರಚಿಸಿದ್ದಾರೆ.

(೨) ಘನಮಠ ನಾಗಭೂಷಣ ಶಿವಯೋಗಿಗಳು:— ಇವರು ಆಂಧ್ರ ದೇಶದಲ್ಲಿ ನೈಜಾಮ ಇಲಾಖೆಯಲ್ಲಿರುವ ಚತ್ರಾಘಬ ಜಿಲ್ಲೆಯ ಪಟ್ಲೂರ ತಾಲೂಕಿಗೆ ಸೇರಿದ ಪೂರ್ವದೆಯಬಲ್ಲಿ ೧೮೩೮ರಲ್ಲಿ ಜನಿಸಿದರು. ಇವರ ತಂದೆ ತಾಯಿಗಳು ವೀರಯ್ಯ ನೀಲಾಂಬೆಯವರು. ೭ನೇ ವರ್ಷದಲ್ಲಿ ದೀಕ್ಷೆ ಮಾಡಿದರು. ಮುಂದೆ ೧೧ನೇ ವಯಸ್ಸಿಗೆ ತಂದೆ ತಾಯಿಗಳನ್ನು ತ್ಯಜಿಸಿ ತಮ್ಮ ಶಿವತೇಜ ಶಿವಾನುಭವ ಸೂಸುವ ಮುಖವುಳ್ಳವರಾಗಿ ಬಸವ ಮಾರ್ಗವೇ ನಿಜಮುಕ್ತಿಗೆ ಹೆದ್ದಾರಿಯೆಂದು ತಿಳಿದು ಅವರ ವಚನಗಳಲ್ಲಿ ತುಂಬಿರುವ ಅನುಭವವನ್ನು ಸವಿದು ಸ ಾವದಿಂದ ಬಳಲುತ್ತಿರುವ ಮಾನವರಿಗೆ ಆ ಅನುಭವಾಮೃತವನ್ನು ನೀಡಿದರು. ಜಿನ್ನು ಬಸವಣ್ಣನವರ ವಚನಗಳನ್ನು ಕಟ್ಟಿಕೊಂಡು ಬಸವನ ಭಕ್ತಿ ಬೀರಲು ಭಕ್ತಿಜ್ಞಾನ ವೈರಾಗ್ಯಯುತವಾಗಿ ಮೋಹವನ್ನು ತೊರೆದು ಬಸವನ ಭಕ್ತಿಯನ್ನೇ ಕೊಂಡಾಡುತ್ತ 'ದೂಷಣೆ ಮಾಡಲಿದೊಂದೆ ಜನರತಿ ಭೂಷಣೆ ಮಾಡಲಿಹೊಂದೆ' ಎಂಬಂತೆ ಜನರ ದೂಷಣೆ ಭೂಷಣೆ ಒಂದೇ ಎಂದು ಭಾವಿಸಿ ೨೦-೨೫ ವರ್ಷ ಅವಿಶ್ರಾಂತವಾಗಿ ಸಂಚರಿಸಿದರು. ಕಡೆಗೆ ಇಳಕಲ್ಲ ಆಪ್ಪನಗಡ ಹುನಗುಂದದಲ್ಲಿ ವಾಸಮಾಡುತ್ತಿದ್ದು ರಾಯಚೂರ ಜಿಲ್ಲೆ ಲಿಂಗಸೂರ ತಾಲೂಕ ಸಂತೇಕೇಲೂರಿನಲ್ಲಿ ೧೮೮೪ರಲ್ಲಿ ಲಿಂಗೈಕ್ಯರಾದರು. ಶೈವಜ್ಞಾನಪ್ರದೀಪಿಕೆ ಎಂಬ ಗ್ರಂಥವನ್ನೊಂದು ರಚಿಸಿದ್ದಾರೆ ಇವರ ಹಾಡುಗಳಲ್ಲಿ ತತ್ವಕ್ಕಿಂತ ಭಕ್ತಿ ಹೆಚ್ಚು, ಸಂದರ್ಭ ಸನ್ನಿವೇಶಗಳಿಗನುಸರವಾಗಿ ಭಾವೋದ್ರೇಕದಿಂದ ಹೊರಹೊಮ್ಮಿದ ಘನಮಠರ ಹಾಡುಗಳು ಅವರ ಸುಂದರ ಜೀವನವನ್ನು ವ್ಯಕ್ತ

ಪಡಿಸುತ್ತವೆ. ಗಾಯನ ಕಲೆಯಲ್ಲಿ ಒಳ್ಳೇ ಕುಶಲರು. 'ಘನಮಠ' ಎಂಬ ಮುದ್ರಿಕೆಯಿಂದ ಹಾಡುಗಳನ್ನು ರಚಿಸಿದ್ದಾರೆ.

(೩) ನಿಜಗುಣ ಶಿವಯೋಗಿಗಳು:— ಭರತ ಖಂಡದ ವಿಭೂತಿಪುರುಷರಲ್ಲಿ ಇವರೊಬ್ಬರು ಮೈಸೂರ ದೇಶದ ಎಲ್ಲೆಯ ಶ್ರೀ ಶಂಭುಲಿಂಗನ ಬೆಟ್ಟದ ಅಕ್ಕಪಕ್ಕದ ನಾಡುಗಳಿಗೆ ಅರಸನಾಗಿದ್ದು ಗೃಹಸ್ಥಾಶ್ರಮದಲ್ಲಿಯೇ ಸದ್ಗುರು ಮುಖೇಣ ಜ್ಞಾನೋಪದೇಶ ಹೊಂದಿ, ವಿದ್ಯಾ ಸಂಪತ್ತು ತೇಜಸ್ವಿನಿಂದ ಕೂಡಿದ್ದರು. ಕೆಲವು ಕಾಲದ ನಂತರ ವಿರಕ್ತಾಶ್ರಮವನ್ನು ಸ್ವೀಕರಿಸಿ ಲೋಕೋದ್ಧಾರಮಾಡುವ ಇಚ್ಛೆಯಿಂದ (೧) ಅರವತ್ತುಮೂರು ಮಂದಿ ಪುರಾತನರ ಸ್ತೋತ್ರ (೨) ಕೈವಲ್ಯಪದ್ಧತಿ (ಇದರಿಂದಲೇ ನಾನು ಆಯ್ದುಕೊಂಡದ್ದು) (೩) ಪರಮಾನುಭವ ಬೋಧೆ (೪) ಪರಮಾರ್ಥಗೀತೆ (೫) ಅನುಭವಸಾರ (೬) ವಿವೇಕ ಚಿಂತಾಮಣಿ (೭) ಪಾರಮಾರ್ಥ ಪ್ರಕಾಶಿಕೆ ಎಂಬ ಕನ್ನಡ ಗ್ರಂಥಗಳನ್ನೂ, (೮) ದರ್ಶನಸಾರ (೯) ಆತ್ಮತರ್ಕ ಚಿಂತಾಮಣಿ ಎಂಬ ಸಂಸ್ಕೃತ ಗ್ರಂಥಗಳನ್ನೂ ರಚಿಸಿರುವರು. ಇವರ ಕಾಲ ಇನ್ನೂ ನಿಶ್ಚಿತವಿಲ್ಲ. ಕೆಲವರು ಮುಪ್ಪಿನಾರ್ಯರ ಸಮಕಾಲೀನರೆಂದೂ ಇವರಿಬ್ಬರ ಗವಿಗಳು ಶಂಭುಲಿಂಗನ ಬೆಟ್ಟದಲ್ಲಿ ಅಕ್ಕಪಕ್ಕದಲ್ಲಿರುವವೆಂದೂ ಇವರ ಕಾಲವನ್ನು ಸುಮಾರು ಕ್ರಿ. ಶ. ೧೫೦೦ ಎಂದು ತಿಳಿಯುತ್ತಾರೆ. ಇವರ ಗ್ರಂಥಗಳು ಪಂಡಿತ ಪಾಮರರಿಗೆ ಸ್ತ್ರೀ ಪುರುಷರಿಗೆ ಹಿತಕರವಾಗಿ ಮೃದು ಮಾಧುರ್ಯ ಸುಂದರ ಸರಳ ಶೈಲಿಯಿಂದ ಕೂಡಿದ್ದು ಮನೋಹರವಾಗಿವೆ. ಇವರ ಹಾಡುಗಳ ಮುದ್ರಿಕೆ 'ಶಂಭುಲಿಂಗ.'

(೪) ಮುಪ್ಪಿನ ಷಡಕ್ಷರಿ ಸ್ವಾಮಿಗಳು:— ಸಮಗ್ರವಾದ ಸಾದ್ಯಂತವಾದ ಜೀವನ ಚರಿತ್ರೆ ದೊರೆಯದಿದ್ದರೂ ಇವರ ಭಕ್ತಿಪರ ವೈರಾಗ್ಯ ಬೋಧಕ ಹಾಡುಗಳಲ್ಲಿ ಇವರ ನಿರ್ಮಲ ವ್ಯಕ್ತಿತ್ವವು ಸ್ಫುಟವಾಗಿ ರೂಪುಗೊಂಡಿದೆ. ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳು ಹೇಳುವಂತೆ ಇವರು ನಿಜಗುಣರ ಸಮಕಾಲೀನರೆಂದೂ ಶಂಭುಲಿಂಗನ ಬೆಟ್ಟದಲ್ಲಿಯೇ ಇವರ ಗವಿ ಇದೆಯೆಂದು ಶಿವಾನುಭವದಲ್ಲಿ ಬರೆದಿದ್ದಾರೆ. ಇವರ ಮೊದಲನೇ ಹಾಡಿನಂತೆ ಯರಗಂಬಳಿಯ ಸಿದ್ಧಲಿಂಗರು ಇವರಿಗೆ ಶಿವತತ್ವಾನುಭವವನ್ನು ಅರುಹಿದ ಗುರುಗಳೆಂದು ತಿಳಿಯುತ್ತದೆ. ಇದಕ್ಕಿಂತ ಹೆಚ್ಚಿಗೆ ಸಂಗತಿ ಇವರ

ಜೀವನ ವಿಷಯಕ್ಕೆ ತಿಳಿದಿಲ್ಲ. ಆದರೆ ಇವರ ಉಜ್ವಲವಾದ ವ್ಯಕ್ತಿತ್ವವು ಇವರ ಹಾಡುಗಳಲ್ಲಿ ತುಂಬಿದೆ. ತಾದಾತ್ಮ್ಯ, ತನ್ಮಯತೆ, ಪರವಶತೆ, ಸಮರಸ ಭಾವ ವೈರಾಗ್ಯ, ಉಜ್ವಲತೆ, ಭಕ್ತಿಯ ಆವೇಶ ಇವರ ಹಾಡುಗಳ ಹೆಗ್ಗುರುತುಗಳು. ಇವರ ಜೀವನದಂತೆ ಇವರ ಶೈಲಿಯೂ ಸರಳವಿದೆ. ಇವರ ತತ್ವಗಳು ಜಗತ್ತಿಗೇ ಮಾನ್ಯವಾದವುಗಳು. ಆದ್ದರಿಂದ ಅವು ಸಮುದ್ರದಷ್ಟು ವಿಶಾಲ. ಇವರು "ಷಡಕ್ಷರಿಲಿಂಗ" ಎಂಬ ಮುದ್ರಿಕೆಯಿಂದ ಹಾಡುಗಳನ್ನು ರಚಿಸಿದ್ದಾರೆ.

(೫) ಬಾಲಲೀಲಾ ಮಹಂತ ಶಿವಯೋಗಿಗಳು:— ಇವರು ವಿಜಾಪುರ ಜಿಲ್ಲಾ ಆಲಮಟ್ಟಿಯಲ್ಲಿ ಜನಿಸಿದರು. ಆ ಮೇಲೆ ಲಿಂಗನಾಯಕನಹಳ್ಳಿ ಚನ್ನವೀರ ಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ವಿರಾಗಿಯಾಗಿ ದೇಶವನ್ನು ಸಂಚರಿಸುತ್ತ ತಮ್ಮ ಬಾಲಲೀಲೆಯಿಂದ ಜನರನ್ನು ಮುಗ್ಧಗೊಳಿಸುತ್ತ ಗದಗ ತಾಲೂಕ ಮುಳಗುಂದ ಗ್ರಾಮದಲ್ಲಿ ನೆಲಸಿದರು. ಆಗಿನ ಕಾಲದ ಮೈಸೂರ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅವರ ಅಪೇಕ್ಷೆಯ ಮೇರೆಗೆ ದರ್ಶನವನ್ನಿತ್ತು ಅವರ ಧನಕನಕ ವಸ್ತುಗಳನ್ನು ತಿರಸ್ಕರಿಸಿ ಕಂಬಳ ಸೊರಟೆಯನ್ನಷ್ಟೇ ಸ್ವೀಕರಿಸಿದರು. (ಈಗಲೂ ಮುಳಗುಂದ ಮಠದಲ್ಲಿದೆ) ಇವರ ಲೀಲೆ ಅದ್ಭುತವಾದವುಗಳು. ಅಂತರಾತ್ಮ ಸ್ಫುರಿಸಿದಾಗ ಹೊರ ಹೊಮ್ಮಿದ ಹಾಡುಗಳನ್ನು ನಿಂತುಕೊಂಡೇ ಮಠದ ಬೋದು ತೊಲೆಯ ಮೇಲೆ ಬರೆಯುತ್ತಿದ್ದರೆಂದು ಪ್ರತೀತಿ ಇದೆ. ತಲೆ ತುರಿಸಿ ಬರೆಯದೇ ಕೇವಲ ಸ್ಫೂರ್ತಿಯಿಂದ ಬರೆದವುಗಳು. ಇವರ ಶೈಲಿಯಲ್ಲಿ ತತ್ವವಿವೇಚನೆಯ ಗಡಚುಯಿಲ್ಲ, ಸಾಮಾನ್ಯರಿಗೂ ಓದಲರ್ಹವಿದೆ. ಇವರು ೧೮೩೩ರಿಂದ ೧೮೫೯ರ ವರೆಗೆ ಬಾಳಿದರು. ಇವರು 'ಮಹಂತ' ಎಂಬ ಮುದ್ರಿಕೆಯನ್ನಿಟ್ಟು ಪದ್ಯಗಳನ್ನು ರಚಿಸಿರುವರು.

(೬) ಬಸವಲಿಂಗ ಶರಣರು:— ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿ ತಾಲೂಕ ಮೈಲಾರ ಕ್ಷೇತ್ರದಲ್ಲಿ ವ್ಯಾಪಾರಸ್ಥರ ಮನೆಯಲ್ಲಿ ಹುಟ್ಟಿದರು. ಇವರು ತಮ್ಮ ಗುರುಗಳ ಹೆಸರನ್ನೇ ಹೇಳ ಹೊರಟದ್ದರಿಂದ ತಂದೆ ತಾಯಿಗಳ ಹೆಸರು ಗೊತ್ತಿಲ್ಲ. ಹೊನ್ನು ಹೆಣ್ಣು, ಮಣ್ಣು ಮಾಯೆಯನ್ನದೆ ಮನದ ಮುಂದಣ ಆಶೆಯನ್ನು ತೊರೆದು ಗುರುಲಿಂಗಜಂಗಮದಲ್ಲಿ ನಂಬುಗೆಯಿಟ್ಟು

ಮನೆಗೆ ೫ ಮೈಲಾದರೂ ಮನಕ್ಕೆ ಹತ್ತರವಿದ್ದ ಲಿಂಗನಾಯಕನ ಹಳ್ಳಿಗೆ ಬಂದು ಶ್ರೀ ಚನ್ನವೀರ ಸ್ವಾಮಿಗಳಲ್ಲಿಯೇ ಇರಹತ್ತಿದರು. ಇವರು ಗುರುಗಳ ಅನುಗ್ರಹಕ್ಕೆ ಪಾತ್ರರಾಗಿ ಅವರ ಅಂಕಿತದಲ್ಲಿಯೇ ಷಟ್‌ಸ್ಥಲ ಸಿದ್ಧಾಂತ ಗುರುಕರುಣ ತ್ರಿವಿಧಿ, ಶಿವಾನುಭವ ದರ್ಪಣ, ಲಿಂಗಪೂಜಾ ವಿಧಾನ ಎಂಬವುಗಳನ್ನು ರಚಿಸಿದ್ದಾರೆ. ಇವರ ಹಾಡುಗಳನ್ನು ಶಿವಾನುಭವ ದರ್ಪಣದಿಂದ ಆಯ್ದುಕೊಂಡಿದ್ದೇನೆ. ಇವರ ಲಿಂಗಪೂಜೆ ಕೋಣೆಯನ್ನು ಈಗಲೂ ನೋಡಬಹುದು. ಹೊರಗೆ ಗದ್ದಲ ಹಾಕಿದರೆ ಒಳಗೆ ಕೇಳುವದಿಲ್ಲ. ಇವರು ವೀರಶೈವ ಸಂಸ್ಕೃತಿಗೆ ಅಪಾರ ಸಂಪತ್ತನ್ನು ಗಳಿಸಿದರು. ಇವರ ಹಾಡುಗಳ ಮುದ್ರಿಕೆ 'ಚನ್ನವೀರೇಶ'.

(೭) ಆಧುನಿಕರು:– ಅಥಣಿ ಗಚ್ಚಿನ ಮಠದ ಮುರುಘೇಂದ್ರ ಮಹಾ ಶಿವಯೋಗಿಗಳ ಮೇಲಿನ ಭಕ್ತಿ ಪರವಶದ ಹಾಡುಗಳು ಈಗಿನ ಅನೇಕ ಕವಿಗಳಿಂದ ಬರೆಯಲ್ಪಟ್ಟಿವೆ. ಅವರ ಹೆಸರು ಹೇಳಲು ಮತ್ತು ಅವರ ಶೈಲಿಯನ್ನು ವಿಮರ್ಶಿಸಲು ಸ್ಥಳವಿಲ್ಲ. ಕಾರಣ ಒಟ್ಟಿನ ಮೇಲೆ ಅವರ ಪದ್ಯಗಳು ಸಾಧಾರಣ ನಿತ್ಯ ಜೀವನದ ತತ್ವಾನುಭವಗಳಿಂದ ಸರಳ ಶೈಲಿಯಿಂದ ಕೂಡಿವೆ.

ಇದಕ್ಕೂ ಹೆಚ್ಚಿನ ಕೈವಲ್ಯಕಾರರ ಚರಿತ್ರೆ ಅವರ ಹಾಡುಗಳ ವಿಮರ್ಶೆ ಬೇಕಾದಲ್ಲಿ ಅವರವರ ಮೂಲ ಪ್ರತಿಗಳಿಂದ ಓದಿ ತಿಳಿದುಕೊಳ್ಳಬೇಕು. ಕೊನೆಯದಾಗಿ ಮುನ್ನುಡಿ ಬರೆದುಕೊಟ್ಟ ಪಂಡಿತ ನಾಗಭೂಷಣ ಶಾಸ್ತ್ರಿಗಳಿಗೂ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಮೃತ್ಯುಂಜಯ ಮುದ್ರಕರ ಒಡೆಯರಿಗೂ ತುಂಬ ಋಣಿಯಾಗಿದ್ದೇನೆ. ಈ ಪುಸ್ತಕವಲ್ಲಿ ಕಣ್ಣುತಪ್ಪಿ ಅಲ್ಲಲ್ಲಿ ಅಚ್ಚಿನ ದೋಷಗಳಿರಬಹುದು. ಅವನ್ನು ಮುಂದಿನ ಆವೃತ್ತಿಯಲ್ಲಿ ಓದುಗರ ಸಲಹೆ ಸೂಚನೆಯಿಂದ ಸುಧಾರಿಸಿ ಪ್ರಕಟಿಸುವೆವು.

ಜಿ. ಪಿ. ಗುರುಪಾದದೇವರಮಠ,

ಬಿ. ಎ. (ಆನರ್ಸ)

ಸಂಗ್ರಾಹಕ.

———

ಪ್ರಕಾಶಕರ ನುಡಿ



"ಭಕ್ತಿಗೀತೆ" ಗಳ ಪ್ರಥಮ ಮುದ್ರಣವು ೧೯೫೦ ರಲ್ಲಿ ನಡೆಯಿತು. ಕೇವಲ ಎರಡು ವರ್ಷಗಳ ಅವಧಿಯಲ್ಲಿ ಪ್ರಥಮಾವೃತ್ತಿಯ ಎಲ್ಲ ಪ್ರತಿಗಳು ಮುಗಿದು ಹೋಗಿ ಈ ದ್ವಿತೀಯಾವೃತ್ತಿಯ ಕಾರ್ಯವನ್ನು ಕೈಗೊಳ್ಳಬೇಕಾಯಿತು. ಇದನ್ನು ಅವಲೋಕಿಸಿದಾಗ ಭಕ್ತಿರಸವನ್ನು ಬೀರುವ ಹಾಡುಗಳು ಜನತೆಗೆ ಎಷ್ಟು ರುಚಿಸುತ್ತಿವೆ? ನಿತ್ಯವೂ ಅವನ್ನು ಹಾಡಿ ಆನಂದಪಡಲು ಜನತೆ ಅದೆಷ್ಟು ಇಚ್ಛಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ.

ಲೌಕಿಕದಲ್ಲಿ ನೊಂದ ಮನಸ್ಸಿಗೆ ಶಾಂತಿಯನ್ನು ಈಯುವ ಶಕ್ತಿ ಈ ಆಧ್ಯಾತ್ಮಿಕ ಹಾಡುಗಳಲ್ಲಿದೆ. ನೊಂದ ಮನಸ್ಸು ನಲಿಯಲು, ಧರ್ಮಶ್ರದ್ಧೆ ಜಾಗ್ರತವಾಗಲು, ನೈತಿಕ ಪಥದಲ್ಲಿ ನಡೆಯಲು ಈ ಹಾಡುಗಳು ಪ್ರೇರಿಸುವಂತಾದರೆ ಈ ಪುಸ್ತಕ ಪ್ರಕಟನೆಯ ಕಾರ್ಯ ಸಾರ್ಥಕವಾಯಿತೆಂದು ಬಗೆಯುತ್ತೇವೆ.

ಧಾರವಾಡ
೮-೧೦-೧೯೫೨

—ಪ್ರಕಾಶಕರು



— || ಶ್ರೀ ಶಿವಯೋಗೀಶ್ವರ ಪ್ರಸನ್ನ ||

ಭಕ್ತಿ ಗೀತೆಗಳು



೧

ಧರೆಯು ಸುಖದ ಭೋಗವೆನಗೆ ಬರಿದು ಹೋಗಲಯ್ಯ ಶಿವನೆ | ಚರಣ ಕಮಲದಲ್ಲಿ ಮನವು ಮಗ್ನವಾಗಲಿ ||ಪಲ್ಲ|| ಒಡೆದ ಗಡಿಗೆ ಹರಿದ ಜೋಳ್ಗಿ ಎಡದ ಕೈಯ ಮುರಿದ ಕೋಲು | ಹಿಡಿದು ಊರನೆಲ್ಲ ತಿರಿದು ತಂದು ನೋಡಲು || ಒಡಲಿಗಾಗದಂತೆ ಮಾಡು ಪಾದಸಿಯೊಳಗೆ ಸುಖದ ವೃತ್ತಿ | ಒಡೆಯ ಶಿವನ ಮರೆದು ಭವಕೆ ಬೀಳಲಾರೆನು ||೧|| ಹಳಿದು ಚಿಂದಿ ರಗಟೆಗಳನು ಹೊಲಿದು ಗಂಟನಿಕ್ಕಿ ಹೊದೆದು | ಚಳಿಯು ತಾಗದಂತೆ ಕಡೆಗೆ ಸಾಲದೆಂದರೆ || ಕಳೆಯುತಿರಲು ಮದರೊಳರ್ಧ ಇಲಿಗಳೆಲ್ಲ ಒಯ್ಯುತಿರಲಿ | ಒಲಿದು ಶಿವನ ಚರಣ ನೆನೆವುದಿಂತಲಾಗದು ||೨|| ಊರನೆಲ್ಲ ತಿರಿದು ಒಡಲ ಪೂರಸುಂಬೆನೆನಲು ಮನೆ | ಯಾರಲ್ಲಿ ತಿರಿದುದೆಲ್ಲ ಚೆಲ್ಲಿ ಹೋಗಲಿ || ಬೀದಿಯಾಚೆ ಪುರದ ತಿಂಡಿ ಯಾರು ಇಲ್ಲ ಎನಲು ಎನಗೆ | ಮಾರಹರನ ನೆನೆವುದಿಂತುಂಟಿಲ್ಲದಾಗದು ||೩|| ಒಡೆಯರುಗಳ ಮಠಕೆ ಬರಲು ಜಡಿದು ಜರಿದು ನೂಕಲಿನ್ನು | ಒಡನೆ ಯೋಗಿವರರುಗಳ ತೀಳನಲ್ಲಿ ಸೇರಲು || ಕಡೆಗೆ ಆಪ್ತರವರು ತಾಳು ಗುಡಿಗೆ ಬರಲು ನೋಡುತಿರಲು | ಒಡೆಯ ಶಿವನ ನೆನೆವುದಿಂತುಂಟಿಲ್ಲದಾಗದು ||೪|| ಅಂಗಳದೊಳು ನಿಲ್ಲಲಿಕ್ಕೆ ಹಂಗಿಗರನು ಕಳ್ಳನೆಂದು | ಹಿಂಗಿ ಹೋಗು ಕಡೆಗೆ ಎಂದು ನುಡಿಯುತಿಲ್ಲದೆ || ಹಿಂಗೆಯಾಗದನಕ ಜನರ ಸಂಗಬಿಡದು ಷಡಕ್ಷರಿಯ | ಲಿಂಗದಡಿಯ ನೆನೆವುದಿಂತುಂಟಿಲ್ಲದಾಗದು ||೫||

೨

ಕಾಡಲೇಕೆ ನರರುಗಳನು ಬೇಡಿ ಬಳಲಲೇಕೆ ಮನವೆ | ರೂಢಿಗೀಶ ನಮಗೆ ದೈವವಾಗಿ ಇರುತಿರೆ ||ಪಲ್ಲ|| ಮೃಡನ ಪೂಜೆ ಮಾಡುವುದಕೆ

ಮಡುವಿನಗ್ಗವಣಿಗಳುಂಟು । ಅಡವಿಯಲ್ಲಿ ಕಾಡಪತ್ರಿ ಪುಷ್ಪವುಂಟಿಲ್ಲೆ ॥ ಪಡಲಿಗನ್ನ ದೂಪದರುಂಟು ಗುಡಿಗಳುಂಟು ಶಯನಕೆಮಗೆ ! ಒಡೆಯರುಗಳು ಬಿಸುಟಿವರೆಮೆ ಶೀತಕುಂಟಿಲ್ಲೆ ॥೧॥ ಬುದ್ಧಿಯನ್ನು ಹೇಳುವುದಕೆ ಆದ್ಯರುಗಳ ವಚನವುಂಟು । ಉದ್ಧರಿಸುವಡೆಮಗೆ ಶಿವನ ಮಂತ್ರವುಂಟಿಲ್ಲೆ ॥ ಅರ್ಧನಾರಿ ಎಂಬ ದೈವವಿದ್ದು ಬಳಿಕ ಕರದೊಳೆಮಗೆ ಹೊದ್ದಲೇಕೆ ನರರ ಆಶೆ ಮಾಡೆನಕ್ಕಟಾ ॥೨॥ ಮಿಗಿಲು ಮನೆಗಳೇತಕೆಮಗೆ ಅಗಲಲೇಕನನುಭಾವಿಗಳನು । ಜಗದೊಳೆಮಗೆ ಹಲವು ಕೋಟಲೆಗಳೇತಕ್ಕೆ ॥ ಸೊಗಸು ಷಡಕ್ಷರಿಯ ಲಿಂಗ ಅಗಲದಮ್ಮ ಕರದೊಳಿರಲು ಬೆಗಡುಗೊಳ್ಳಲೇಕೆ ಮನವೆ ನರರ ಮಾಳ್ಕೆಯಿಂ ॥೩॥

೩

ಕೋಗಿಲೇ ಚಲ್ವ ಕೋಗಿಲೇ ಮುದ್ದು ಕೋಗಿಲೇ ಜಾಣ ಕೋಗಿಲೆ ।ಪ। ಹಿಂದೆ ತಪದೊಳೀಶ ನೊಂದಿರು ತಿರಲಿಚ್ಚು ಚಂದಕಾಮನ ಬಿಟ್ಟು ಕೋಗಿಲೇ। ಬಂದು ಬೇಗದಿ ಬಾಲೇಂದುಧರನ ಕೂಡಿ ಕುಂದಪೆ ನೀ ಬಾಳು ಕೋಗಿಲೇ ॥೧॥ ಮನುಮುನಿಗಳ ನೀತಿಯನು ಕೆಡಿಸುವ ದುಷ್ಟ ಮನಸಿಜನನು ಮೀರಿ ಕೋಗಿಲೆ । ಘನಪದವನು ತನ್ನ ನೆನೆವರಿಗೊಲಿದೀವ ಧನದ ಮಿತ್ರನ ಸಾರು ಕೋಗಿಲೆ ॥೨॥ ನಲ್ಲರನಗಲಿದ ಮೆಲ್ಲೆದೆಯರ ಕೊಲ್ವ ಫುಲ್ಲಶರನ ಪಿಂಗಿ ಕೋಗಿಲೆ । ಎಲ್ಲ ಜೀವರಿಗೆರವಿಲ್ಲದೊಲವನೀವ ಭಲ್ಲಧವನೊಳಿರು ಕೋಗಿಲೆ ॥೩॥ ಮಂಗಳರವದೊಳನಂಗನ ಬಣ್ಣಿಸೆ ಭಂಗವಲ್ಲವೆ ನೋಡು ಕೋಗಿಲೇ ॥೪॥ ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ ಪರಪುಟ್ಟನೆಂಬರು ಕೋಗಿಲೇ । ಧರೆಗೆ ಜನಕನಾದ ಗುರು ಶಂಭುಲಿಂಗನ ಚರಣ ಪಲ್ಲವ ಪಿಡಿ ಕೋಗಿಲೇ ॥೫।

೪

ತೋರದಯ್ಯಾ ಸುಖ ತೋರದಯ್ಯಾ ಸುಖ । ಬೇರೆ ಬೇರೆ ಭಾವಿಸಿ ಬ್ರಹ್ಮಜ್ಞಾನವಂದಿಲ್ಲದವಗೆ ॥ಪಲ್ಲ॥ ನಿಗಮಾಗಮವನೋದಿ ಸುಗುಣಸಂತತಿಗೂಡಿ । ಜಗಮೊಲವಾಂತು ತನ್ನ ಬಗೆಯನಾರೈಯದಿರೆ ॥೧॥ ಕಪಟವಳಿದು ಕೋಟಿ ಜಪವನೆಸಗಿ ಬಲು । ತಪವನೆ ಮಾಡಿ ತತ್ವದುಪದೇಶ ಪಡೆಯ

ಶ್ವೈರ್ಯ ||೨| ಓಂಗವಣಿಮಾದಿ ಸಿದ್ಧಿಯುಂಗವಾಗಿ ಸರ್ವಲೋಕ | ಡಂಗುರವೆನಿಸಿ ಶಂಭು ಲಿಂಗವನುವರಿಯುದಿಕೆ ||೩||

೫

ಹರಪೂಜೆ ಗುರುಸೇವೆ ವರ ಪುಣ್ಯವಿಲ್ಲದೆ ಬರಿದೆ ಸುಖಭೋಗ ದೊರಕುವದುಂಟೆ ಆತ್ಮಾ ||ಪಲ್ಲ|| ಹಣವಿದ್ದಾಗಲೆ ಭಕ್ತಿ ಸಣವಿದ್ದಾಗಲೆ ಸೇವೆ ಗುಣವಿದ್ದಾಗಲೆ ಮಾಡಿ ಮುಕ್ತಿ ಪಡೆಯಾತ್ಮಾ || ಒಣ ಮಾತಾಡುವರೆಲ್ಲ ಸಣ ಹರಿದು ಹೋಗುವರೆ | ತ್ರಿಣಯನೊಲಿಸುವರು ಬಹು ಶರಣರಾತ್ಮಾ |೧| ಹಿಂದಿನ ಪುಣ್ಯವನು ಇಂದುಂಡು ಪೋಪೆಯಾತ್ಮಾ | ಇಂದಿನ ಪುಣ್ಯವನು ಮುಂದುಂಡು ಪೋಪೆಯಾತ್ಮಾ | ಬಂಧನಕ್ಕೀಡದಕೆ ಇಂದು ಧರಣಿಯಾತ್ಮಾ | ಸಂದೇಹ ವಿಲ್ಲವು ತಿಳಿಕೊಂಡ್ಯಾ ಆತ್ಮಾ |೨| ಹರಿಅಜಸುರರೆಲ್ಲ ಶರೀರದಂಡನೆ ಮಾಡಿ | ಪರಮಾತ್ಮನೊಲಿಸಿದರು ಯುಗಯುಗದಲ್ಲಿ ಆತ್ಮಾ | ನರಪಾಪ ಪುಣ್ಯವನು ನರರ ನೆರಗಲಿ ಹಾಕಿ | ಗುರುಮಹಂತ ಲಿಂಗತಾ ಮರೆಯಾಗಿರುತಿಹ ನಾತ್ಮಾ ||೩|

೬

ಜೋಲಿಜೋಲಿಯು ಪರ ಬ್ರಹ್ಮದ ಶಿಶುವೇ | ಮಾಡಿಸು ಧ್ಯಾನದ ಮಲ್ಲಿಗೆ ಹೂವಿನ ||ಪಲ್ಲ|| ಅಷ್ಟದಳದ ಕಮಲ ತೊಟ್ಟಿಲೊಳಗೆ ಮಲಗಿ | ಶ್ರೀಕಷ್ಟ | ಸದ್ಗುಣ ಹಸ್ತ ಪದಗಳನಾಡುತ || ನೆಟ್ಟನೆ ನಯನ ಭ್ರೂಮಧ್ಯದ ಜ್ಯೋತಿಯು ದಿಟ್ಟಿಸಿ ನೋಡುತ ಕಿಲಕಿಲ ನಗುತಿಹ |೧| ಪ್ರಣವ ಘೋಷದ ನಾದ ಸ್ವರವೇಣಿನಾದವು | ಝಣಝ ಝಣರ ಕಾಲಿಗೆಜ್ಜೆ ತಾಳ ಮೃದಂಗ ಭೇರಿ || ಘಣಲ್ ಘಣಲ್ ಎಂಬುವ ಘಂಟೆ ನಾಗಸ್ವರದ| ಬಣ್ಣಿಸಲಿವ ಶಿವ ಸುಖಮಯ ಕಂದನ ... ಘಲುಪದಂಗಳ ಮೀರಿ ಶಿವಪದವೆಂಬುವ | ಹೊಳೆವ ಮೇಲುಪ್ಪರಿಗೆ ಮೇಲೆ ಕುಳಿತು ಮಾಯಾ || ಕಲಿಯುಗ ನರ್ತಕಿ ನಾಟ್ಯವ ನೋಡುತ | ನಲಿವ ಮರುಳಿಸ ಮಹಾಂತ ಲಿಂಗ ಶ್ರೀ ಬಾಲಕ ||೨||

೭

ಲಿಂಗಪೂಜೆಯ ಮಾಡಿರೋ ನಿಮ್ಮೊಳು ಪ್ರಾಣಲಿಂಗಪೂಜೆಯ ಮಾಡಿರೋ | ಗಂಗೆಯಮುನೆಗಳ ಸಂಗಮದೊಳು ಮಿಂದು ಶೃಂಗಾರ ಕದುಪರಿ ರಂಗಮಂಟಪದೊಳು ||ಪಲ್ಲ|| ವರಭಕ್ತಿ ಜಲವನೀಡಿ ಮಜ್ಜನ

ಗೈದು ವಿರತಿ ಗಂಧವನೇ ತೀಡಿ । ಕರ್ಮೇಂದ್ರಿಯಗಳೆಂಬ ಮರುಗುವಕ್ಷತೆ ಇಟ್ಟು । ಅರಿವೆಂಬ ನಿರ್ಮಲ ಸರಸ ಪುಷ್ಪವ ಸೂಡಿ ॥೧॥ ಹರುಷವೆಂಬುವ ಧೂಪವ ಸಮರ್ಪಿಸಿ ಪರಬಿಂದು ರುಚಿ ದೀಪವ । ಸಿರಡೆತ್ತಿ ಪರಿಪೂರ್ಣ ನೈವೇದ್ಯವನು ಮಾಡಿ॥ ಮೆರೆವ ತ್ರಿಗುಣವೆಂಬ ವರ ತಾಂಬೂಲವ ಕೊಟ್ಟು ॥೨॥ ಕರದಿಷ್ಟಲಿಂಗವಿದೇ ಶರೀರದಲ್ಲಿ ಪರವಸ್ತು ತಾನಾಗಿಯೇ । ಹೊರ ಒಳಗೆರಡೆಂಬ ದರಿದರಿವನೆ ಮೀರಿ ॥ ಗುರುಸಿದ್ಧನಂಘ್ರಿಯೋಳ್ ' ಜೀವೈಕಮಯವಾಗಿ ॥೩॥

೮

ಶರೀರವೆಂತೆಂಬುವ ಹೊಲವ ಹಸನ ಮಾಡಿ ಪರತತ್ವ ಬೆಳೆಯನೆ ಬೆಳೆದುಣ್ಣಿರೋ ॥ಪಲ್ಲ॥ ತಮಂಧವೆಂತೆಂಬ ಎರಡೆತ್ತುಗಳ ಹೂಡಿ ವಿಮಲ ಮಾನಸವ ನೇಗಿಲನೇ ಮಾಡಿ । ಮಮಕಾರವೆಂತೆಂಬ ಕರಿಕೆಯ ಕಳೆದಿಟ್ಟು । ಸಮತೆ ಎಂತೆಂಬ ಗೊಬ್ಬರವ ಚಲ್ಲಿ॥೧॥ ಗುರುವರನುಪದೇಶ ಎಂಬ ಬೀಜವ ಬಿತ್ತಿ ಮೆರೆವ ಸಂಸ್ಕಾರ ವೃಷ್ಟಿಯು ಬಲಿದಿ । ಅರಿವೆಂಬ ಪೈರನ್ನು ಬೆಳೆಸುತ್ತ ಮನಸುತರ್ಪ ॥ ದುರಿತ ದುರ್ಗುಣವೆಂಬ ಕಳೆಯ ಕಿತ್ತು ॥೨॥ ಸ್ಥಿರಮುಕ್ತಿ ಎಂತೆಂಬ ಧಾನ್ಯವ ಬೆಳೆದುಂಡು ಪರಮಾನಂದದೊಳು ದಣ್ಣನೆ ದಣಿದು । ಗುರುಸಿದ್ಧನಡಿಗಳಿಗೆರಗುತ್ತ ಭವವೆಂಬ । ಬರವನು ತಮ್ಮ ಸೀಮೆಗೆ ಕಳುಹಿ ॥೩॥

೯

ಬಸವಗಣಾಧಿಪತೇ ನಮೋಗುರು ಬಸವಗಣಾಧಿಪತೇ।ಅಸಮನಯನ ಸಮಯ ಶರಧಿ ವಿಮಗುರು ॥ಪಲ್ಲ॥ ನಿತ್ಯನಿರಾಮಯ ನಿರುಪಮ ನಿರ್ಗುಣ । ಪ್ರತ್ಸ್ಮನಿಜಯ ಪರಮಾರ್ಥಚರಿತ ಗುರು ॥೧॥ ಚರಲಿಂಗಾರ್ಪಿತ ಶರೀರ ಕರಣಭವ । ವರ ಕರುಣಾಕರ ಶರಣಸಮೇಳಾ ॥೨॥ ಭಕ್ತನಿಧಾನ ವಿರಕ್ತ ಸುಪೂಜಿತ । ಮುಕ್ತಿಯ ಘನಮತ ಕರ್ತೃಪರಮಗುರು ॥೩॥

೧೦

ಧ್ಯಾನವ ಮಾಡೋ ನಿಜಗುರು ಧ್ಯಾನವಮಾಡೋ । ಮಾನವ ನೀನತಿ ಮತಿಯುತನೆನಿಸುತೆ ॥ಪಲ್ಲ॥ ಜಪದೊಳಗನುದಿನ ನಗದೊಳಧಿಕವೆಂದು । ಪೊಗಳುವ ಶೃತಿಮತವಗಲದೆ ಮುದದೊಳು ॥೧॥ ವರಕರುಣದೊಳಡಿ

ಗೆರಗಿವ ವರಸ್ಮರ। ಹರನೆನಿಸುವ ಶರಣರಸುರ ಭೂಜನ ॥೨॥ ಮನು ಮುನಿ ಜನಸುರ ಗಣಕೆಗೆ ಮೊದಲಿಗ । ನೆನಿಸಿದನಘ ಶ್ರೀ ಘನಮಠವಾಸನ ॥೩॥

೧೧

ಕಾಮಕಾಂತಾರವ ಹೊಕ್ಕು ಬೇಟೆಯನಾಡಿ ಮಾಯಾ ಮೋಹದ ಮೃಗಗಳ ಕೊಲ್ಲಿರೋ ॥ಪಲ್ಲ॥ ಕೋಪವೆಂಬುವ ಹಿರಿಯ ಹುಲಿಗಳುಂಟು। ಪಾಪವೆಂಬ ಸೂಕರಗಳುಂಟು। ಚಾಪಲ್ಯ ಗುಣಗಳೆಂಬ ಚಿಂಕೆಗಳುಂಟು। ಕಾಪಟ್ಯವೆಂತೆಂಬ ನರಿಗಳುಂಟು ॥೧॥ ಸುಶಿವಸ್ವ ಸದಗಳೆಂಬ ಕೋಣಗಳುಂಟು । ಬರಿಯಾಡಂಬರವೆಂಬ ಕರಡಿಯುಂಟು । ಉರಿವ ಮತ್ಸರ ಬುದ್ಧಿ ಎಂಬ ಕೇಸರಿಯುಂಟು । ಮರೆವೆಂಬುವ ಗಜಗಳುಂಟು ॥೨॥ ಪರಮ ಸದ್ಭಕ್ತಿ ಎಂತೆಂಬ ಬಿಲ್ಲನೆ ಮಾಡಿ । ವಿರತಿಯೆಂತೆಂಬ ಸಿಂಜನಿಯ ಹೂಡಿ ॥ ಅರಿವೆಂಬ ಬಾಣದೊಳವನೆಚ್ಚು ಕೆಡಹುತ । ಗುರು ಸಿದ್ಧಸಂಸ್ಥಿ ಪಂಕಜಕೆರಗಿ ॥೩॥

೧೨

ಯೋಗಿಯ ಕಂಡಿರೇನೆ ಪರಶಿವ ಮಹಾಯೋಗಿಯ ಕಂಡಿರೇನೆ । ಆಗಮ ನಿಗಮಗೋಚರಪರ ಶಿವನಾಗಿ ॥ ತೂಗಾಡುತಿಹನು ಭಕ್ತರ ಮನೋಭಾವದೊಳ್ ॥ಪಲ್ಲ॥ ಗತಿಯ ಪಾಲಿಸು ಎನುತ ಭಕ್ತರಿಗೆಲ್ಲ ಸುತನಾಗಿ ಬಂದಿಹನು । ಅತಿಶಯ ಕೈಲಾಸ ಅಧಿಪತಿ ಈತನು । ಹತಮಾಡಿ ಕಾಮನ ಸತಿಯರೊಳ್ ನಲಿವನು ॥೧॥ ಸರ್ವಾಂಗ ಲಿಂಗಮಯನು ತಾನಾಗಿರುತಿಹನು ನಿರ್ಮಲದಿ । ಹರಿದಾಡುವ ಮನವನು ಹರಗೆ ಸಮರ್ಪಿಸಿ ॥ ಪರಶಿವಾನಂದ ಸಂಭ್ರಮದೊಳಗಿರುತಿಹ ॥೨॥ ನೆಲವನುಸ್ಮರಿಗೆ ಶಿಲಾ ರತ್ನಂಗಳ ಒಂದೇ ಮಾಡಿರುತಿಹನು । ಮಳೆಯೊಳು ತೊಯ್ಯದಾಗಸದಂತೆ ಮಹಾಂತಲಿಂಗ ಇಳೆಯ ಜನರ ಭಕ್ತಿ ಭಾವದೊಳಿರುತಿಹ ॥ ೩ ॥

೧೩

ಅನುಭವದಡಿಗೆಯ ಮಾಡಿ । ಅದಕ್ಕನುಭವಿಗಳು ಬಂದು ನೀವೆಲ್ಲ ಕೂಡಿ ॥ಪಲ್ಲ॥ ತನುವೆಂಬ ಭಾಂಡವ ತೊಳೆದು । ಕೆಟ್ಟ ಮನದ ಜಂಜಡವೆಂಬ ಮುಸುರೆಯ ತೊಳೆದು । ಘನವೆಂಬ ಮನೆಯನು ಬಳಿದು । ಅಷ್ಟವ್ಯಸನಗ ತ್ರಿಗುಣವೆಂಬ ಒಲೆಗುಂಡ ತರಿದು ॥೧॥ ವಿರತಿ ಎಂಬುವ ಮಡಿ

ಯುಟ್ಟು । ಪೂರ್ಣ ಹರಭಕ್ತಿ ಎಂತೆಂಬ ನೀರನೆಸರಿಟ್ಟು ॥ ಅರಿವೆಂಬ ಬೆಂಕಿಯ ಕೊಟ್ಟು । ಮಾಯಾ ಮರವೆಯೆಂಬುವ ಕಾಷ್ಟಗಳನೆಲ್ಲ ಸುಟ್ಟು ॥೨॥ ಪರವೆಂಬ ಸಾಮಗ್ರಿಗೂಡಿ । ಸಾರತರಮೋಕ್ಷವೆಂವೆಂಬ ಪಾಕವ ಪಾಡಿ ॥ ಹರಶರಣರು ಸವಿದಾಡಿ । ನಮ್ಮ ಗುರುಸಿದ್ಧ ದೇವನ ಚರಣವ ಪಾಡಿ ॥೩॥

೧೪

ಶ್ರೀಗುರು ವಚನುಪದೇಶವನಾಲಿಸಿ ದಾಗಳಹುದು ನರರಿಗೆ ಮುಕುತಿ ॥ಪಲ್ಲ॥ ದುರಿತಗರ್ವವನೊಲ್ಲದಿರು ಪುಣ್ಯವನೆ ಮಾಡು ಹರನಡಿ ಪಿಡಿದಾಂತರೊಡನಾಡು । ಕರುಣವಿರಲಿ ಜೀವರೊಳು ನೀತಿವಿದನಾಗು ॥ ಪೂರ್ವಾರ್ಜಿತಫಲವೆಂದು ಬೆಸಸುವಾ ॥೧॥ ನಿಂದಿಸಿ ನುಡಿಯದಿರಾರನು ಮನಸಿಗೆ ಬಂದಂತೆ ನಡೆಯಬಾರದಲ್ಲ ॥ ಕುಂದುವಡೆಯದಿರು ಕಾಮಾದಿಗಳನು ಜಯಿ । ಸೆಂದು ಕೈಪಿಡಿದನುಗ್ರಹಿಸುವಾ ॥೨॥ ಭವಮಾರ್ಗಗಲಸು ಪುಸಿಯ ದಿರೆಮರು ಬಾಡು ಕಬಿಯಲಂಜದಿರು ಸಂಪದವೊಳು ॥ ತವೆಮದನಳಿವಿರು ತತ್ವಸಂತತಿಯನು ವಿವರಿಸಿ ನೋಡೆಂದು ತಿಳಿಪುವ ॥೩॥ ಬಳಸದಿರವೃತ್ತವನು ಬಾಹ್ಯದಲಿ ನಿನ್ನೊಳಗೇಕೋ ಭಾವನೆಯೊಡಗೂಡು । ತಿಳಿಮು ಸಮಯ ನಿಷ್ಠೆಗಲಿ ವೇದವಿಧಭಕ್ತಿಗಳನಗಲದಿರೆಂದುಸುರುವ ॥ ೪ ॥ ಆರು ನಾನೆಂದು ವಿಚಾರಿಸು ವಿಷಮ ಸಂಸಾರವಿದನು ಕನಸೆಂದರಿದು । ಮಾರ ಮರ್ದನ ಶಂಭುಲಿಂಗನನೊಲಿಸಿ । ಗಂಭೀರ ಸುಖದೊಳಿರೆಂದುಸುರುವ ॥೫॥

೧೫

ಏಳು ಮನುಜ್ಞಾನಿ ಶಿವಯೋಗಿ ಮುನೀಶ್ವರ। ತಾಳ ಮೃದಂಗ ಬ್ರಹ್ಮನಾದ ಘೋಷವ ಕೇಳು ॥ಪಲ್ಲ॥ ನಾಮಗಾನ ವಿನೋದ ಸ್ವಾಮಿ ಶ್ರೀ ಪ್ರಭುಮಾಯಾ । ಕಾಮಸಂಹರ ಭಕ್ತ ಪ್ರೇಮಿಮಯಾಳು ಶಿವ ॥ ೧ ॥ ಲಿಂಗಾಂಗ ಸಮರಸದ ಸಂಗೀತ ಪಾಡುವ । ಸಂಗಶರಣರ ಮೇಳ ಲಿಂಗ ದಪ್ಪಿತು ನೋಡು ॥೨। ಮಂತ್ರ ಶಕ್ತಿಯರು ಮಹಾಮಂತ್ರ ಮೂರ್ತಿಗಳು । ಬಂದು ನಿಂತು ಮಹೇಶಾ ಜಯತೆಂದು ಪಾಡುವರು । ೩ ॥

೧೬

ಏಳಯ್ಯಾ ನಿಮ್ಮ ತಾಯ್ತಂದೆಗಳು ಬಂದಿಹರು । ಭಾಕ್ಷಾಕ್ಷ ಶಿಶು ಮಹಂತ ಲಿಂಗ ದೊರೆಯೇ ॥ಪಲ್ಲ॥ ಬಸವ ಮಡಿವಳ ಚನ್ನ ಸಿದ್ಧರಾಮೇ

ಶ್ವರರು । ಕುಶಲ ಪೃಥು ಮುಖ್ಯ ಅಜಗಣ್ಣ ತಂದೆಗಳು ॥ ಅಸಮ ಪರತರ ಗೌರೀ ಮಹದೇವಿ ಮುಕ್ತಾಯಿ । ವ್ಯಸನರಹಿತ ನೀಲಮ್ಮ ಮುಖ್ಯ ತಾಯಿಗಳು ॥೧॥ ಶಿವಯೋಗ ಮುದ್ರೆ ಸಿಂಹಾಸನದ ಸಮಿಪದೊಳಗೆ । ಅವಿರತಂ ಮಲಗಿರುವ ಗುರುಪುತ್ರರನೇ ॥ ತಪ ರ ಸ್ತ್ರ ಪ್ರವ ಥ ಗಣ ದೇವ ಗಣಭಕ್ತ ಗಣಕವಿದು ಬಂದಿಹರು ಮಹಗಣರು ಸಹಿತ ॥೨॥ ಭೃಂಗಿ ನಾರದ ಮುಖ್ಯ ಸಂಗಶರಣರು ಬಂದು । ಮಂಗಲ ಮೃದಂಗ ಮಹ ಘಳ ಮೇಳದಲಿ ॥ ಝೇಂಕರಿಪ ಸಂಗೀತ ನಾದವನು ಮಾಡುವರು । ಲಿಂಗ ಶಿಶುಮಹಂತ ನಿಮ್ಮ ಪಾಡಿ ಹರಸುತಲಿ ॥೩॥

೧೭

ಸದ್ಗುರು ದೇವಾ ನೀ ಮಾಡಿದ ಉಪಕೃತಿಯನು ನಾನು ಮರೆಯುವದಿಲ್ಲೆಂದೆಂದಿಹದೊಳು ॥ಪಲ್ಲ॥ ಪೂರ್ವದಸುಯೋಗದಿಂದ ವೇದಾಗಮ ಶಾಸ್ತ್ರವ । ಓದದೆ ಸಾಧಿಸಿದ ಪಾಠಗಳಿಲ್ಲ ॥ ತಿಳಿದ ಪರತತ್ವವನು ನೀನು ಓದಿದೆನ್ನ ಕರಕೆ ಕೊಟ್ಟುದರಿಂದ॥೧॥ ಕಂದಮೂಲಗಳ ಸೇವಿಸಿ ನಾನಾಯೋಗಗಳಗೊತ್ತಿ । ಬಂಧಿಸಿ ಪಂಚಾಗ್ನಿಯ ಮಧ್ಯದಿ ॥ ನಿಂದು ಯೋಗಿಗಳು ನೋಡುವ ಪರಬ್ರಹ್ಮವ । ತಂದೆನ್ನ ಕಣ್ಗೆ ತೋರಿದುದರಿಂದ ॥೨॥ ತರಳನೆನ್ನಯ ಮೇಲೆ ದಯತುಟ್ಟಿ ಶಿವನೇ ಶ್ರೀ ಗುರುಸಿದ್ಧನೆಂಬ ನಾಮವನಾಂತು ॥ ಗುರುರೂಪದಿಂದೆನ್ನ ಬೋಧಿಸಿ ತನ್ನೊಳು । ಬೆರಸುತ್ತಿ ಮೋಕ್ಷವಿತ್ತುದರಿಂದ ॥೩॥

೧೮

ನಿನ್ನ ನಾನೇನ ಬೇಡಲಿ ದೇವಾ । ಕೊಡಲೆನಗೆ ನಿನ್ನೊಳೇನುಂಟೆಲ್ಲವನ್ನು ನಾನೇ ತಿಳಿದು ॥ಪಲ್ಲ॥ ಅಶನವನು ಬೇಡುವೆನೆ ಕಾಳಕೂಟವು ಹೋ ದೇವಾ । ವಸನವನು ಬೇಡುವೆನೆ ಸಿಡಿದಾಸದೊಗಲು ॥ ಭೂಷಭೂಷಣವ ಬೇಡುವೆನೆ ಫಣಿಕರಾದಿಗಳು । ವಿಮಲ ಗಂಧವನೆ ಬೇಡುವೆನೆ ಹೆಣದ ಬೂದಿ ॥೧॥ ತುರಗವನು ಬೇಡುವೆನೆ ಬಹುದಿನದ ಮುದಿ ಎತ್ತು । ಕರದ ಪಾತ್ರೆಯನು ಬೇಡುವೆನೆ ತಲೆಯೋಡು । ಅರಮನೆಯ ಬೇಡಿ ಕೊಂಚನೆ ಪಿತೃವನ ಭೂಮಿ । ಪರಿಚಾರಕರನು ಬೇಡುವೆನೆ ಭೂತಗಳು ॥೨॥ ನಿನ್ನ ಸದ್ಗುಣದ ಸಿರಿಯದಿಂತು ಭಿಕ್ಷಾವೃತ್ತಿ । ನಿನ್ನ ನಿರ್ಗುಣ ಸುಖವ

ಪರಮಾರ್ಥವಿಡಿಸುದ ಬಹು ಶಾಸ್ತ್ರವೇಕೆ || ಕರುಣೆ ಶಾಂತಿಗಳಿಲ್ಲದಿಹ ತಪವೇಕೆ | ಹೊರಗೊಳಗೊಂದಾಗದನುಭವವೇಕೆ ||೨|| ತನುವ ಜೀರಿಡದನುಸಂಧಾನವೇಕೆ | ತನಗೆ ನಿಸ್ತುಸುಪ್ಲದುಪದೇಶವೇಕೆ | ಮನದ ಬಯಕೆಯುದಗದ ಪಾನವೇಕೆ | ಘನವನಾಲಿಂಗಿಸದುಪರತಿ ಏಕೆ ||೩|| ನೀನಾನೆಂಬುವ ಯುದ ಭಕ್ತಿಯುದೇಕೆ | ನಾನಾತ್ಮವನು ಭೇದಿಸದ ತತ್ವವೇಕೆ | ನಾನಾರೆಂದರಿಯದ ಯುಕ್ತಿಯುದೇಕೆ | ಜ್ಞಾನವಿಲ್ಲದ ದೀರ್ಘ ವೈರಾಗ್ಯವೇಕೆ ||೪|| ಪರಿಭವವನು ಕೆಡಿಸದ ಗುರುವೇಕೆ | ಪೆರತಾಗಿ ಪೂಜೆಗೊಂಬುವ ದೈವವೇಕೆ | ಪರಿಪೂರ್ಣ ಭಾವವಿಲ್ಲದ ಲಕ್ಷ್ಯವೇಕೆ | ಗುರುಸಿದ್ಧನಾಗಿ ನಿಲ್ಲದ ಸೌಖ್ಯವೇಕೆ ||೫||

೨೪

ಜೀವಿಕೊಂಬುವೆನಭವಾ ನಿನ್ನ ಕ್ರಿಯುಯನು ತಳುವ | ಮಾಡದೀ ವರಗಳನು ಕರುಣಿಸೆಲೆ ದೇವಾ ||ಪಲ್ಲ|| ಮನದೊಳಗೆ ನಿನ್ನ ಸಂಸ್ಮರಣೆಯನು ನಾಲಗೆಯು | ಕೊನೆಯಲ್ಲಿ ಪಂಚಾಕ್ಷರಿಯುನೆ ನುಡಿವುದನು || ತನುವಿನೊಳು ನಿನ್ನ ಸೇವೆಯು ಮಾಳ್ಪುದನು | ಕಿವಿಗೊಳನ ನಿನವು ಪ್ರಣವ ನಾದವನೆ ಕೇಳ್ವುದನು ||೧|| ಪರಪಿಂದು ಕಾಂತಿಗಳ ನೇತ್ರದೊಳು ನೋಳ್ಪುದನು | ಕರದೊಳಗೆ ನಿನ್ನ ಪೂಜೆಯುನೆ ಮಾಳ್ಪುದನು | ಮರೆಮಾಡೊಡಿಹ ಪರಕೆಳಸದಿಹ ವಿರತಿಯುನು ದೀರವಿರುವನ್ನವರಿತವರ ಸಂಗವನು ||೨|| ಆವ ಕಾಲದೊಳು ತತ್ವಾನುಭವವನು | ಕಾಣುವೀ ವಿಶ್ವವೆಲ್ಲ ಪುಸಿ ಎಂಬ ಪ್ರಜ್ಞೆಯುನು || ಭಾವದೊಳು ನೀನೆ ನಾನೆಂಬ ಸಂಧಾನವನು | ದೇವ ಗುರುಸಿದ್ಧನೊಳು ಕಡೆಗೆ ಮುಕ್ತಿಯುನು ||೩||

೨೫

ಗುಣಗಳೆ ಭೂಷಣವಲ್ಲದೆ ಸರ್ವಕ್ಕ | ಮಣಿ ಹೇಮಾದಿಗಳು ಭೂಷಣವಲ್ಲವು || ಮಣಿ ಹೇಮ ಭೂಷವಾ ದೇಹಾಂತವಿರವಿಂತೀ | ಗುಣಭೂಷಣವಾ ಚಂದ್ರಾರ್ಕವದಾಗಿಯೋ ||ಪಲ್ಲ|| ಚರಣಗಳಿಗೆ ತೀರ್ಥಯಾತ್ರೆಯೋ ಭೂಷಣ | ಕರಕೆ ಸತ್ಪಾತ್ರದಾನವೇ ಭೂಷಣ || ಗುರುಪಾದ ಪ್ರಣತಿಯೋ ಸಿರಸಿಗೆ ಭೂಷಣ | ಹರದರುಶನವೇ ನೇತ್ರಕೆ ಭೂಷಣ ||೧|| ಅನುಪಮ ಸತ್ಯವೇ ರಸನೆಗೆ ಭೂಷಣ | ಘನ ಪುಣ್ಯಕಥೆಯೆ ಕರ್ಣಕೆ ಭೂಷಣ || ತನುವಿಗೆ ಪರಕಾಂತಾಜಹನವೇ ಭೂಷಣ | ಮನಸಿಗೆ ಧರ್ಮ ಚಿಂತೆಯೋ

ಭೂಷಣ ||೨|| ಪರಿಪೂರ್ಣ ವಿದ್ಯೆಗಗರ್ವವೇ ಭೂಷಣ | ಸಿರಿಗೆ ದೀನರ ಪೋಷಣೆಯೇ ಭೂಷಣ || ನರಜನ್ಮಕೆ ಹಿತಾಹಿತಾಸ್ಥೆಯೇ ಭೂಷಣ | ದುರಿತ ಭೀತಿಯೇ ಸೌಜನ್ಯಕೆ ಭೂಷಣ ||೩|| ಧರೆಯೊಳಹಿಂಸೆಯೇ ಕರುಣಕ್ಕೆ ಭೂಷಣ | ಪರತರ ತಪಕೆ ಶಾಂತಿಯೇ ಭೂಷಣ || ದರುಶನಾಶ್ರಮಕೆಲ್ಲ ವಿರತಿಯೇ ಭೂಷಣ | ವಿರತಿಗೆ ಬ್ರಹ್ಮವಿದ್ಯೆಯೇ ಭೂಷಣ ||೪|| ಪರಿಪೂರ್ಣ ಲಕ್ಷ್ಯವೇ ಯೋಗಕ್ಕೆ ಭೂಷಣ | ವರಿಪಿಗೆ ನಿರ್ವಿಕಲ್ಪವೇ ಭೂಷಣ || ಗುರುಸಿದ್ಧನ ಪದಲಿಕ್ಯಾಲಿಷ್ಟ ಮುಕ್ತಿಯೇ ! ಪರಿಕಿಸಲಿಂತಿವೆಲ್ಲಕು ಭೂಷಣ ||೫||

೨೬

ಏನಿರ್ದಡೇನು ನಿಜಬೋಧಧೈರ್ಯವಿಲ್ಲದಿರೆ | ಕಾನನದ ಬೆಳದಿಂಗಳಂತೆ ನಿಷ್ಫಲವು ||ಪಲ್ಲ|| ಕಾಯದೊಳು ಮನ್ಮಥನ ಪೋಲ್ವ ಸುಂದರರೂಪು | ಬಾಯೊಳೆಲ್ಲರ ಮರುಳುಗೊಳಿಪ ವಾಗ್ ಸುಧೆಯು | ಆಯುವಾಗಿರ್ದು ತನ್ನಿರವ ತಾನರಿಯದಿರೆ | ನಾಯಮೊಲೆಯೊಳಗಿರ್ದ ಹಾಲಿನಂತಿಹುದು ||೧|| ಚಂಡಪ್ರತಾಪದಿಂದಂಗಳನು ಜಯಿಸಿ | ಭೂಮಂಡಲವನೆಲ್ಲ ಓರ್ವನೆ ಆಳುತಿರ್ದು || ಪಿಂಡದೊಳಗಿರ್ದ ಚಿನ್ಮಾತ್ರನನರಿಯದಿರೆ | ರಂಡೆಗೊದಗಿರ್ದ ಯೌವನದಂತಿಹುದು ||೨|| ಅಣಿಮಾದಿ ಸಕಲ ಸಿದ್ಧಿಗಳೊಡನೆ ತನ್ನ ಮನ | ಮಣಿವಂತೆ ನಾಕ ಲೋಕದೊಳು ಪರಿಣಮಿಸಿ || ಗುಣಿಸಿರದೆ ಗುರುಸಿದ್ಧನೊಡನೈಕ್ಯವಡೆಯದಿರೆ | ಹೆಣಕೆ ಮಾಡಿದ ಶೃಂಗಾರದಂತಿಹುದು ||೩||

೨೭

ಬಸವಾದಿ ಪ್ರಮಥರ ಚರಣಸಾರಗಳಿಗೊಸೆದೆನ್ನ ಮನವನಾರಡಿಗೈವೆನು | ವಿಮಲನಿಯೆ ತೊಡನಾಗಿ ಬಹುನಾಮವಾಂತಂತೆ | ಪಶುಪತಿಯು ಪರಾವತಾರದೊಂದೆನಿಸುವ ||ಪಲ್ಲ|| ಶಿವನ ಚಕ್ಷುರ್ಮರ್ಮವೇ ಶರಣರಾಕ್ಷನಗೊಂಡ | ಶಿವತತ್ತ್ವದನುವ ಭೂಮಿಗೆ ಬಿತ್ತಿದ || ಶಿವನೇ ಮಹಾನ್ಯದಿಂ ಮಾಯೆಯನುಳಿಕ್ಕೈದ | ಶಿವನ ರೌದ್ರಾವೇಶ ರಸವ್ಯಾದಿ ಕರುಮಾದ ||೧|| ಲಿಂಗದಿಂ ನೃಪಗೆ ಸಾಕ್ಷಿಯಂ ಕೊಟ್ಟು ತನ್ನಿಷ್ಟಲಿಂಗದಿ ಸರ್ವರನಾಗಳಿಸಿದ|| ಲಿಂಗಕ್ಕೆ ಪ್ರತ್ಯಕ್ಷ ಮಣಿಸಿತ್ತ ಕರಪಗ್ಗ | ಲಿಂಗದೆ ತನುವನಡಗಿಸುತೆ ಬಯಲಾದ ||೨|| ವೃಷಬಲಿ ಪೊಗೊಂಡ ಸತಿಯುಕ್ರಿಗಡಿಯಿಟ್ಟು | ವೃಷಭನಿಗೆ ಜಡೆಯುನಲ್ ಸೊಡರೆತ್ತಿದ ವೃಷಭನಿಗೋಸುಗ ತನುಜನನೆ ಬಾಣಸಗೈದ | ವೃಷಭನನೇಳಿಸಿದಾತ್ತ ಪಿತನ ಸಂಹರಿಸಿದ ||೩|| ಹರನನ್ನೆ ಮೊರಗೆಂದು

ಜೇಡ ಮತ್ತೊಳಕ್ಕೆದ | ಹರನ ಬಾರಿನೆಲೊಳ್ಳಿ ನೆನುತಪ್ಪಿದ || ಹರನಿಗಂ ಪೀರಸ್ವಿಸ್ವೋಪದೇಶವನಿತ್ತ | ಹರನ ಕೈಲಾಸಪುರವೆಲ್ಲಕೊಳ್ಗೊಂಡ ||೪|| ಈ ರೀತಿಯೊಳು ಮೋಕ್ಷವಿಂ ಬಂದು ಪ್ರಾಕೆಯಿಂದೆ | ಪಾರಿಪಾರ್ಥಿಯು ಪುತ್ತೆ ಜೆರಿ ಸುಮಂಕಿ || ಶಾರೀರವಿಡಿಪ್ಪಿದಿ ಸಟಿಸುತ್ತ ಶಿವಭಕ್ತಿ | ದ್ವಾರದಿಂ ಗುರು ಸಿದ್ಧನೊಡನೈಕ್ಯರಾದಂಥ ||೫||

೨೮

ಮನಸೆಂಬ ಮರ್ಕಟನ ತಡೆಯಲಾರೆನು ದೇವಾ | ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ ||ಪಲ್ಲ|| ಧರೆಯನೆಲ್ಲವನೊಂದೆ ಕೊಡೆಯಿಂದಲಾಳು ವುದು |ಗಿರಿಯ ಗುಹೆಯೊಳು ಕುಳಿತು ತಪವ ಮಾಡುವುದು | ತರುಣಿಯರ ಕಂಗಳೊಳು ಕೈಯಿಕ್ಕಿ ನಗಿಸುವದು | ಕರಿಯ ಮೇಲಂಬಾರಿಯಲ್ಲಿ ಮೆರೆಯು ವದು ||೧|| ಅನುಭವದಿ ಜೀವೇಶರೈಕ್ಯವನು ತಿಳಿಯುವುದು | ಧನದ ಪಶ ಲಕ್ಷವನುಗಳಿಸಿ ಹೂಣುವದು | ಮನೆಯ ಮಕ್ಕಳ ಬಿಟ್ಟು ವಿರತಿಯಿಂ ಪ್ರಾರ ಭುವದು | ವನಭೋಗ ಸಾಂದ ಸೊಂಪೊಂದನೆಳೆಸುವದು ||೨|| ಅರಿಗಳನು ಬಿಡದು ಹೆಡೆಸ ಮುಟಿಗಟ್ಟಿ ಹೊಸಗುವುದು | ಸುರಲೋಕಕ್ಕೈದಿ ರಂಭೆಯೊಳು ರಮಿಸುವದು | ಬರಿದೆ ನಿನೇನನು ಚೇಷ್ಟಿಸುವೆಂಬೆನೆ ಘುಪಿಯೊ | ಕೀರುವ ಕೋತಿಗಾರ ತಿಷ್ಯರೆಂಬುದು ||೩|| ಪಿಡಿವೆನೆನೆ ಮೊದಲೆ ಮುವಸ್ತ್ರಾರ ಹಾರಾಟಹುದು ! ಪ್ರಾಡೆನೆನೆನೆಲಾ ನುಡಿಯುಪಾರದೆಂಬುವದು || ತುಡುಗ ದನದಿನ ಕೊರಳ ಗುಪ್ಪೆಯುಂದಮೊಳನ್ನ | ನಡೆವಿಡದೆ ಮೂಜಗದೊಳಿಕ ಪಾಡುತಿಯುದು ||೪|| ಧರೆಯ ನಿಕ್ಷೇಪವನು ಕಪ್ಪೆಲ್ಲಿಗೋಡಿವರೂ | ಧರೆಯು ವಲ್ಲಕ್ಷಿ ಗೃಹನ ಕಾಡುವಂತೆ|| ಗುರುಸಿದ್ಧ ಎನ್ನ ಮನವಾವ ವಿಷಯಂಗಳೊಳ ಗೆರಗಲಲ್ಲೆಲ್ಲ ನೀಂ ಕಾಣಿಸದ ಬಿಡಿಸೈ ||೫||

೨೯

ಎಂತು ಸೈರಿಸಬಹುದು ಈ ಭವದ ಬಾಧೆಯನು | ಕಂತುಹರ ಜನಿ ಪುದನೆ ಸಾಕು ಮಾಡಭವಾ ||ಪಲ್ಲ|| ವಾಯು ಕರಣೇಂದ್ರಿಯಂಗಳು ವಿಷಯ ವಾಸೆಗಳು | ದಾಯಾದ್ಯರಂತೆನ್ನ ತಿಕ್ಕಿ ಮುಕ್ಕುವುವು || ಕಾಯ ಗುಣವೆನಿಪ ಹಸುತೃಷೆನೋವುನಿಪ್ರೆಗಳು|ನಾಯ್ಗಳಂತಡಿಗಡಿಗೆ ಮುತ್ತಿಮುಸುರುವವು ||೧|| ಒಡಲಬಿಡದಾಪತ್ತು ಕೆಡಹಿ ಧರೆಯೊಳು ಕಾಡ | ಹೊಡೆಗಿಚ್ಚಿನಂತೆನ್ನ ಸುಟ್ಟು

ಸುರುಳಿಸುವುದು || ಮಡದಿ ಮಕ್ಕಳ ಮೇಲಣಾತಿಮಮತೆಯೆಂದು ಕಾಣ್ಕೆ | ತೊಡರ್ದ ಬಳ್ಳಿಯು ತೆರದೆ ಕಟ್ಟಿ ಕೆಡಹುವುದು ||೩|| ಜನರು ಕಸಿಯುವ ಕಾಣಸ್ಸದಿದು ಸಹಜ ಧರೆಯೊಳಗೆ | ಮನವೆಂಬ ಕಸಿಯೆನ್ನ ಕಾಣಿಸಿ ಕೊಸರುವುದು || ತನುವಿದನಿದನಿಮುದಿಸಿ ರಾಜಾಜ್ಞೆಯುನ್ನ | ಸನುದಿನವೊಳಿಪುವರಕೆ ಸುತ್ತಿ ಸುಳಿಸುವುದು ||೫|| ಅರಿವರ್ಗವೆಂಬುದೆದೆವಿಡಿದೆನ್ನ ಮುಂದೊತ್ತಿ | ಹರಿದುಬಿಸಿ ಹಗೆಯಂತೆ ಕೊಂದು ಕೂಗುವುದು || ಮೆರೆವ ತಾಪತ್ರಯವದನಗಬಿಸಿ ಬೇಸಗೆಯೊ | ಳುರಿವ ಬಿಸಿಲಂತೆನ್ನ ಕರಗಿ ಕೊರಗಿಸುವುದು ||೭|| ಹಾಳು ಸ್ಮಸನಂಗಳೆನ್ನನೆ | ಕೋಣವಿಟಿದೊಡನ | ಕಾಳು ಸರ್ಪಗಳಂತೆ ಕಟ್ಟಿ ಕೊಲುವುದು | ಹೇಳಲೇನಕಟ ಭವಘೋರ ಗಾಮುಯಮುರೆನ್ನ | ನಾಳಿಯುಗಣೆಗಳಂತೆ ಬಂದಿ ಹಿಚುಕುವುದು ||೯|| ಜರೆಮರಣವೆರಡನ್ನನೊಡನೊಡನೆ ಮೇಲ್ವಾಯ್ದು | ಹಿರಿಯ ಹುಲಿಯಂತೆ ತಡರಿ ತಿಂದು ತೇಗುವುದು | ಮರವೆಂಬುದೆನ್ನ ಸುಜ್ಞಾನ ದೃಷ್ಟಿಯ ಮುಸುಗಿ | ಸರಿದು ಗಾಢಾಂಧಕಾರ ಮುಸ್ಕಿ ಮುಸುಗುವುದು ||೧೦|| ಊರಿವ ಬಾಧೆಗಳನಂತಂಗಳಂಟಿವನೆಲ್ಲ ಪಳಿದು ಗುರುಸಿದ್ಧನೊಡನಸ್ಪೃಶ್ಯ ಪದವಿಯನಿತ್ತ || ಅಳಿದಿದ ಮಗನೆ ನಾಶಿಯೆನು ನಿನ್ನೀಭವದ | ಕಳವನೆಂದಭಯವನೆ ಕೊಡು ಮಹಾದೇವ ||೧೧||

೩೦

ಪುರಹರಾ ನಿನಗಿನ್ನು ದಯೆ ಬಾರದೇ | ಧರೆಯೊಳು ಬಹು ಬಳಲ್ದೆನಲ್ಲ ನಲ್ಲ | ಬರಬಾರದತಿಹೀನ ಯೋನಿಗಳೊಳು ಬಂದು | ಧರಿಸಬಾರದ ದೇಹಗಳನೆ ತೊಟ್ಟು | ಸ್ಮರಿಸಲುಚಿತವಲ್ಲದಾಹಾರಗಳನುಂಡು | ತಿರುಗುತಿಪ್ಪುದ ನೀನೆ ಕಂಡು ಕಂಡು ||೧|| ಅಳುಪಬಾರದ ಗುರುದ್ರವ್ಯದರ್ಥಕೆ ಸೋಲ್ತು | ಕೊಲಬಾರದಖಿಳ ಪ್ರಾಣಿಗಳ ಕೊಂದು || ಗಳಿಸಬಾರದ ಲೋಕದಪವಾದಗಳಮೊತ್ತು ತೊಳಲುತಿಪ್ಪುದ ನೀನೆ ಕಂಡು ಕಂಡು ||೨|| ಮಾಡಬಾರದ ಪಾಪಗಳನೆ ಪೋಣಿಸಿ ಮಾಡಿ | ಕೂಡಬಾರದ ಕಾಮಿನಿಯರ ಕೂಡಿ | ಆಡಬಾರದ ಪರದೂಷಣೆಗಳನಾಡಿ | ಓಡಿಯುಪ್ಪುದ ನೀನೆ ಕಂಡು ಕಂಡು ||೩|| ಎನಿತು ಭವದ-ಘನತೆಯಗಿದರೂ ಎನ್ನನು ಬಿಟ್ಟು | ನಿನಗನ್ಯಗತಿಯಿಲ್ಲದುದರಿಂದ ನಾನು || ಅನಿತ ನೋಡಿಸಿ ಮುಕ್ತಿಗೂಡಬೇಕೆಂಬುವ ನಿನ್ನ | ಮನದಾಶಯವ ನೀನೆ ಕಂಡು ಕಂಡು ||೪|| ಪರಿಪೂರ್ಣ ಗುರುಸಿದ್ಧನಾಥ ನಾನೀತನೀ | ಮೊರೆಯು

ನಾಳಿಸಿ ನಿಸ್ಮರಣದೊಳಿನ್ನು ॥ ಮರೆತಿರೆ ಭಕ್ತವತ್ಸಲನೆಂಬ ಬಿರುದಿನ್ನ ಮರೆಪುದೆಂಬದ ನೀನೆ ಕಂಡು ಕಂಡು ॥ ೫ ॥

೩೧

ಸಿರಿಯು ಸತಿ ಸುತ ಹಿತರು ನಿಜವೆಂದು ನೆರೆನಂಬಿ । ಬರಿದೆ ಕೈ ಮರೆದು ಕೆಡದಿರು ಮುಂದ ತಿಳುಹಿ ॥ಪಲ್ಲ॥ ಜ್ಯೋತಿರುವತನಕ ದೀಪ ಗೆಳೆಯುರಿವಸ್ತೊಲು ಪೂರ್ವ । ಪುಣ್ಯವಿಹಪರಿಯಂತ ಸಿರಿಯಿರ್ಪುದು । ಪುಣ್ಯ ತೀರಿದ ಮರುದಿನಕೆ ನಿನ್ನಯ ಸಿರಿಯು । ಎಣ್ಣೆ ಮುಗಿದಿಹ ದೀಪದೊಲು ತಣ್ಣಗಹುದು ॥೧॥ ಒಂದು ಮರದೊಳಗಿಳಿವ ಪಕ್ಷಿಗಳು ಸಂಜೆಯೊಳ। ಗೊಂದಿ ಬೆಳಗಿನೊಳಗಲಿ ಪೋಗುವಂತೆ । ತಂದೆ ತಾಯಣ್ಣ ತಮ್ಮರು ಸತಿಸುತರು । ಕಾಲ ಬಂದ ನಿಮಿಷಕೆ ನಿನಗೆ ಹೇಳದ್ಹೋದವರು ॥೨॥ ವ್ರಣಕೆ ಮುಸುರುವ ನೊಣಗಳಂತೆ ನಿನ್ನನು ಜನರು ಹಣವಿರುವ ಪರಿಯಂತ ಪ್ರೀತ್ಯೈಪರು ॥ ಹಣವು ನಿನ್ನೊಳು ಮುಗಿದ ಘಳಿಗೆಯೊಳಗಾ ಜನರೆ। ಹೆಣವ ಕಂಡಂತೆ ದೂರಕೆ ನೋಗುತಿಹರು ॥೩। ನಿನ್ನಂಗದಿಂದ ನಿನಗಿನ್ನು ಹಿತವಾಪುದೀ ನಿನ್ನಂಗವೇ ನಿನ್ನನಗಲ್ವುದೆನಲು । ಅನ್ಯವಹ ಸಿರಿಯು ಸತಿ ಸುತ ಹಿತರು ನಿಜವಂತಿ । ನ್ನದನು ತಿಳಿದು ಮೋಹಿಸದಿರದೀ ಮರುಳೆ ॥೪॥ ಗುರುಚಾಪಗಂಧರ್ವ ಪುರಗಳಿಂ ಪುಸಿಯಾದ । ಸಿರಿವುಬ್ಬುವಿಕರದೆ ಪೈ ಮರೆಯದೆ ॥ ಗುರುಸಿದ್ಧನಂಘ್ರಿಪಂಕಜವ ಮನದೊಳು ಭಜಿಸಿ । ಪರಮುಕ್ತಿಯನು ಪಡೆದು ಸುಖಿಯಾಗು ಕಂಡ್ಯಾ ॥೫।

೩೨

ಹೆಣ್ಣಿಗಿಚ್ಛೈಸುವರೇ ಮೂಢಾ। ಇದನು ಕಣ್ಣುಕಿವಿವೈಮನಗಳಿಂ ನೋಂಕಬೇಡಾ ॥ಪಲ್ಲ॥ ತಾಯಾಗಿ ಮೊದಲೀ ಹಡೆದಿಹುದು । ಮೇಲೆ ಜಾಯೆ ಎಂದೆನಿಸಿ ಕಾಮದೊಳು ಕೆಡಹುವದು । ಕಾಯದೊಳು ಜನಿಸಿ ಸುತೆಯಹುದು । ಇಂತು ಮಾಯೆಯೆ ನಿನ್ನ ಬಹು ವಿಧದಿ ಕಾಡುವದು ॥೧॥ ಪಿತರತ್ನವಾಗಿ ಹೊಂದುವದು । ನಿಮಿಷ ರತಿಗೊಟ್ಟು ನಿತ್ಯ ಮುಕ್ತಿಯನೆ ನೀಗುವದು ॥ ಕ್ಷಿತಿಯ ಪ್ರಾಜ್ಞತೆಯ ಕೆಡಿಸುವದು । ಮುಂದೆ ಶತಜನ್ಮಗಳಿಗೆ ಹೊಣೆಯಾಗಿ ನಿಲ್ಲುವದು ॥೨॥ ಬಗೆಯೆ ತನುವೆಲು ನರವು ಖಂಡ । ವದರೊಳಗೆ ಪಾಯು ರಂಧ್ರವದು ಕಿಸುಕುಳದ ಹೊಂಡ । ಭಗವೆಂಬುವದು ಮೂತ್ರಭಾಂಡ । ವದ

ಕವಗಡಿಸವೆ ನಿನಗೆ ನಿಜಸುಖವಿಲ್ಲ ಕಂಡ್ಯಾ ||೩| ಒಸೆವ ಪಾಲಿಯ ಸು
ಕೊಲಿಸಿಹುದು | ಹಾಂಗೆ ಹೆಸರು ಮಾತ್ರದೊಳು ವಂಚಕನನಳಿಸಿಹುದು |
ವರಕಂಠನಸುವ ಕಳಿಸಿಹುದು | ಇಂದ್ರ ಶಶಿಗಳಂಗದೆ ಭಗಕ್ಷಯಗಳೆಸಗಿ
ಹುದು ||೪|| ವರಸೆಪಾಯುಗಳನಳಿಸಿಹುದು | ನೋಂಕಿದರ ಮೇಲೆ ಪಾತ
ಕದ ಹೊರೆಯು ಹೊರಿಸುವದು|| ನರಕವರ ಮನೆಯೊಳಿರಿಸುವದು | ನವ
ಗುರುಸಿದ್ಧ ನಡಿಗವರ ದೂರವೆನಿಸುವದು ||೫||

೩೩

ತನ್ನೊಳಗಿಹ ತೀರ್ಥ ಕ್ಷೇತ್ರವನರಿಯದೆ | ಸುಮ್ಮನೆ ತಿರುಗುತಿಪ್ಪರು
ಮೂಢ ಜನರು |ಪಲ್ಲ|| ಈಡೆಯೆ ಯಮುನೆ ಪಿಂಗಳೆಯು ಗಂಗೆಯು ಬ್ರಹ್ಮ
ನಾಡಿ ಎಂಬುವೇ ಸರಸ್ವತಿಯು ಮೂರೊಂದು | ಗೂಡಿ ಜರೆದ ತ್ರಿಕೂಟನೇ
ಸಂಗಮವು ಮಿಕ್ಕ | ನಾಡಿಗಳಪ್ಪ ಸರ್ವ ಪುಣ್ಯ ತೀರ್ಥಗಳು ||೧| ಶಿರವೇ
ಶ್ರೀಗಿರಿ ಕರ್ಣ ವದನವೇ ಗೋಕರ್ಣವು| ಕರಗಳೇ ಕಾಂಚಿ ಕುಚವೇ ಕುರು
ಕ್ಷೇತ್ರ || ಉರವೇ ಉಜ್ಜನಿ ಭವ್ಯ ಭ್ರೂಮಧ್ಯವದು ಕಾಶಿ | ಪುರವು ಕುಶ ನಿ
ಸಿಂಹಾಸನವೆನಿಸುವ ||೨|| ಒಳಗಿಂತು ಪರಿಪ ತೀರ್ಥದೆ ಸುಂದು ತ್ರಿಪುರಿಪ
ತೊಳಯಿ ಕ್ಷೇತ್ರಗಳ ನೊಂದೊಂದನೇ ಪೊಕ್ಕ || ಸುಕದಲ್ಲಿ ಗುರುಸಿದ್ಧ ನಕ
ನಾದ ಕಳೆಬಿಂದು | ಗಳ ಲಿಂಗ ತತಿ ಎಂದು ಭಜಿಸುದ ಮರೆದು ||೩||

೩೪

ತೇರು ಸಾಗಿತವ್ವ ನೋಡಿರಿ | ಈ ದೇಹವೆಂಬ ತೇರು ಸಾಗಿತವ್ವ
ನೋಡಿರಿ || ತೇರು ಸಾಗಿತವ್ವ ನೋಡಿ | ಸಾರ ಪ್ರಕೃತಿ ಸತಿಯರೆಲ್ಲ |
ಪಾರಮಾರ್ಥತತ್ವದೊಳೆ ವಿಚಾರವೆಂಬ ಬೀದಿಯಲ್ಲಿ |ಪಲ್ಲ| ಕಾಲೆ ಎರಡು
ಗಾಲಿಯಾಗಿವೆ | ಜಂಘೆಗಳವಕ್ಕೆ ಕೀಲಿನಚ್ಚಿನಂತೆ ತೋರಿವೆ | ಈ ತೊಡೆಗ
ಳೆರಡು ಮೇಲು ಮುಖದ ಕಂಭನಾಗಿವೆ | ಆಧಾರ ಮಧ್ಯವೇಳು ಚಕ್ರ
ವೆನಿಪ ತನ್ನೊಳೇಳು | ನೆಲೆಗಳಾಗಲದರ ಮೇಲೆ ತೋರ್ಪ ಮಸ್ತಕವೇ |
ಪಿಶೋಲ ರತ್ನಕಳಸವೆನಿಸಿ ||೧|| ಕರಗಳೆರಡು ಮದನ ತೋಳ್ಗಳು | ಮೇಲಿ
ರುವ ಭುಜದ ಸಿರಗಳೆರಡು ಹೊಳೆವ ಧ್ವಜಗಳು | ನೇತ್ರಂಗಳೆರಡು ಮೆರೆವ
ನೀಲದರ್ಪಣಂಗಳು|| ಉಜ್ವಲಿಸುತಿರ್ಪ ಶರೀರ ಕಾಂತಿಯುವಕೆ ಸುತ್ತ| ಬಿರುವ
ಪಟಗಳಾಗಿ ತೋರೆ ನೆರೆ ಸುಷುಮ್ನ ನಾಡಿಯೆಂಬ || ಬಿರಿಯ ಬಲಿದ ಬಗ ಕಿ

ನಿಂದ ||೨|| ತನುಗುಣಂಗಳೆಲ್ಲ ಪ್ರಜೆಗಳು | ಮುಂಬರಿವ ಬುದ್ಧಿ ಮನ ಗಳೆಂಬುವೆರಡು ಮಿಳೆಗಳು | ಸ್ವೈಖರಿಯನುಡಿಗಳಿನಿತಿವೆಲ್ಲ ನಾದ್ಯರವಗಳು|| ಸಂಭ್ರಮದಿ ಬಂದು ಮಿನುಪ ಹೃದಯಕಮಲವೆಂಬ ಕನಕ ಪೀಠದಗ್ರದಲ್ಲಿ ಚಿನುಮಯಾತ್ಮ ಶ್ರೀ ಗುರುಸಿದ್ಧ | ನನುಮಿನಿಂದೆ ಮೂರ್ತಿಗೊಳಲು ||೩||

೩೫

ಜರಿಯಬಾರದೆ ತಿಳಿದು ಜರಿಯಬಾರದೆ | ಮರೆದು ಬಾಹ್ಯವನ್ನು ತನ್ನ ಕರದ ಪಿಂಡ ತೇಜದೊಡನೆ ||ಪಲ್ಲ|| ತಿಳಿವೆನಿಸುವ ಸುರಭಿಗೂಡಿ | ನಳನಳಿ ಸುವ ಪಕಜ ಹೃದಯ || ನಳಿನದಮಳ ಕರ್ಣಿಕೆಯೊಳು | ಬೆಳಗು ಇಷ್ಟಲಿಂಗ ದೊಡನೆ |೧|| ಪರಿವ ಗಂಗೆ ಯಮುನೆ ಎರಡು | ಬೆರೆವ ಸಂಗಮ ಸ್ಥಳದೊಳ| ಗಿರುವ ಗಗನ ಗಿರಿಯ ತುದಿಯೊ | ಳಿರುವ ಪ್ರಾಣಲಿ ಗದೊಡನೆ ||೨| ಮಹಿತ ಶ್ರೀ ಗುರುಸಿದ್ಧನೊಲಿದು | ವಿಮರಿಸುವ ಸುಷುಮ್ನ ನಾಡಿ|| ಕುಹರ ದಗ್ರದಚಲಸರಸಿ | ರುಹದ ಭಾವಲಿಂಗದೊಡನೆ ||೩||

೩೬

ಏಕೆ ಯಾತ್ರೆಯು ಮಾಮತಿರ್ಪರಲ್ಲೆ ನಿಹುದು | ನಾಕುಂಟು ತನ್ನೊಳೀ ಗುಣಗಳಿರುತಿರಲು ||ಪಲ್ಲ| ಪರನಿಂದೆ ಪರವಧೂಸಂಗ ಕುಟಿಲ ಕುಯುಕ್ತಿ | ಪರನಿಂದೆ ಕಪಟ ನಿರ್ದಯ ಕಠಿಣ ವಚನ || ಗುರುನಿರಾಕರಣೆ ಮದಮೋಹರಾಗದ್ವೇಷ | ದುರಿತಾದಿ ದುರ್ಗುಣಂಗಳು ತನ್ನೊಳಿರಲು ||೧| ಸತ್ಯ ಸನ್ಮಾರ್ಗ ದಮೆ ದಯೆ ಶಾಂತಿ ಗುರುಭಕ್ತಿ | ತತ್ವವಿಚಾರ ವಿದ್ಯೆ ವಿನಯ ದಯೆ ಧರ್ಮ || ನಿತ್ಯಕರ್ಮವಿವೇಕ ವಿರತಿ ಜಪ ತಪ ಯೋಗ | ಇತ್ಯಾದಿ ಸದ್ಗುಣಂಗಳು ತನ್ನೊಳಿರಲು ||೨| ತಿಳಿಯಲೀಗುಣಗಳೊಳಗೊಂದೊಂದೆ ಶತಯಾತ್ರ | ಗಳ ಪುಣ್ಯ ಫಲವ ತವಿಸುವುದೀವುದೆನಲು || ಕಳೆವುದುತ್ತಾದಿ ಗುಣಗಳನಂತ್ಯ ಗುಣವಿಡಿದೊ | ಡೊಲಿವನೀ ಗುರುಸಿದ್ಧನೆಂಬುದನು ಮರೆದು ||೩||

೩೭

ಅಧಿಕವಹ ಸಕಲ ಗುಣಗಳನಿಲ್ಲಿ ವರ್ಣಿಸುವೆ | ನಧಿಕರರಿದಾಚರಿಸಿ ನಿಜಮುಕ್ತರಹುದು ||ಪಲ್ಲ|| ಸಕಲ ಪಾಪಂಗಳೊಳು ಪರನಿಂದೆಯಧಿಕ | ಸಕಲ ಪುಣ್ಯದೊಳನ್ಯಪೋಷಣೆಯಧಿಕ||ಸಕಲದುರ್ಗುಣಂಗಳೊಳು ಲೋಭ

ನೆಂಬುದಧಿಕ। ಸಕಲ ಗುಣಂಗಳೊಳು ವಿತರಣವದಧಿಕ ॥೧॥ ಅಖಿಳ ಭಾಷೆಗಳೊಳು ವೇದ ಎಂಬುವುದಧಿಕ। ಅಖಿಳ ಗೌರವದೊಳಗಯಾಚಕನುದಧಿಕ। ಅಖಿಳ ತಪಗಳೊಳು ಸತ್ಯವೆಂಬುವುದಧಿಕ । ಎಲ್ಲ ತೀರ್ಥದ ವಿಮಲ ಮಾನಸವದಧಿಕ । ಎಲ್ಲ ಧನಗಳೊಳು ಧನಬುಧನವದಧಿಕ । ಎಲ್ಲ ವಿಜಯದೆ ಕರಣಗಳ ವಿಜಯವದಧಿಕ । ಎಲ್ಲ ಜನ್ಮಂಗಳೊಳ್ ಮನುಜ ಜನ್ಮವದಧಿಕ । ಎಲ್ಲ ಸುಖಂಗಳೊಳು ವೈರಾಗ್ಯ ಸುಖವದಧಿಕ ॥೨॥ ಸರ್ವ ಸಂಗಗಳೊಳು ಸಿದ್ಧಾಸನವದಧಿಕ । ಸರ್ವ ಮಂತ್ರಗಳೊಳು ಪರಿಚರಿಯದಧಿಕ ॥ ಸರ್ವ ನಾಮಗಳೊಳು ಸಹಸ್ರನಾಮದಧಿಕ ಸರ್ವ ಲಕ್ಷ್ಮಿ ಪೂರ್ಣ ಲಕ್ಷ್ಮ್ಯವತ್ಯಧಿಕ ॥೩॥ ಸಿಯಿರದ ಗುಣಗಳೊಳು ಗರವನ್ನತ್ಯಧಿಕ । ಸಿಯಲ ವಿದ್ಯೆದೆ ಬ್ರಹ್ಮ ವಿದ್ಯೆಯತ್ಯಧಿಕ । ಸಿಯಿಲ ಯೋಗದೆ ರಾಜಯೋಗ ವದುದತ್ಯಧಿಕ । ಸಿಯಿಲ ಪದಗಳೊಳು ಮುಕ್ತಿಪದವಿಯತ್ಯಧಿಕ ॥೪॥

೩೮

ಹೊರಗೆ ಹಿರಿಯನಾಗಿ ನಿಜವನರಿಯುವವರೆ ಹಿರಿಯರು । ಜಗವರಿದು ಹಿರಿಯನಾದೆನೆಂಬುವರೆ ಜಗಕೆ ಹಿರಿಯರು ॥ಪಲ್ಲ॥ ನಿಜರು ಪದ ಪ ಬಾಳ್ವ ತತ್ವ । ನಾಲ್ಕರಿಯದೆ ಯಾವನ ವ್ರತದ । ದಾರಿಯಲ್ಲಿ ಸ್ಮರಿಸಿ ಕೊಂಬುವವರೆ । ಹಿರಿಯರು । ನಿಜರು ಪರುಷನಾಮದೊಳಿನ । ಪರಮಾರ್ಥವರಿದು ಧನದ । ಬೇರು ಕಿತ್ತು ಬಿಸುಡಬಲ್ಲವರೆ ಹಿರಿಯರು ॥೧॥ ದೊಡ್ಡ ಮೊಟ್ಟೆ ದೀರ್ಘ ದೇಹ । ಗಡ್ಡ ಬಿಳುಪು ಮಾಸಿ ಪ್ರಸಿದ್ಧ । ಬಿಟ್ಟು ತೊಳೆಸು ಕೊಳ್ಳಲರಿಯುವವರೆ ಹಿರಿಯರು । ಗಡ್ಡ ನಾಮಗಳಿಂದ । ಗಡ್ಡವಾಗಿ ಬೆಳೆದ ಮರವೆ । ಹೊಡ್ಡ ಮುಂದು ತಿರಸು ಮಾಡುವವರೆ ಹಿರಿಯರು ॥೨॥ ನೆಲವನಿಲ್ಲ ಭಜಿದ ಬಲವೆ । ಗೆಲಿದು ತನ್ನ ಮನದ ವಿಸ್ಮೃತಿ । ಜಲಗಿಂತವಲ್ಲಿ ಕೊರಗುವವರ ಹಿರಿಯರು । ಬಲು ಹುಟ್ಟಿರುವಿಂದ ಕರ್ಮ । ಮಲಗಿ ನುಡಿವ ನಂದು ಮುಕುತಿ । ಅಲಿಸಿಕೊಡುವ ಸುಖಿ ಸೋಲುವವರೆ ಹಿರಿಯರು ॥೩॥ ಸಕಲ ವೇದ ಶಾಸ್ತ್ರ ತರ್ಕ । ಮುಖರರಾಗಿ ನಿಜವನರಿವ । ಯುಕುತಿಯುರತು ಕಾಲಕ್ಷೇಪಾಗುವರೆ ಹಿರಿಯರು ॥ ಮುಖಿಸೋಕೊಂಡಕ್ಷರವು ತೋರ । ದಖಿಳ ದಂತ್ಯವರಿದು ಪೂರ್ಣ ಸುಖದಿ ಮುಳುಗಿ ಮೂರ್ಛೆ ಹೋಗುವವರೆ ಹಿರಿಯರು ॥೪॥ ಕರವೆ ದಂಡ ಯೋಗವಷ್ಟು । ಶಿರವೆ ಜಡೆ ನಿರ್ಮಲ ಜೀವ ।

ಪರಮಾದ್ವೈಕ್ಯಪರಿಯುದಿರ್ದೊಡವರೆ ಕಿರಿಯರು || ಕುರಿಯ ಕಾಯುತಿರ್ದೊಡಿರಲಿ |ಪರಮ ಶ್ರೀ ಗುರುಸಿದ್ಧನೊಡನೆ | ಬೆರೆದು ಬ್ರಹ್ಮವಾಗಬಲ್ಲೊಡವರೆ ಹಿರಿಯರು ||೫||

೩೯

ನಿಟಿಲಾಕ್ಷನ ಭಜಿಸೋ ಹೇ ಮನುಜಾ ನಿಟಿಲಾಕ್ಷನ ಭಜಿಸೋ ||ಪ|| ಕುಟಿಲ ಪ್ರಪಂಚದ ಚಟುವಳಿದನುದಿನ ||ಅನುಪಲ್ಲ|| ಜಠರದೊಳು ಪರರಿಗೆ ನೆರೆಹಂಗಾಗುತೆ | ಮರಣವಾಗದೆ ಸುಖಿಯರಾಗಲಿ ನೀ ||೧|| ಈ ಶಿವ ಸಮಯ ಮರೆಸಿಸ ಜನ್ಮವಿ | ಸ್ನೇಹಸುಕೃತಕೆ ಸಿಗದೇ ಸಮಯದಿ ನೀ ||೨|| ಜಡಮತಿಗಳ ನುಡಿಗಡಣಕ ನೀ ನವಿ | ಗೊಡವಾ ಘನಾನಂದದೊಡೆಯನ ಬಿಡದೇ ನೀ ||೩||

೪೦

ಬಸವೇಶಾ ಪಾಲಿಸೋ | ಶಶಿಭೂಷಾಕಾರನೆ ||ಪಲ್ಲ|| ಲೋಕಪಾವನ ಪಿನಾಕಿ ಭಕ್ತಗಣ | ಶೋಭಿರ ಪರಮ ದಯಾಕರ ಗುಣ ||೧|| ನೇಸಿದಾಕ್ಷಣ ಪುಳಕಿತನ ಮಾಡುವ | ನಿಮ್ಮ ಘನನಾಮವನನುದಿನವೋದಿಸಿ ||೨|| ಪ್ರೇಷ ರಚಿತ ಸರ್ವೇಶ ಘನಮರೆ | ನಿವಾಸ ನಿಮ್ಮ ವರದಾಸನೆನಿಸಿ ||೩||

೪೧

ಶ್ರೀಗುರು ಬಸವಲಿಂಗಾಯನಮೋ | ನಿಗಮಾಗಮನುತ ಜಗದೀಶಾ ಭೋ ||ಪಲ್ಲ|| ಕಾರಣ ಕಾರಣ ಕಾರುಣ್ಯಾಕರ | ನಾರುಷಟುಸ್ಥಲಧೀರ ಭೋ ||೧|| ಮಂಗಲನಾಮ ಚಿದಂಗ ಪರಾತ್ಪರ | ಜಂಗಮಲಿಂಗ ಸುಸಂಗ ಭೋ ||೨|| ಇಷ್ಟಪ್ರದಾಯಕ ವಿಶಿಷ್ಟ ವೀರಮತ | ಶ್ರೇಷ್ಠ ಶ್ರೀಘನಮಠದಿಷ್ಟ ಭೋ ||೩||

೪೨

ಸಮಾನ ದೈವವದಾರೋ ಬಸವ ನಿನ್ನ | ಸಮಾನದೈವವದಾರೋ || ಸುಮಾನ ಶಿವಮತಾಭಿಮಾನ ನಿಧೆ ನಿನ್ನ ||ಪಲ್ಲ|| ಸದಾಸುಕವಿನುತ ಪದಾಬ್ಜ ವರದ| ಸದುದಾರ ಪರಮ ಸುಚಿದಾಂಬುನಿಧೆ ನಿನ್ನ ||೧|| ಗಣಾಧಿಪತೆ ಸುರಗಣಾಳಿವರನುತ | ಪ್ರಣಾಮನಿಜವಾಹನ ಮಹಿಮ ನಿನ್ನ ||೨|| ಪುರಾರಿ

ಹೃದಯದಿ ವಿರಾಜಿಸುತಲೀ । ಧರಾತಲದೊಳಿರುವರ ಪೋಷಿಸುವೆ ನಿನ್ನ॥೩॥ ಪ್ರಸಾದತನುಗುರು ಪ್ರಸಾದ ಮನ ಶಿವ । ಪ್ರಸಾದ ಚರ ನಿಜ ಪ್ರಸಾದಮಯ ನಿನ್ನ ॥೪॥ ಷಟ್ಸ್ಥಾದಿ ಗುಣವನ ಕುಠಾರನರಘನ । ವರಾಥಪತೆ ನಿಷ್ಟಾದಿ ಬಸವ ನಿನ್ನ ॥೫॥

೪೩

ಸುಪ್ಪಾರತಿ ಪಿಡಿದೆತ್ತಿರಿ ಕೋಟಿಟಿನ ಸಿದ್ಧಲಿಂಗನಿಗೆ । ಭವಗೆ । ಶ್ರದ್ಧೆಯಿಂದಧರಿರುವ್ಗೆ ಪರಮಪ್ರಬುದ್ಧಾರ್ಜಿತ ಪದಗೆ ಹರಗೆ ॥ಪಲ್ಲ॥ ನಿತ್ಯ ನಿರಂಜನ ನಿರುಪಮ ನಿರ್ಗುಣ ತತ್ವಾಕಾರನಿಗೆ ಭವಗೆ । ಸತ್ಯಜ್ಞಾನವಿರಾಗ ಭಕ್ತಿ ಭಾಪ್ರೋತ್ತರೋತ್ತರಗೆ ಹರಗೆ ॥೧॥ ಬಸವ ಪುರಾತನರನುಮತಿಯಿಂದು ದಯಿಸಿದ ಜಾತನಿಗೆ ಭವಗೆ । ವಸುಮತಿತಿಸ್ಯರಿಗನನುಭವವನು ವಶವಾಗಿರುವಗೆ ಹರಗೆ ॥೨॥ ಅರು ಮೂರು ನಾಲ್ಕೀಪ್ಟೈವಕೆ ದೂರನಾದನಿಗೆ ಭವಗೆ । ಸಾರವೀರ ಸುಪಿತ್ರಾರ ಭಕ್ತ ಸಂಚಾರನಾದನಿಗೆ ಹರಗೆ॥೩॥ ಹುಮ್ಮು ಬಿಮ್ಮುಳಿದ ಚಿನ್ಮಯ ಷಟ್ಸ್ಥಲ ಬ್ರಹ್ಮಾಚಾರ್ಯನಿಗೆ ಭವಗೆ। ಮರ್ಮಾದಿ ತನುಗುಣ ಧರ್ಮವಳಿದ ಪರಬ್ರಹ್ಮ ಮೂರುತಿಗೆ ಹರಗೆ ॥೪॥ ಭೂರಿಪದಂಗಳ ಪಾರದಮಹಿಮಾ ಪಾರಾವಾರನಿಗೆ ಭವಗೆ । ಧೀರ ಘನ ಮಹೋದ್ಧಾರಶರಣಮಂದಾರ ವೀರನಿಗೆ ಹರಗೆ ॥೫॥

೪೪

ಬಸವರಾಜ ಪಾಲಿಸಯ್ಯಾ ಶಶಿಧರಾವತಾರ । ಅಸಮಮಹಿಮಾಗಾರ ಭಕ್ತಿ ಕುಶಲ ಭವವಿದೂರ ॥ಪಲ್ಲ॥ ಬಂದೆ ನಾನಾ ಯೋನಿಗಳೊಳು । ಬಂದು ನೊಂದೆ ಬಹಳ ಈ ॥ ದಂದುಗವನು ಬಿಡಿಸಿ ನಿಮ್ಮ । ಕಂದನೊಲಿಸಿರಳ॥೧॥ ಜ್ಞಾನಹೀನನಾಗಿ ವಿಷಯ । ಕಾನನದೊಳು ದಾರಿ ಸಾ। ಕಾಣದೆ ತಿರುಗಿದೆನು । ನಿಮ್ಮ ನೂನ ಪಥವ ತೋರಿ ॥೨॥ ಶ್ರೀಶ್ವ ಘನಸಮರ ಗುಣಾಗಳಿಷ್ಟ ಮುಕ್ತಿ ಮೂಲ ನಿಜ । ಸ್ಪೈಶ್ವಿಯ ತತ್ತ ಕರ್ಮವನ್ನು ಸುಟ್ಟು ಪರಮ ಜಾಲ ॥೩॥

೪೫

ಎಲ್ಲಿ ಭಕ್ತಿಯುದೆಲ್ಲಿ ಮುಕ್ತಿಯುದೊ । ಈ ಸೂಳೆಮಕ್ಕಳಿಗೆಲ್ಲಿ ಭಕ್ತಿಯುದೆಲ್ಲಿ ಮುಕ್ತಿಯುದೊ ॥ ಎಲ್ಲಿ ಭಕ್ತಿಯುದೆಲ್ಲಿ ಮುಕ್ತಿಯೊ ಕಳ್ಳಹಾವರಗಿತ್ತಿ

ಮಾನವರಿ | ಕುಲ್ಲತನದಲಿ ಚರಿಸಿ ಶಿವಪದವೆಲ್ಲಿ ಕಾಣದೆ ಸಾವುತಿಹರಿಗೆ ||ಪಲ್ಲ| ಒಳ್ಳೇ ನಾಗರ ಹಾವು ಹಿಡಿತಂದು ಗಾರುಡಿಗನಂಗಳ | ದಲ್ಲಿ ಭಲರೇ ಭಲರೇ ಭಲರೆಂದು ಆಡಿಸುತವುದಕೆಬ್ಬಿಲ್ಲಿ ಹಾಕೆರಿರವ್ವಯೆಂದು ಬೇಡಿದರೆನವ್ವ|| ಪಲ್ಲ ಇಲ್ಲೆಂದು ಜಿಗ್ಗೊಳ್ಳೆಂದು ಪಳಿಯುತ್ತ ಭ್ರಷ್ಟರು | ಜೆಲ್ಲಿನಾಕಳ ಹಾಲು ನಾರಿಯರೆಲ್ಲ ಸಂಭ್ರಮ ದಲ್ಲಿ ಹಿಡಿಯುತ | ಕಲ್ಲನಾಗರ ಮೇಲೆ ವ್ಯರ್ಥವಿ ಚಲ್ಲ ತಿಹ ಪಾಪಾತ್ಮರಿಗೆ ಮತ್ತೆಲ್ಲ ||೧|| ಊಣ ನ ಜಂಗಮ ಜೀವವೈತಂದು ಹಸಿವೆನಲು ಮುಂಡಿಸ | ಮನೆಗೆ ಹೋಗೆಲ್ಲೋಕೆ ಸಿಂತೆಂದು ಪಳಿಯುತ್ತಿ ಪಕ್ಷರು | ಕಣಕ ಸಾ ನಾಪವನು ಬಲಿ ಕ ಮ ತೀರ್ಥಾರ್ಥಿಯೊಳು ಘಾ || ರುಗೆಯು ತಿರಗುತ ಬಳಲಿ ನಾಮ ದ ಪರಿಭ್ರಮಿಸುತಲಾಗುತೆ | ಕಣಿತೆಪರ್ ಪುಣ್ಯಾಳ್ಳ ಗಿರಿ ಕಾನನ ಗುಹೆಂಗಳ ಸರಸಿ ಕಷ್ಟದಿ | ಊಣದ ಕಲ್ಲಿಗೆ ಅಟ್ಟ ನೀಡುವ ಬಣಗುಮಾನವ ಪಶುಗಳಿಗೆ ||೨|| ಇಂದು ಒಂದೊತ್ತೆಂದು ಕಲ್ಪಿ ಸುತೆ ಸ್ವರಧರ್ಮ ಪ್ರಾಣನ | ಕೊಂದು ಮಹಾತ್ಮ ದ್ರೋಹಮಾರ್ಜಿಸುತ್ತೆ ಅ ನೇಕಯೊಳು ಹಿರಿಹಂದಿ ಮಾನವರಿ ಮಲವ ಭುಂಜಿಸ ತೆ ಎಮ್ಮೆಗೆ ಹಸು ಮೋ || ಯೆಂದು ದುರ್ಮೋಹದಲಿ ಮಸ್ಕರಿಸುತ ಅಕಟೀ ಘಹಗಳು | ಕಂದು ಗೊರಳನ ಭಕ್ತಿಜ್ಞಾನಾನಂದರಸ ಸ್ಥಿರವಾಗಿರುವುದು ಮನದಿಂದ ಕಾಣದೆ ಸಂಶಯದಿ ಬಹುದಂದುಗಕ್ಕೊಳಗಾದ ಮೂಳಿಯರಿಗೆಲ್ಲ ||೩|| ಮತ್ತೆ ನಾಗರ ಪ ಚಮಿಯಲ್ಲಿ ಜನರೆಲ್ಲ ಹಾಳ ಹುತ್ತ ಹುಡುಕುತ ಹೋಗಿ ತಾವಲ್ಲಿ ನಾಗಪ್ಪ ಎಂದೋದರುತ್ತ ಗಲ್ಲವ ಬಡಿದುಕೊಂಡಲ್ಲಿ ಇಷ್ಟಾರ್ಥಗಳ ಜೇ | ಹುತ್ತಲರಿಷಣದಾರ ಕ್ರೆಯಲ್ಲಿ ಕಟ್ಟಿರುವವರುಗಳ | ಚಿತ್ತ ವೃತ್ತಿ ಪರೀಕ್ಷೆ ಗಾ ಣೆದೆಯೆತ್ತಿಯಾಡಲ್ಕೆನ್ವ ನಾವಿ | ಸ್ವೆತ್ತಪ್ರೋಡಲಿ ಎಂದು ಕಲ್ಮರನೆತ್ತಿ ಹಾಕೆಂದೆಂಬ ಮೂಳಿಯರಿಗೆಲ್ಲ ||೪|| ಉಪವು ಪರಿಪೂರ್ಣಾಸಿಯಾಗದೆ ಅತಿ ಯಾಸೆ ಬಡುತಿಹ | ಚಪಲ ಗುಣವನು ಕೆಟ್ಟು ಪೋಗದೆ ಕ್ಷಾತ್ ತೃಷೆಯು ನಿದ್ರೆಯು | ನಿಷ ನಿರೋಧವನೆಲ್ಲ ನೀಗದೆ ಕರ್ಮಂಗಳೆಲ್ಲವ || ನಸಹರಿಸಿ ನಿಶ್ಚಿಂತರಾಗದೆ ಈ ಪಾಪಿಗಳ್ಳರು | ಅಪರಿಮಿತ ಶ್ರೀ ಘನಮಹೇಶನನುಪಮ ವರಿಯದೆ ಕಂಡಕಂಡವ | ಉಪವಸಂಗಳ ಮಾಡುತಿಹ ಈ ತಪನ ಜಾತನ ಕುರಿಯು ಮರಿಗಳಿಗೆಲ್ಲ ||೫||

೪೬

ಶಿವನಾಮವನುರಸನೆ ಬೇಗನೆ ನೋಡಿ ಶಿವನಾಮವನುರಸನೆ |
ಸಾವಧಾನದಿಂದ ಬೇಡಿಕೊಂಬೆ ಕಾಡದೆ ||ಪಲ್ಲ|| ಸಾಸಿರ ಯೋಗಿಯು
ತಾನೊಂದು ನುಡಿದುದು | ಹೀನ ನರಕದೊಳು ಬಿದ್ದ ಜೀವಿಗಳಿವು ||೧||
ಸತ್ತ್ವೋದ್ಯ ಜ್ಯೋತಿಸ್ವರೂಪ ನಿಸದಾನಂದ | ನಿತ್ಯದರಿವ [illegible] ನುಡಿವು
ಶಿವಸ್ವಯಂಭುವ [illegible] ಲೋಕದ ಜಗದೊಳಗೆ [illegible] ಶ್ರೀ ಘನಮಹಿಮ | ದಾಸಾನು
ದಾಸನಾಗಿ ಘನಸಿರಿ ಸಿದ್ಧಾಶ್ರಮದಿಂದ ೨||

೪೭

ನುಡಿಯ ಬಿರಗ್ಗ ಜಡ ಪ ನುಜರೊಳಗೆ ನ [illegible] ಬರಗ್ಗ | ನುಡಿಯು
ಬರಗ್ಗ ಈ ಪ್ರಪಂಚಯೋಗದ ಟನ ಧ ಹಪಕ್ಕರಿಸ್ಸನರೊಡನೆ ಸಂಪಿರಕೊಡ್ಡ
ಸೀ | ಪಲ್ಲ ಹಿತವ ನುಡಿ ತಿನಿಸು [illegible] ಯಾಗಿ ಗ್ರಹಿಸದ ಮತಿಹೀನರೊಡನೆ
ಕ್ಷೇತ್ರಿಲಿಕ್ಕೆ ಕೊಡ್ಡ ಸೀ ೧|| ನಿಜ ನಡೆನ [illegible] ಗಳ ತ್ಯಜಿಸ ತೀ ಭವಿಯೊಳು
ಕ ಜನರಿನ ನರೊಳು [illegible] ನುಡಿಕೊಡೆಗೊಡ್ಡ ಸೀ ||೨|| ಘನಮ ರವಾಸನ ಗಣ
ವರರಕ್ಷದ ನನ ಶಾಧಮ ರೊಳೊಗೆ ನ ಭವದಂದ ದ ಸೀ ||೩||

೪೮

ದೂಷಣೆ ಮಾಡಲಿದೊಂದೆ ಜನರು | ಭೂಷಣೆ ಮಾಡಲೊಂದೆ |
ಈಷಣತ್ರಯದ ದೋಷಗಳಿದ [illegible] | ಶ್ರೀಗುರುವಾದ ಪರಶಿವಗೆ ಜಗ
ದೊಳು ||ಪಲ್ಲ|| ಪ್ರೀತಿಲಿ ಕರದೊಯ್ದು ತನ್ನ ಶಿವನ | ಮಾತು ಮನ್ನಿಸಲ
ದೊಂದೆ || ಜಾತಿಹೀನನೆನ್ನ ಮಾತಿನಿಂದಲಿ | ಪಾತಕ ಗಳಿಸಲದೊಂದೇ ||೧||
ಮೋಳಿಗೆ ತುಪ್ಪಳ ಮನೆಯೊಳಗಿದ್ದು | ಸೀಕ್ಕವ ನಿಂದಿಲಿದೊಂದೆ |
ನೂಳಿಮಗನೆ ಯಂದೊದರುತ ಬೆರಸಿದ | ಕೊಳ ಜಾಗಲದೊಂದೆ ೨||
ಆಯ್ಕೆಯ ಕೊಂಡೊಯ್ಯನೆ ಘನತರ | ಯಯ್ಯದೊಳಿರಿಸಲದೊಂದೆ || ಕ್ರೈಯ
ಬಿಡದು ಯಳಬೆಳದು ನೂಕುತಲಿ | ತೊಯ್ಯಲು ಬಯ್ಯಲದೊಂದೆ ೩||
ಬಲ್ಲವರಿಂದುಲ್ಲಾಸಿಸಿ ಪಾಡುತ | ಪಲ್ಲಕ್ಕಿ ಮೆರೆಯಲಿದೊಂದೆ ಸಲ್ಲದಿವಸ
ಬಲು ಕಳ್ಳನೆ ದು | ಪುರದಲ್ಲಿಂದ್ಯೋರಡಿಸಲದೊಂದೆ ೪|| ಶಿವಚರಣಂ
ಗಳು ಪೂಜಿಸುವಂದವರಿಗೆ | ವಿನಯಾವಿನಯಗಳೊಂದೇ | ಘನಮಹೇಶನೊಳ
ಗನುದಿನ ಬೆರೆ | ದಿಡುವನಿಗೆ ಶುಭಾಶುಭವೊಂದೇ || ೫ ||

೪೯

ಏನಾದಿ ಮನುಜಾ ಏನಾದಿ । ಶಿವಜ್ಞಾನವರಿಯದೆ ನೀನೆಲೆವಾದಿ ॥ಪಲ್ಲ॥ ಕಾಶಿ ಹಂಪೆ ಕೇದಾರ ಪರ್ವತ । ನಿವಾಸಿ ಎನಿಸಿ ನೀನೇನಾದಿ । ಆಶ ಪಾಶದೊಳು ಸಿಲ್ಕಿ ಹೊರಗೆ ಸನ್ಯಾಸಿಯಾಗಿ ನೀನೇನಾದಿ ॥೧॥ ವೇದ ವೇದಾಂತ ಶಾಸ್ತ್ರಾಗಮತರ್ಕವನೋದಿ ಬಳಲಿ ನೀನೇನಾದಿ । ವೇದಿಸಿ ಯೊಳು ಬರೆಬೋಧಪಡೆದುದರ । ನಾದವಾಲಿಸಿ ನೀನೇನಾದಿ ॥೨॥ ಚಪಲ ತನದಿ ಬಹು ಜಪವನೆಣಿಸಿ ಘೋರ ತಪವ ಮಾಡಿ ನೀನೇನಾದಿ ॥ ಕಪಟ ಲಾಂಛನವನು ತಾಳುತೆ ಮತ್ರ್ಯದೊಳು ನಿಪುಣನೆನಿಸಿ ನೀನೇನಾದಿ ॥೩॥ ಸ್ನಾನ ಮೌನನೇಮ ಧ್ಯಾನಕ್ರಿಯಾ । ಧ್ಯಾನಾನುಷ್ಠಾನವ ಮಾಡಿ ನೀನೇನಾದಿ॥ ಪ್ರಾಣಾಪಾನಗಳನು ಮಾಣದೆ ಬಂಧಿಸಿ ಮೌನಪೂರ್ಣ ನೀನೇನಾದಿ ॥೪॥ ಸೃಷ್ಟಿಯೊಳಷ್ಟ ವಿಧಾರ್ಚನೆ ಕ್ರಿಯೆಗಳ । ಮುಟ್ಟಿ ಮಾಡಿ ನೀನೇನಾದಿ ॥ ಶ್ರೇಷ್ಠ ಶ್ರೀ ಘನಮರವಾಸನನರಿಯದೆ । ಕಷ್ಟಬಟ್ಟು ನೀನೇನಾದಿ ॥೫॥

೫೦

ಶಿವ ಶಿವ ಶಿವ ಎನ್ನಲೆ ಮನುಜಾ । ಭವ । ಭವಬಂಧನವಳಿವುದು ಸಹಜ ॥ ಕುವಲಯದೊಳ್ಮರೆದಿದೆ ನಿಜ । ನಿನ । ಗವನತನಾಗುವ ನಿನ ತನುಜ ॥ಪಲ್ಲ॥ ಆ ವಿಟಕ್ರೀತನು ಕಳತಂದಾ । ಮೃದು । ಶಾವಂತಿಗಿಯು ಲಭ್ಯವಿಗೊಂಡ ॥ ತೀವಿ ಬೀಳೆ ಶಿವನಿಗಿದೆಂದಾ । ಖಲರೆಕ್ಕೈವಲ್ಯಕೆ ಪೋದವ ರಿಂದ ॥೧॥ ಕಡುಪಾಪಿಷ್ಟ ವಿದಳನಾಗ । ಮಡಿಪಡೆಯೊಳು ಹರವೆನ ಲ್ಯಾಗ ॥ ಮೃಡನು ಮೆಚ್ಚಿ ತನ್ನ ಪುರದೀಗ । ಭವತಡೆಯದಿತ್ತ ಕಾರಣ ದೀಗ ॥೨॥ ಅಜಭಾವದಿ ಗೋವತ್ಸವ ವಧಿ । ನಿಜಗದೊಳರಿಯನೈ ನಾಸಿ ದನು ॥ ಮಾಜಶಿವ ಯನಲಾ ಸತಿಯಳನು । ಶಿವ ನಿಜಪುರಕೊಯ್ದುವ ತಿಳಿದು ಇದನು ॥೩॥ ತವೆ ಬಿಲ್ಲೇಶ್ವರ ಜೊಮ್ಮನು ತಾ ರೌರವನರಕದಿ ತಾ ಬಿದ್ದಿರುತೆ ॥ ಸವಿನಯದಿಂದಲಿ ಶಿವದಿಡುತ । ಕಲುಷವ ನೀಗಿದ ತಿಳಿದಿ— ದತ್ತಂತ ॥೪॥ ಜನನ ಭಟರು ಬಲುಕನಿಸಿಂದ ಕಾ । ಡುವ ವೇಳೆಯೊಳು ರಸನೆಯಿಂದ ॥ ಶಿವನ ನೆನವದಾಗದು ಮುಂದೆ । ಘನಮಠೇಶನ ವರದನ ದಯದಿಂದ ॥೫॥

೫೧

ಮಾಡೊ ಗುರುಭಜನೆ ನಿಜದೊಳು ಕೂಡುತಲಿ ನರನೆ ॥ ಮಾಡೊ ಗುರುಭಜನಾದಿ ಪಾಡುತೆ ಗಾಢ ಜಗದೊಳು ಪ್ರೀತಿಯಿಂದಲಿ। ಮೂಢ ಮತಿಗಳ ಕೂಡಿಯಾಡದೆ। ನಾಡೆ ಭಕ್ತರ ನೋಡಿ ಮನದೊಳು ॥ಪಲ್ಲ॥ ಕೋಪಗುಣ ಸಂತಾಪನೆಂಬತಿ। ಪಾಪಮತಿಗಳಿಪಾಪರನು ಗುರು। ಶ್ರೀಪದಾಬ್ಜ ಪ್ರತಾಪನಂ ನೆನೆ। ಸ್ಥಾಪಿಸುತೆ ಚಿದ್ರೂಪನಾಗಿ ॥೧॥ ನೋಡಿ ಕೆಡುವತಿ ಘೋರತರ ಸಂ। ಸಾರ ಭೋಗಕೆ ಜಾರದೆ। ಸುವಿಚಾರದಿಂ ನಗುರೋರಧಿಕನೆಂ। ಬೀ ರಹಸ್ಯವ ಬೀರವನುದಿನ ॥೨॥ ನೋಸ ಮಾಡುತಹಾಸೆ ಮೂರನು। ದೇಶಿಕನು ಗುರುಗೋವಿಂದನೊಳನೀ। ಗಾಸಿಯಾಗದ ಆಸ ಘನ ಮರವಾಸಗನು ದಿನ ನಾಶನಾಗುತೆ ॥೩॥

೫೨

ನೋಡಲಾಗದೆ ದೇವ ನೋಡಲಾಗದೆ। ಕೂಡೆ ನಿನ್ನ ದಿಕ್ಕು ಮೂರು ನಾಡಲೀಸು ಮಾಡಲಿನ್ನು ॥ಪಲ್ಲ॥ ಮುಸುಕಲೀಯುವೆನ್ನ ಮೋಹ ವಿಸರವೆಂಬ ವನವನುರುಪಿ। ಭಸಿತವೆನಿಸಿ ಮಿತ್ರ ನಿನ್ನನುಸಲಿಸಲ್ಕೆ ನೇತ್ರಬಾದ ॥೧॥ ಕಲುಷ ತಿಮಿರ ಮುಸುಕಿ ಮುಗಿದು ನಲಿದು ಎನ್ನ ಹೃದಯ ನೇನ। ಪಲಿರೆ ದಿವ್ಯ ರೂಪ ನಿನ್ನ ಬಲಿದ ಧ್ಯಾನ ನಯನದಿಂದ ॥೨॥ ಕರುಣಾ ಕುಲಜ ಕೋರ ತಣಿಯೆ ಹರುಷ ಶರಧಿ ಪೋರಲಿನ್ನು। ವರದ ಶಂಭುಲಿಂಗವಾಮ ದುರುಸುಧಾಕರಾಕ್ಷಿಯಿಂದ ॥೩॥

೫೩

ಮಾಡಲಿಲ್ಲವೇ ತಪವನು ಮಾಡಲಿಲ್ಲವೇ। ಕೂಡೆ ಸುಗುಣದೊಡನೆ ತಿಳಿದು ನೋಡಿ ತ್ರಿವಿಧ ಕರಣದಲ್ಲಿ ॥ಪಲ್ಲ॥ ಗುರುಭಜನೆ ಸುಕರ್ಮವೃತ್ತಿ ಹರನ ಪೂಜೆ ಶರಣ ಸೇವೆ। ಪರಮ ಸಾತ್ವಿಕಂಗಳುಂಟು ನೆರೆದು ನೆಲಿಸಿ ತನುವಿನಲ್ಲಿ ॥೧॥ ವಿನಯುವನ್ನು ಓತನತರ್ಕ ವಚನಸರಬ್ಬುವಚಲಿತಾರ್ಥವನ ಘನಮಂತ್ರವಾಗಮಂಗಳಿನಿತು ಪಿಡಿದು ವಚನದಲ್ಲಿ ॥೨॥ ಶಮೆ ವಿವೇಕ ವಾತ್ಮನಿಷ್ಠೆ ದಮೆ ದಯಾ ವಿರಕ್ತಿ ಯೋಗ। ವಿಮಲ ರೂಪ ಶಂಭುಲಿಂಗ ಮಮದುರ್ಗ ತೋರೆ ಮನದಲ್ಲಿ ॥೩॥

ವರಭಕ್ತರಿಂದೆ ಸಚ್ಚರಿತವೊಂದುಂಟೆ । ಗುರುಸಂಭುಲಿಂಗದಿಂ ಪರಶೈವ ಮುಂಟೆ ॥೫॥

೫೭

ಬೇಡುವೆನಭವ ನಿಮ್ಮನು ಭವಭವದೊಳು । ಮಾಡೆನಗೊಲಿದು ಸುಗುಣ ಸಂತತಿಯನಿಂತು ॥ಪಲ್ಲ॥ ಒಡೆಯನಿರಿಸಿದ ಸೇವೆಯೊಳು ಧೈರ್ಯ ವನು ಪಡೆದು ಜೀವಿಸ ಬೇಡೆನೊಳು ವಿನಯವನು । ಕಡು ಜನ್ಮನ ದೊಳು ನಿಶ್ಚಿತ ಪೋಗದಿಹದನು । ಬಿಡದೆ ಸುಮನಸೆನಿಪನತಿ ಭಕ್ತಿ ವನು ॥೧॥ ಕುಸುಮವಿಪುಲ ಪೇಳಿದೆ ನಿಟೊಳ್ಪ್ರಭಿಸು । ಪ್ರಿಯಸಲ್ಲಿ ಯೂ ನುಡಿಯುವ ಸತ್ಯವಿದನು ॥ ಮುಸುಕಿಸುಪಿಹ ಪ್ರಜ್ಞಾನ ಸು ನೇತ್ರಿಯನು ಶಾಂತ । ರೊಸೆದಪುದೆ ಮ ಬಣ್ಣಸುವ ವರ್ತನವನು ॥೨॥ ವಿತರಣ ದೊಡನೆ ಭೋಗಸುಪರ್ಣದೊದವನು । ಹಿತವಚನದೆ ತೊಡವೆನಿಸಿಪ ದಾನ ವನು ॥ ಕ್ಷಿತಿಜೋಭನಿಯೊಳು ರತಿಯುಳ್ಳಪುದವನು । ನ ತಪಿಸ್ತ್ರ ಕ್ಷಿಸಾ ರುತಿಹ ಮನೋರಥವನು ॥ ಕೋಪವಂಟದ ಚಪಸನು ಸದಮಧುಪಿನ । ರೂಪಗರ್ವವಸದ ಕರಣ ನಿಜದವನು । ರೂಪವಡು ಕೆಡಿಸದ ನಾದ ಸುಖ ವನು । ಕಾಟ್ಕನಿಲ್ಲದಾಶ್ರಯ ಧರ್ಮರತಿಯನು ॥೩॥ ಧರೆಯೊಳತ್ಯಧಿಕ ವೆನಿಪ ಶಾಂತಿ ಮತವನು । ಕರುಣಾಪಿತ್ಯಗಳ್ಳ ಗುರುಭಜನೆಯನು ॥ ಪರ ತರ ಮುಕ್ತಿಪೋಗುವ ಶಾಸ್ತ್ರವನು ಕಂಡು । ಹರ ಸಂಭುಲಿಂಗ ನಿಮ್ಮ ಡಿಯ ಭಕ್ತಿಯನು ॥೪॥

೫೮

ಪಾಲಿಸೆನ್ನನು ಪದುಮವೆರಸಿ ಪರಶಿವನಿಗತಿ । ಸೋಲಿನಿಪ ಸುಗುಣ ಸಂಪನ್ನೆ ಶರ್ವಾಣಿ ॥ಪಲ್ಲ॥ ಜಲೆ ಮರಣವನು ಜಯಿಸಿದಮೃತಸೇವನೆ ಯುಳ್ಳ । ಹರಿಯಜಾದಿಗಳ ಬಲುಹನುಪಹರಿಸಿದಾ ॥ ಗರಳವನು ಸಲಿ ದುಂಡು ಹರನಕಳಕವನಳಿದಳಾ । ಸುರತೆ ನಿನ್ನೈಶ್ವರ್ಯದಾಳಿಯು ಮುಡಿವೆ ಗಿರಿಜೆ ॥೧॥ ಮೇಳ ಮೆಸಪಲ್ಲವಭವನು ನಿನ್ನ ದೆಸೆಯಿಂದ । ಫಾಲಲೋಚನ ನೆನಿಸಿ ನಿಟಿಳ ನಿರ್ಜರರ । ಮೇಳಕಧಿಪತಿಯಾದ ನೆಂದೊಡಾಗಮ ನಿಗಮ । ಜಾಲವೈದುವದೆ ನಿಜನತಿಗೆ ನಗಜಾತೆ ॥೨॥ ನಿನಗೆ ತನ್ನರೆಯೊ ಡಲನೊಲಿದಿತ್ತನೀಶನಂ । ವೆನುತಿಹರು ತಿಳಿದು ನೋಡದೆ ಕವೀಶ್ವರರು ॥

ಮನಸಿಜಾರಿಗೆ ಮಾತ್ರವೆಯೆ ಮಾರ್ಗಣವೆನಿಸಿ । ಸಮಗೊಳಿಸಿ ಪ್ರಾಜ್ಯ ನೆನಿಸಿದೆ ಲೋಕಜನನಿ ॥೭॥ ಜಪಿಗಷ್ಟ [illegible] ಕೂಟ ವ್ಯ ಪೊದೆದ ಬಾಯಿಯ [illegible] ಜಪದ [illegible] ರವ್ಯನಿಗೆ ನೀನೊಲಿದು ಕೈವಿಡಿದು ಪಾವನ [illegible] ॥೮॥ [illegible] ಸಕಲ ಸಿದ್ಧಿ ಸಂಪದ [illegible] । [illegible] ॥ ಗುರುರೂಪ ಲಿಂಗ [illegible] । [illegible] ಲೆನಿಸಿದೊದೆ [illegible] ॥೯॥

೫೯

ಸಕಲಕಿಲ್ಬಿಷ ನೀನೆ । ಅಕಳಂಕ ಗುರು ನೀನೆ । [illegible] ತಿರಲುರಿಪಿನ [illegible] ॥ [illegible] । [illegible] । ಹರನ ನೀನೆನಗೆ [illegible] । [illegible] । [illegible] ದೆನಗೆ । ಆರ [illegible] । [illegible] ವರ [illegible] । [illegible] ಘಂಪ್ಸ್ತಿ [illegible] ಪೋರಾಟ [illegible] । [illegible] ॥ ಆರು ತೆರೆದು [illegible] ನೀನು । [illegible] । [illegible] ಲಿಂಗವೇ ॥೧॥

೬೦

ಎನ್ನ ಕಾಯವು ನಿನಗೆ । ಎನ್ನ [illegible] । [illegible] ನಗೆ ಭವ [illegible] ಎನೆ ಲಿಂಗವೇ ॥೧॥ ಎನ್ನ [illegible] ಭಕ್ತಿ । ಎನ್ನ ಒಡಲೇ ನಿನಗೆ [illegible] ॥ ಎನ್ನ [illegible] । ಎನ್ನ [illegible] ಮನಸಕ್ತೆ । ಎನ್ನ ಶಿರ [illegible] ಎನ್ನ [illegible] ಮುಖ । ಎನ್ನ ನಾಲಿಗೆ [illegible] । ಎನ್ನ [illegible] ಗೆ । ಎನ್ನ [illegible] ದ್ವಾರ । ಎನ್ನ [illegible] ಅವಕೆ । ಎನ್ನ [illegible] ಕದ ಸೂಸಕಗಳ ॥೨॥ ಎನ್ನ [illegible] । ಎನ್ನ [illegible] । ಎನ್ನ [illegible] ಸೌರಭ್ಯ ರಸಘಟಿತವು [illegible] ಎನ್ನ [illegible] ಉಪಕರಣವೆಂತೆಂದೆನೆ ॥೩॥ ಎನ್ನ [illegible] । ಎನ್ನ [illegible]

ಪರಭಕ್ತಿಯಿಂದೆ ಸಚ್ಚರಿತವೊಂದುಂಟೆ । ಗುರುಶಂಭುಲಿಂಗದಿಂ ಪರದೈವ ವುಂಟೆ ॥೫॥

೫೭

ಬೇಡುವೆನಭವ ನಿಮ್ಮನು ಭವಭವದೊಳು । ಮಾಡೆನಗೊಲಿದು ಸುಗುಣ ಸಂತತಿಯನಿಂತು ॥ಪಲ್ಲ॥ ಎಡರಡಿಸಿದ ವೇಳೆಯೊಳು ಧೈರ್ಯವನು ಸಿರಿ। ಪಡೆದು ಜೀವಿಸುವೆಡೆಯೊಳು ವಿನಯವನು ॥ ಕಡು ಜವ್ವನದೊಳ್ ವಿಸ್ಮೃತಿ ದೋರದಿಹುದನು । ಪಿಡಿದ ನೇಮವನೆಡೆವಿಡದತಿ ಛಲವನು ॥೧॥ ಅಸುವಳಿಯಲು ದೇಹಿಯೆನಲೊಲ್ಲದಘಟನು । ಪುಸಿಯನೆಲ್ಲಿಯೂ ನುಡಿಯದ ಸತ್ಯವಿದನು ॥ ಮಸಳಿಸದಿಹ ಪುಣ್ಯಾವಳಿ ಕೀರ್ತಿಯನು ಶಾಂತ । ರೊಸೆವಹುದೆಂದು ಬಣ್ಣಿಸುವ ವರ್ತನವನು ॥೨॥ ವಿತರಣದೊಡನೆ ಭೋಗಿಸುವರ್ಥದೊದವನು । ಹಿತವಚನವೇ ತೊಡವೆನಿಸಿವ ದಾನವನು ॥ ಸ್ತುತಿ ಜೋಷನೆಯೊಳುಪರತಿಯಿಲ್ಲದಿಹುದನು । ನುತಿವೆತ್ತ ಕೈಸಾರುತಿಹ ಮನೋರಥವನು ॥೩॥ ಕೋಪವಂಟದ ತಪವನು ಪರವಧುವಿನ । ರೂಪಗಂದೆಳಸದ ಕರಣ ವಿಜಯವನು ॥ ತಾಪವಡರಿ ಕೆಡಿಸದ ಸಾರ ಸುಖವನು । ಕಾಪಟ್ಯವಿಲ್ಲದಾಶ್ರಮ ಧರ್ಮರತಿಯನು ॥ ೪ ॥ ಧರೆಯೊಳತ್ಯಧಿಕವೆನಿಸಿವ ಶಾಂತಿ ಮತವನು । ಕರುಣವಿದ್ಯೆಗಳುಳ್ಳ ಗುರುಭಜನೆಯನು ॥ ಪರತರ ಮುಕುತಿದೋರುವ ಶಾಸ್ತ್ರವನು ಕಂಡು । ಹರ ಶಂಭುಲಿಂಗ ನಿಮ್ಮಡಿಯ ಭಕ್ತಿಯನು ॥ ೫ ॥

೫೮

ಪಾಲಿಸೆನ್ನನು ಪದುಳವೆರಸಿ ಪರಶಿವನಿಗತಿ । ಮೇಲೆನಿಪ ಸುಗುಣ ಸಂಪನ್ನೆ ಶರ್ವಾಣಿ ॥ಪಲ್ಲ॥ ಜರೆ ಮರಣವನು ಜಯಿಸಿದಮೃತಸೇವನೆಯುಳ್ಳ । ಹರಿಯಜಾದಿಗಳ ಬಲುಹನಪಹರಿಸಿದಾ ॥ ಗರಳವನು ನಲಿದುಂಡು ಹರನಳುಕದುಳಿದಭಾ । ಸುರತೆ ನಿನ್ನೈರದಾಳಿಯ ಮಹಿಮೆ ಗಿರಿಜೆ ॥೧॥ ಹೇಳ ಹೆಸರಿಲ್ಲದಭವನು ನಿನ್ನ ದೆಸೆಯಿಂದ । ಫಾಳಲೋಚನನೆನಿಸಿ ನಿಖಿಳ ನಿರ್ಜರರ ॥ ಮೇಳಕಧಿಪತಿಯಾದ ನೆಂದೊಡಾಗಮನಿಗಮ । ಜಾಲವೈದುವವೆ ನಿಜನುತಿಗೆ ನಗಜಾತೆ ॥೨॥ ನಿನಗೆ ತನ್ನರೆಯೊಡಲನೊಲಿದಿತ್ತನೀಶನೆಂ । ದೆನುತಿಹರು ತಿಳಿದು ನೋಡದೆ ಕವೀಶ್ವರರು ॥

ಮನಸಿಜಾರಿಗೆ ಮಂತ್ರಮಯ ಮೂರ್ತಿಗಳನು ನೀ । ನನುಗೊಳಿಸಿ ಪೂಜ್ಯ
ನೆನಿಸಿದೆ ಲೋಕಜನಕೆ ॥೩॥ ಜಡೆಗಟ್ಟಿ ತಿರಿಮುಂಡ ಸರುಳಗಳ ಕೂಡಿ ವ್ಯ
ಮೊದೆಮ: ಬೂದಿಯ ಸು ಸುಮನಾಮಮೊಂತಿ । ಜತೆಗೆತಿವಿದೆವ ರುದ್ರನಿಗೆ
ನೀನೊಲಿದು ಕೈನೀಡಿದು ಪಾವನ ಚರಿತನೆನಿಸಿದೆ ಭವಾನೀ ॥೪॥ ನಿರಿಸಕಲ
ಸಿಷ್ಟಿ ಸಂಪದ ವಿಷ್ಟಿಷ್ಟಿಪಾದಿ । ಸಂಸರಮೊಳೊಂದು ನೀನು ಧರಿಸಿದರಲು ॥
ಗುರುಲಿಂಗಲಿಂಗದೊಳಾನಂದವಿರಿಸಿ । ಸರಸ ಮನದೊಳು ನೀಲು
ಲೀಲಸಿದೊಡೆ ಗೌರಿ ॥೫॥

೫೯

ಸಕಲಕೆಲ್ಲಕೆ ನೀನೆ । ಅಕಳಂಕ ಗುರುವೆಂದು । ನಿಟಿಲ ಸ್ತ್ರವು ಪೇಳು
ತಿರಲರಿದೆನು ॥ಪಲ್ಲ॥ ಎರಗಂಬಳಿಯು ಸಿದ್ಧ । ನರಲಿಂಗನಾಮು । ಹರನೆ
ನೀನೆನಗೆ ಒಲ್ದೆಯು ಮಾಡಿದೆ । ಪರಮಪದರಿಯು । ಪರನಾನ ಒಡೆನಗೆ ।
ಆರ ಓಬರಿ ಶಿವಶಾಸ್ತ್ರದನುಭವವನು ॥೧॥ ಅವರವರ ಪರ ಶಸಕೆ । ಅವರ
ವರ ಪೇಳಿದಲಿ । ಅವರವರಿಗೆಲ್ಲ ಗುರು ನೀನೊಬ್ಬನೆ । ಅವರವರ ಭಾವಕ್ಕೆ
ಅವರವರ ಪೂಜೆಗಂ ಅವರವರಿಗೆಲ್ಲ ದೇವ ನೀನೊಬ್ಬನೆ ॥೨॥ ಹೋರಾಟ
ವಿಸ್ತರಿಸಲು ಬೇರಾವದುಳ್ಳದೆ । ಬೇರೆ ಜಗದೊಳಗೆ ಎಲೆ ದೇವನೇ ॥
ಆರು ಅರಿವರು ನೀನು । ಬೇರಾದ ಹರಿಗಳು । ನಾನಾರು ಶಿವಷಡಕ್ಷರಿ
ಲಿಂಗವೇ ॥೩॥

೬೦

ಎನ್ನ ಕಾಯವು ನಿನಗೆ । ಉನ್ನತಾಲಯವಾಯು । ತನ್ನಿನಗೆ ಭವ
ವೃಂಟೀ ಎಲೆ ಲಿಂಗವೇ ॥ಪಲ್ಲ॥ ಎನ್ನ ಕಾಲುಗಳಿರಡು ಉನ್ನತದ ಕಂಭವೈ ।
ಎನ್ನ ಒಡಲೇ ನಿಮಗೆ ದೇವಾಲಯು ॥ ಎನ್ನ ತೋಳುಗಳೆರಡು । ಉನ್ನತದ
ಮದನಕೈ । ಎನ್ನ ಶಿರ ಸೌವರ್ಣ ಕಲಶವು ॥೧॥ ಎನ್ನ ಕಿವಿ ಕೀರ್ತಿ
ಮುಖ । ಎನ್ನ ನಾಲಿಗೆ ಘಂಟೆ । ಎನ್ನ ನಯನಗಳೆರಡು ಜ್ಯೋತಿ ನಿಮಗೆ ॥
ಎನ್ನ ಮುಖವೇ ದ್ವಾರ । ಎನ್ನ ದಂತವೆ ಅದಕೆ । ಮಿನ್ನತಿಹ ಮಾಸ್ತ್ರಕದ
ಸೂಸಕಗಳು ॥೨॥ ಎನ್ನಧರಜಮಳಿಗದ । ಎನ್ನ ನಾಸಾಪುಟವು । ನನ್ನಯಾಂ
ಸೌರಭ್ಯ ರಸಘಟಿತವು । ಚನ್ನಾಗಿ ಪೇಸುವ ಹೊಸ್ನ ಜಾಳಿಂಪ್ರಸ್ತೆ ಇನ್ನುಳ್ಳ
ಉಪಕರಣವೆಂತೆಂದೆನೆ ॥೩॥ ಎನ್ನ ನಮತೆಯೆ ಜಲವು । ಎನ್ನ ಸದ್ಗುಣ

ಗಂಧ । ಎನ್ನ ನಿತ್ಯತ್ವವೇ ಅಕ್ಷತೆಗಳು ॥ ಎನ್ನ ಜ್ಞಾನವೇ ಪುಷ್ಪ । ಎನ್ನ ಭಕ್ತಿಯೇ ಬೋನ । ಎನ್ನ ಮನವೇ ಶಿವಗೆ ಪೂಜಾರಿಯು ॥೪। ಇಂತಪ್ಪ ಪೂಜೆಯನು ಸಂತಸದಿ ಕೈಕೊಳುತ । ಕಂತುಹರ ಶಿವಷಡಕ್ಷರಿ ಲಿಂಗವು ॥ ಮುಂತೆ ಎನ್ನೊಳಗೆ । ನಿಶ್ಚಿಂತನಾಗಿರುತಿರಲು । ಚಿಂತೆಯುಂಟೇ ಹಲವು ಭವಭೀತಿಯು ॥೫॥

೬೧

ಎನಿಸನೋದಿ ಫಲವದೇನು । ಎನಿಸ ಕೇಳಿ ಫಲವದೇನು । ಮನಸು ತನ್ನ ದುರ್ಗುಣಗಳ ಬಿಡದು ಶಿವಶಿವ ॥ಪಲ್ಲ॥ ಇಂದುಧರನ ಚರಣದಲ್ಲಿ ಹೊಂದಿ ಸುಖದೊಳಿರದು ಮನವು । ಕಂದದನ್ನ ಬಿಡಯುದತ್ತ ಹರಿವುದೆಂತೆನೆ ॥ ಒಂದು ಶುನಿಯು ಓಡಿದು ತಂದು ಚಂದಣವನು ಸಿರಿಸಿರಲು । ಮುಂದೆ ಅಡಗ ಕಂದು ನೆಗೆದ ಮಾಳ್ಕೆಯಾಯಿತು ॥೧॥ ಸೊಗಸು ಶಿವನ ಮಂತ್ರವನ್ನು ನೆಗಳುವುದಕೆ ಎನ್ನ ಜಿಹ್ವೆ । ಸೊಗಡಿಸುವದು ಕೀಳು ನುಡಿಯೊ ಒಲಿವುದೆಂತೆನೆ ॥ ಹಗಲು ಇರುಳು ತನ್ನ ಬಾಯ । ಸಿಗುವುದುಯು ದಂತೆ ನಾಯಿ । ಜಗುಳುವುದಕೆಯುಲಿಸದಂತೆ ಜಿಹ್ವೆಯುಲಿಸದು ॥೨॥ ಮಂಗ ಳಾತ್ಮ ಷಡಕ್ಷರಿಯ ಲಿಂಗದಡಿಯ ಪೂಜಿಸುವಡೆ ಕೊಂಗಿ ಮನವು ಸ್ವಸ್ಥಿರ ವನು ಐದದೆಂತೆನೆ ಓಂಗದೊಲಿದ ಘನಸುಗಂಧ । ಸಂಗಡಿಸುತ । ತೊಡೆಯೆ ಹಂದಿ । ಹಾಂಗೆ ಇರಬೆ ಗಂಜಳಕ್ಕೆ ಓಡುವಂದದಿ ॥೩॥

೬೨

ಎನಗೆ ಭೋಗ ಭಾಗ್ಯ ಬೇಡ । ಎನಗೆ ಜಪವು ತಪವು ಬೇಡ । ಎನಗೆ ನಿಮ್ಮ ತೊತ್ತು ಸೇವೆ ನಿತ್ಯವಾಗಲೈ ॥ಪಲ್ಲ॥ ಎನ್ನ ಕಂದಿಸುತ್ತ ಬಹಳ ಎನ್ನ ಬಾಧಿಸುತ್ತ ಬಿಡದೆ । ಎನ್ನದೊಂದು ನೆವಗಳಿಂದ ಕಾಡಿದವರಿಗೆ ॥ ಎನ್ನ ಕೊಂದಡವರಿಗೆಲ್ಲ । ಎನ್ನ ಪೂಜೆ ಫಲಗಳೆಲ್ಲ ಉನ್ನತದೊಳಗವರಿಗಾಗಿ ಸುಖದಿ ಬಾಳಲಿ ॥೧॥ ಓಂದೆ ಎನ್ನ ಬೈದವರಿಗೆ । ಮುಂದೆ ಎನ್ನ ಬೈದವರಿಗೆ। ಕುಂದದೆಲ್ಲ ಜನರ ನಡುವೆ ಬೈದಡವರಿಗೆ ॥ ಇಂದುಧರನ ಕರುಣದಿಂದೆ । ಅಂದಣವನು ಏರುವಂತೆ । ಕುಂದದೊಲಿದು ಅವರಿಗೆಲ್ಲ ಭೋಗವಾಗಲಿ ॥೨॥ ಹಿಂಗದೆನ್ನ ನಿಂದಿಸಿದ ಜ । ನಂಗಳೆಲ್ಲ ಸುಖದೊಳಿರುವ । ಹಾಂಗೆ ಶಿವನು

ಅವರಿಗೆಲ್ಲ ಭಾಗ್ಯವೀಯುತಿ | ಮಂಗಳಾತ್ಮ ಷಡಕ್ಷರಿಯು ಲಿಂಗ ನಿನ್ನ ತೊತ್ತು ಸೇವೆ ಸಾಂಗವಾಗಿ ಬಡವೆ ಎನಗೆ ನಿತ್ಯನಾಗಲ್ಕೆ ||೩||

೬೩

ತನುವಿಡಿದ ದಕ್ಕುವ | ನಿನಗಿನ್ನು ಪೇಳುವೆನು | ಮನನೊಲಿದು ಕೇಳು ನೀನತಿಯಾಪ್ತನೆ ||ಪ|| ಅನ್ನ ಉದಕದ ಚಿಂತೆ | ಎಣ್ಣೆ ಸೀರೆಯ ಚಿಂತೆ ಬಣ್ಣ ಬಳೆದಾಭರಣ ನೋಡುವ ಚಿಂತೆ || ಹೆಣ್ಣು ಮನೆಗಳ ಚಿಂತೆ | ಹೊನ್ನು ಹೆಣ್ಣಿನ ಚಿಂತೆ ಇನ್ನು ಪುತ್ರರ ಜೀವ ಬಳಲ್ಕೆ ಚಿಂತೆ ||೧|| ಅರಸುಗಳ ಭಯವಿದಕೆ | ಚರಿಸು ಚೋರರ ಭಯವು | ಮರಳಿ ಅಗ್ನಿಯ ಭಯವು ನೀರ ಭಯವು || ಉರಗ ವ್ಯಾಘ್ರನ ಭಯವು | ಅತಿರೋಗಗಳ ಭಯವು | ಪರ ಕಷ್ಟ ತನುವಿದಕೆ ಭಯವು ನೋಡಾ ||೨|| ಶೀತೋಷ್ಣಗಳ ಭೀತಿ ಭೂತ ಪ್ರೇತದ ಭೀತಿ ಓತು ನಡೆಯುವ ಮಾರ್ಗ ನಡುವ ಭೀತಿ || ಮಾತು ಮಾತಿನ ಭೀತಿ | ರಾತ್ರಿ ಹಗಲಿನ ಭೀತಿ | ಈ ತನುವ ಹಿಡಿದಿರ್ದ ಭೀತಿ ನೋಡಾ ||೩|| ಆಗಲವಕೇನೆನಲು | ನೀಗಿಸಲು ನಿನಗಿವನು | ಆಗಬಹುದೆ ಭವಗಳನು ಪುಳ್ಳೆತನಕ || ಆಗ ಹುಟ್ಟಿದ ಬೀಕ | ಜೋಗ ನಡೆಸುವ ಬೇಗೆ ಮಾನಸೀ ನೀನು ನಂಬಬಹುದೇ ||೪|| ಇಂತಪ್ಪ ತನುವಿನ ಚಿಂತೆಯಿಂದಾಲಿಂಗ | ಭ್ರಾಂತಿ ಯೊಳಗಿರು ನಿನಗೆ ಸುಖ ತಪ್ಪದು | ಸಂತೆ ಸಿನ್ನವನು ತನ್ನ ಮನದೊಡವ ನೊಲಿದು | ಕಂತು ಹರನ ಷಡಕ್ಷರಿಲಿಂಗವು ||೫||

೬೪

ಧರೆಯುತ್ತಲಿನ್ನನು ಬರಿಸದಿರು ಸದ್ಗುರುವೆ | ಧರೆಯು ಬಾಸದೊಳು ನಾ ಜನಿಸಲಾರೆ ||ಪ|| ಹುಸಿ ಕಳವು ಡಂಭಕವು | ಸುಸುಳು ಬರಟತಳ್ಳಿ | ಪಿಸುಣ ಹೀನದಯದ ಬಬ್ಬುಗಾರ || ಸುಕೃತಗಳವು ಕೊರಚಾಟ | ವಿಷವು ವಿಗಡವು ಕರುಬು | ಹೊಸ ಪುರುಷ ತಾರಿ ಜನ್ಮಾಲಯ ||೧|| ನಿರುದಯವು ನಿಷ್ಠುರವು | ದುರುಳತ್ವ ಘಾತಕವು ಪರಬಂಧಕವು ದುರ್ಭವನವಾದವು || ನರ ಚಂಡಿತನ ಪೊಲಬು | ಪರಧನದ ವಂಚನೆಯು | ಪರರ ಕೆಡಿಸುವ ಸಿದ್ಧಿಗಳು ಮಂತ್ರದ ||೨|| ಹರನರ್ಚಕರು ಬಲ್ಲ ಹರನು ಪಕರು ಬಹಳ | ಗುರುಭಕ್ತರಲ್ಲ ಗರುವಿಗಳು ಬಹಳ ಹರಸ್ಮೃತಿಯು ಬಿಟ್ಟು ತಾ | ಪರಸ್ಮೃತಿಯ ಲಾಲಿಪರು | ನಿರಯದಾಳಿಗಾಗಿ ತೋರುತಿಹರು ||೩||

ಪತಿವ್ರತೆಯರಿಲ್ಲ ಪರ । ಸತಿ ಮಾಯೆಯರಿರುತಿಹರು । ಜಿತಕಾಮರಿಲ್ಲ ಆತಿ ಕಾಮರಿಹರು । ವ್ರತ ನೇಮಗಳಿಲ್ಲ ಕೃತಕಗಳು ಘನವಯ್ಯ । ಕ್ಷಿತಿಯು ಅವಗುಣಗಳಿಗೆ ತವರುಮನೆಯು ॥೪॥ ಇಲ್ಲಿನೆಸಬಾರದಲೆ । ಇಲ್ಲುಂಟು ಘನಿಗಳು । ಕಲ್ಲೊಳಗೆ ಅಡಗಿರ್ದ ಸರುಷದಂತೆ । ಬಲ್ಲ ಮಾನವ ನಿನಗೆ । ಒಳ್ಳೆದರು ಕಾಣಿಸರು । ಒಳ್ಳೆ ಮರ್ತ್ಯರ ಷಡಕ್ಷರಿಲಿಂಗವೇ ॥೫॥

೬೫

ಘನಸುಖಮಲಿಂಗವೇ । ಅನುದಿನದಿ ಎನ್ನ ಕರ । ವನಜಕ್ಕೆ ಬಂದು ಚುಳುಕಾಯಿತಲ್ಲ ॥ಪಲ್ಲ॥ ತರಣಿ ಕೋಟಿಯು । ಪ್ರಭೆಯು । ಕಿರಿದೆನಿಪ ಬೆಳಗಿನಾ । ವರದೇವ ತ್ರೈಲೋಕ್ಯವೊಳಗಿಪ್ಪನ ॥ ಹರಿಗಣಂಗಳ ಸುಯಿವ । ನೆರೆಯುಳಿದು ಎನ್ನ ಕರ । ಸರಸಿಜಕೆ ಬಂದು ಚುಳುಕಾಯಿತಲ್ಲ ॥೧॥ ಹರಿಯಜರ ತಿಂಥಣಿಯು । ಸುರರುಗಳ ಪೊತ್ತಾವು । ವರ ಮುನೀಶ್ವರರುಗಳ ಸಂತಾನದಾ ॥ ಹರುಷದಾನಂದವೊ । ನೆರೆಯುಳಿದು ಎನ್ನ ಕರ । ಸರಸಿಜಕೆ ಬಂದು ಚುಳುಕಾಯಿತಲ್ಲ ॥೨॥ ಹರಿಗೆ ಸಿಲುಕದ ಚರಣ । ಸರಸಿಜಭವನೊಪೆ । ಅರಸಿ ಕಾಣದ ನಿನ್ನ ಶ್ರೀಮುಕುಟವು ॥ ಪರಮ ನಾಟಕಾತೀತ ಕಿರಿದಾಗಿ ಎನ್ನ ಕರ । ಸರಸಿಜಕೆ ಬಂದು ಚುಳುಕಾಯಿತಲ್ಲ ॥೩॥ ಮದವಿಗಿರಿಜಾತೆಯುನು । ಮೊದಲಾದ ಬಂಧುಮಿ । ಒದಗೆ ಗಣಗಣಂಗಳು ವೀರೇಶರೆನಿಸ ॥ ಕಡು ಮೋಹದತಿಸುತರ । ಬಿಡುತೆನ್ನ ಕರದೊಳಗೆ । ಒಡೆಯರೊಡೆಯನೆ ಬಂದು ಚುಳುಕಾಯಿತಲ್ಲ ॥೪॥ ಎನ್ನಲ್ಲಿಯುಪಚಾರ । ಇನ್ನೇನು ನಿಮಗುಂಟು । ಸನ್ನುತದ ಶಿವಷಡಕ್ಷರಿಲಿಂಗವೇ ॥ ಎನ್ನ ತನು ಮನ ಪ್ರಾಣಗಳು । ಮೊನ್ನ ಪೂಜೆಗೆ ಸಾಗಿ । ನಿನ್ನ ಚರಣಕ್ಕೆ ಯೋಗ್ಯ ವಿಟ್ಟೆಗಲಿ ॥೫॥

೬೬

ಶಿವನೊಳಗೆ ವಿಶ್ವಾಸ । ಶಿವನೊಳಗೆ ನಂಬಿಗೆಯು । ಶಿವನೊಳಗೆ ಮೋಹವಿರೆ ತಾನೆ ಶಿವನು ॥ಪಲ್ಲ॥ ಕುರಿಯ ಪಿಕ್ಕೆಯು ತಂದು । ಹರನೆಂದು ಭಾವಿಸುತೆ । ಕುರಿಯು ಪಾಲನು ಕರೆದು ತಂದೆರೆಯುತ । ಬರುತಿರಲು ತಂದೆ ತಾ । ಜರಿತಂದು ಕೆಡಿಸಲು । ಶಿವನರಿವ ವಿಶ್ವಾಸವನು ನೋಡಿರೆ ॥೧॥ ಭೂಮಿಯೊಳಗಭಿಮಾನ । ಕಾಮಿ ನಿಯುರಿಂದೆಂದು । ಸೋಮಧರ ಚರ

ರೂಪಿನಿಂದ ಬಂದು | ಕಾಮಿನಿಯು ಜೇಡಿತ್ತು | ಭೂಪ [illegible] ಉಲ್ಲಾಸನಾ | ಮಾಯಾ ವಿಶ್ವಾಸವನು ನೋಡಿರೇ ||೨|| [illegible] ಧರನಿರಸ್ಮ | ಊನವಾಗಲು ಕುಡು | ಕ್ಷೋಣೀಶ ತನ್ನ ಕರ ಯುಗವ ಕಡಿದು || [illegible] ಯೊಳು ಸುತಿಪೆತ್ತು ಜಾಣ [illegible] | [illegible] ನೋಡಿರೆ ||೩|| [illegible] ತನ್ನ | [illegible] | [illegible] ಬಳಿಕ || [illegible] | ಶಿವಗಣೆಸಿದ [illegible] ನೋಡುವನು [illegible] ||೪|| [illegible] ವಿಶ್ವಾಸ ಇಂತಪ್ಪ [illegible] | [illegible] ಸಂತತದಿ ಲಿಂಗವನ | [illegible] | [illegible] ಸದ್ಗುರು ಲಿಂಗನ್ನು ||೫||

೬೨

[illegible] ಶರಣರ [illegible] | [illegible] | [illegible] ನೋಡಿರೆ || [illegible] | [illegible] | [illegible] ಕರ್ತೃ [illegible] | [illegible] ಶಿವ [illegible] | ತನು [illegible] | ಶಿವ [illegible] | [illegible] ಎನಗೆ [illegible] | [illegible] ಕರ್ಮೇಂದ್ರಿಯ ಗುಣಗಳಿಂದ || [illegible] ಮಾಯಾ [illegible] | [illegible] ಎನಗೆ ||೩|| [illegible] ಶಿವನೊಳಗೆ [illegible] | [illegible] ಗಂಭೀರವಾಗಿ | [illegible] ಜಗಕ್ಕೆ [illegible] ಎನಗೆ ||೪|| ನಮ್ಮ ಶರಣರು [illegible] | [illegible] ಇಲ್ಲಿನ್ನು [illegible] | ನಮ್ಮ [illegible] ಶಿವಷಡಕ್ಷರಿ ಲಿಂಗವ ||೫||

೬೩

ಶಿವಶರಣಾ [illegible] ತನ್ನ [illegible] | [illegible] ಎನಗೆ ಸರಿಯದಾರು ||ಪಲ್ಲ|| ಬಸವೇಶ್ವರನು ಚೆನ್ನ ಬಸವೇಶ್ವರನು ಕರಣ |

ದಸರಯ್ಯ ಪೋಳಿಗೆಯ ಮಾರಯ್ಯನ ॥ ಮುಸಣಯ್ಯಗಳ ಮನೆಯು ಕಸವ ಗುಡಿಸುವ ಮಹಾ। ಹೊಸ ಸೇವಕರು ನಮಗೆ ಸರಿಯಹಾರು॥೧॥ ಚನ್ನಯ್ಯ ನಗ್ಗಸೆಯ ಹೊನ್ನಯ್ಯ ಗಾಣದಾ। ಕನ್ನಯ್ಯ ಧೂಳಿದೇವರು ಜೇಡರಾ। ಕಣ್ಣಯ್ಯಗಳ ಮನೆಯ ಉನ್ನತದ ಸೇವಕರು। ಇನ್ನು ಧರೆಯೊಳು ನಮಗೆ ಸರಿಯದಾರು ॥೨॥ ಹರಳಯ್ಯ ಮಧುವಯ್ಯ ಬಳ್ಳೇಶ ಮಲ್ಲಯ್ಯ। ಗೊಲ್ಲಾಳದೇವ ಹಾಪಿನ ರಾಳಿನ ॥ ಕಲ್ಲಯ್ಯಗಳ ಮನೆಯ ಹುಲ್ಲು ಸೊಪ್ಪನೆ ತರುವ। ಬಲ್ಲಿದರು ನಮಗಿನ್ನು ಸರಿಯಹಾರು ॥೩॥ ಬಾಪೂರು ಬೊಮ್ಮಯ್ಯ ದೇವರ ದಾಸಯ್ಯ। ಜಗದೇವ ಮಲ್ಲಯ್ಯ ಬೊಮ್ಮಣ್ಣನ ॥ ಆಹಾವ ಜಗದೊಳಗೆ ಅಮರ್ಯ್ಯರಾಮನೆಯ। ಸೇವಕರು ನಮಗಿಂದು ಸರಿಯಹಾರು ॥೪॥ ಚಿಕ್ಕಯ್ಯ ಡೋಹರ ಕಕ್ಕಯ್ಯ ಸೊಡ್ಡಳಾ। ಆಯ್ದಕ್ಕಿ ಮಾರಯ್ಯ ರಾಮಯ್ಯನ ॥ ಚಕ್ಕಲಿಗೆ ನಾಗಯ್ಯ ಅಕ್ಕರಿನ ತೊತ್ತಿನಾ। ಮಕ್ಕಸ್ಪೈಪ್ರ ನಮಗೆ ಸರಿಯದಾರು ॥೫॥ ಹಾವರದ ಬೊಮ್ಮಯ್ಯ ಮಾದರ ಧೂಳಯ್ಯ। ಮೇದಾರ ಕೇತಯ್ಯ ವಪಿಲಯ್ಯನ ॥ ಆದಯ್ಯಗಳ ಮನೆಯ ಕಾಮಕೊಂಡಿರುವಂಥ। ಆಪಿಕರು ನಮಗಿನ್ನು ಸರಿಯದಾರು ॥೬॥ ಸಾಮವೇದಿಯು ಸಿದ್ಧರಾಮಯ್ಯ ಮಯಿದನ। ರಾಮಯ್ಯ ಏಕಾಂತ ರಾಮಯ್ಯನ। ಭೀಮಯ್ಯಗಳ ಮನೆಯ ಆ ಮಹಾ ಸೇವಕರು। ಈ ಮಹಿಯೊಳಗಿನ್ನು ಸರಿಯಹಾರು ॥೭॥ ಮೋದನದ ಮೆಮ್ಮಯ್ಯ ಮೊರಟದ ಬಂಕಯ್ಯ। ತಿರ ನೀಲಕಂಠಯ್ಯನಣು ಮೂರ್ತಿಯು ॥ ಗುರು ಮಲ್ಲಿಕಾರ್ಜುನಯ್ಯ ವರ ಪಂಡಿತರ ಮನೆಯ। ತುರುಗಾಹಿಗರು ನಮಗೆ ಸರಿಯದಾರ ॥೮॥ ಬಂಕಯ್ಯ ಶಿವರಾತ್ರಿ ಸಂಕಯ್ಯ ಹೆಡೆಹಲ್ಲಿ। ಬಂಕಯ್ಯ ಮರುಳು ದೇವ ಮೊಳೊಪ್ಪುವ ॥ ಶಂಕರೇಶ್ವರನವರ ಕಿಂಕರರ ಕಿಂಕರರ। ಕಿಂಕರಪ್ಪೈಪ್ರ ನಮಗೆ ಸರಿಯದಾರು ॥೯॥ ಕುಂಬಾರ ಗುಂಡಯ್ಯ ತುಂಬಿಗರ ಚೌಡಯ್ಯ। ಕೆಂಭಾವಿ ಭೋಗಯ್ಯ ಶ್ವಪಚಯ್ಯನ ॥ ಮುಂಬಾಗಿಲನು ಕಾಯ್ವ ನಂಬಿಗೆಯ ಸೇವಕರು। ಕುಂಭಿನಿಯೊಳಿಮಗಿನ್ನು ಸರಿಯಹಾರು ॥೧೦॥ ಮಳೆಯರಾಜನು ಚೋಳ ವಲಘುಂಡಸ್ವೈಸಾರ। ಕಲಿನಾಥನಾ ಚಾರಮನಂಬಿಯು ॥ ಕಳವೆತ್ತ ಚಂಗಳೆಯ ಒಳ ಬಾಗಿಲನು ಕಾಯ್ವ। ಸಲುಗೆವಾಳರು ನಮಗೆ ಸರಿಯದಾರು ॥೧೧॥ ಸಿರಿಯಾಳ ಕಲಿಯರು ಗುರುಭಕ್ತನವನಂಬಿ। ಅರಿಯುಮನುಮಾಳು ನಮಿತಾಂಡಾರ್ಯರ ॥

ಮೊರೆಯಿಂಡದೇವರ ಚರಣ ರಕ್ಷೆಯ ಪಿಡಿದು । ವರವ ಪಡೆವರು ನವುಗೆ ಸರಿಯುವಾರು ||೧೨|| ಚೋಳಕ್ಕ ದುಗ್ಗಳಿಯು ನೀಲಲೋಚನೆ ಚಲ್ವ। ಸೂಳೆ ಸಂಬಿಯು ಕವುಳೆ ಸೋಮವ್ವೆಯು ॥ ಕಾಳು ಜ್ಯನನ ಏಟ್ವೆ ಲೋಲವ್ವೆಜ ವ್ವೆಯ । ಆಳುಗಳು ನವುಗಿನ್ನು ಸರಿಯವಾರ ||೧೩। ಅಕ್ಕನಾಗವ್ಮ ಸತ್ಯಕ್ಕ ಚಂಗಳೆ ಚಲ್ವ । ಅಕ್ಕರೆಯ ಮಹಾದೇವಿ ಸುಗ್ಗವ್ವೆಯು ॥ ಚಿಕ್ಕ ಕೊಡಗೂಸಿ ನವ ಅಕ್ಕರಿನ ತೊತ್ತಿನಾ । ಮುಕ್ಕಳವ್ವೆವು ನವುಗೆ ಸರಿಯುವಾರು ||೧೪|| ಇಂತಪ್ಪವರ ಬಂಟ ನಿಂತು ಭವದಲಿ ಬಂದ । ಸಂತೆ ಎಂದರೆ ನಿನಗೆ ಕೊರತೆಯುಂಟೆ ॥ ನಿಂತೆ ನವ್ಮವನೆಂದು ಸಂತೋಷದಿಂದಪ್ಪು । ಕಂತು ಹರ ಶಿವಷಡಕ್ಷರಿ ಲಿಂಗವೇ ||೧೫||

೬೯

ಬಿಂಭದೊಳಗೆ ಒಂದು ಪ್ರಾಣ ಕುಂಭ ಸೂತ್ರಗೊಂಬೆಯಂತೆ । ಎಂದಿ ಗಾದರೊಂದು ದಿನವು ಸಾವು ತಪ್ಪದು ||ಪಲ್ಲ|| ಹುಟ್ಟುತೇನು ತರಲುಯಿಲ್ಲ ಹೋಗುತೇನು ಒಯ್ಯಲಿಲ್ಲ । ಸುಟ್ಟೆ ಸುಣ್ಣದ ಹರಳಿನಂತೆ ಆಯಿತ್ತೆ ದೇಹ ॥ ಹೊಟ್ಟೆ ಬಹಳ ಕೆಟ್ಟದೆಂದು ಎಷ್ಟು ಕಷ್ಟ ಪಟ್ಟ ಪ್ರಾಣ ಬಿಟ್ಟು ಹೋಗು ವಾಗ ಒಂದು ಬಟ್ಟೆಯಿಲ್ಲವು ||೧|| ಹೊನ್ನು ಹೆಣ್ಣು ಮಣ್ಣು ಮೂರು ತನ್ನೊ ಳಿದ್ದರ ಉಣ್ಣಲಿಲ್ಲ । ಅಣ್ಣ ತಮ್ಮ ತಂದೆ ತಾಯಿ ಬಗೆಯಲಿಲ್ಲವು ॥ ಅನ್ನ ವಸ್ತ್ರ ಭೋಗಿಯಾಗಿ ತನ್ನ ಸುಖವನರಿಯಲಿಲ್ಲ । ಮಣ್ಣುಪಾಲದಾದ ಮೇಲೆ ಯಾರಿಗಾಯಿತು ||೨|| ಹತ್ತು ಎಂಟು ಲಕ್ಷಗಳಿಸಿ ಮತ್ತೆ ಸಾಲದೆಂದು ಪರರ । ಸೊತ್ತಿಗಾಗಿ ಆಸೆ ಮಾಡಿ ನ್ಯಾಯ ಮಾಡುವ ॥ ಚಿತ್ತ ಬೆಳೆದು ಉಂದೆನೆಂಬ ವ್ಯರ್ಥ ಚಿಂತೆ ಮಾಡದಿರೆಲೋ । ಸತ್ತು ಹೋದ ಮೇಲೆ ನಿನ್ನ ಅರ್ಥವಾರಿಗೆ ||೩|| ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆವಸ್ತ್ರ ತೊಟ್ಟುಕೊಂಡು। ಒಳ್ಳೆ ಚಲುವ ಬೊಂಬೆಯಂತೆ ಆಡಿಹೋದೆಲೋ । ಹಳ್ಳ ಹರಿದ ಮೇಲೆ ನೀರ ಗುಳ್ಳೆಯುರಳಿ ಹೋದ ತೆರದಿ । ಸುಳ್ಳು ರೂಪು ಸಂಸ್ಕೃತಿಯನು ನೋಡಿರಕ್ಕಟಾ ||೪|| ಸತ್ಯನೆನಿಸಿಕೊಂಡು ಜನರ ತಥ್ಯ ವಾಕ್ಯದಲ್ಲಿ ನೀನು । ಮುಕ್ತಿಯಾದ ಮೇಲೆ ನಿನಗೆ ಸ್ತೋತ್ರ ಮಾಳ್ಪರು । ನಿತ್ಯ ಷಡಕ್ಷರಿಯಲಿಂಗ ದೊತ್ತುಮಾಗಿ ಭಜಿಸು ನಿನಗೆ । ಉತ್ತಮೋತ್ತಮ ಪದವಿ ದೊರಕಿ ಸುಖಿಪೆ ಸಂತತಂ ||೫||

೫೪

ಶರಣ ಜನರ ಸದುಹೃದಯ ನಳಿನದೊಳು ಪರಿಶೋಭಿಸುತ್ತಿಹುದು ನಿನ್ನ ಪಾದ । ಹರಿಯು ನಯನದ ಕುರುಹು ವಿಡಿದಿಹುದೀಗ ಗುರುಶಂಭು ಲಿಂಗ ನಿನ್ನ ದಿವ್ಯಪಾದ ॥ಪಲ್ಲ॥ ದಿಟ್ಟ ರಾವಣನು ರಜತಾಚಲವನೆತ್ತಲೊತ್ತಿ ಬಿಟ್ಟಿತು ರಸಾತಳಕೆ ನಿನ್ನ ಪಾದ । ನೆಟ್ಟನಂಧಕಾಸುರನೆದೆಯ ಮೇಲೆ ಭರ ತದ ಕಟ್ಟಳೆಗೆ ಕುಣಿದುದು ನಿನ್ನ ಪಾದ ॥ ಬೆಟ್ಟಿನೊಳು ಬರೆದ ಚಕ್ರವ ಜಲಂಧರನಿಗೆ ತೊಟ್ಟು ಸಿರವರಿದುದು ನಿನ್ನ ಪಾದ । ತಿಟ್ಟನೆ ತಿರುಗುವ ಮುಪ್ಪುರವ ನಿಟ್ಟಿಸಿ ಬೇಗ ಸುಟ್ಟು ಜಯಿಸಿತು ಶರ್ವ ನಿನ್ನ ಪಾದ ॥೧॥ ಮೃಗ ರೂಪದಳೆದಗಧರನರಸಲು ತನ್ನ ಬಗೆ ತೋರಿತಿಲ್ಲವಲ್ಲೋ ನಿನ್ನಪಾದ। ಬಗೆದು ಪಾತಾಳ ವೇಳ ನುಳಿದಿಳಿದತ್ತಲತ್ತ ಮಿಗೆ ಮೀರಿ ಮೆರೆದುದು ನಿನ್ನ ಪಾದ ॥ ನಿಗಮ ನಿಕರ ಜಾಯಿಲಂಗಳನರಣ್ಯಾಡೊಳು ಪುಗಲೊಡನೈದಿಸಿತ್ತು ನಿನ್ನಪಾದ । ನಗಜಾಧಿ ಪತಿ ನಿರುಪಮ ನಿತ್ಯನಿರವಧಿ ಜಗದಂತರ್ಯಾಮಿ ಶಿವ ನಿನ್ನ ಪಾದ ॥೨॥ ಬೆಂದನುಲಿಯಂದವಾಗಿ ಮುಂದಿರೆ ಕಂದರ್ಪನನು ಬಂದು ತುಳಿದಾಡಿತಲ್ಲೋ ನಿನ್ನ ಪಾದ । ಕುಂದದಿಳೆ ಎಂಬ ರಥವಂದು ನಾಗ ಲೋಕದೊಡನೊಂದುವಂತೆ ಮೆಟ್ಟಿದುದು ನಿನ್ನಪಾದ ॥ ಚಂದಚಂದದಿಂದ ಕಾಳಿದಾಸ ಮೊದಲಾದ ಕವಿವೃಂದ ಪೈದೆ ಬಣ್ಣಿಪುದು ನಿನ್ನ ಪಾದ । ಇಂದು ಕುಂದ ಹಿಮಹಾರ ಪುಂಡರೀಕ ಪಾಂಡುರಂಗ ಮಂದರ ಮಂದಿರವಾಸ ನಿನ್ನ ಪಾದ ॥೩॥ ಮನುಮುನಿನರನಾಗ ದನುಜದಿವಿಜರನು ದಿನದೊಳು ಭಜಿಪುದು ನಿನ್ನ ಪಾದ । ವಿನಮಿತ ಸುರವಿಸರದ ಮುಕುಟದ ಮಣಿ ಘನತೇಜದೊಡನಾಡಿ ನಿನ್ನಪಾದ ॥ ನೆನೆದವರಘರಿಪು ಗಹನದಹನನುತ ಜನವನರುಹರವಿನಿನ್ನ ಪಾದ । ಕನಕ ಸಿಖರ ನಿಜ ನಿಳಯದನಜ ಸಖ ಜನನ ರಹಿತ ಭವ ನಿನ್ನ ಪಾದ ॥೪॥ ಪ್ರಣವದನೆಲೆಮಂತ್ರಗಣದ ಭವನ ಗುಣಮಣಿ ಕುಲಜಲ ನಿಧಿ ನಿನ್ನ ಪಾದ । ಅಣಿಮಾದಿಗಳ ಜನನದ ಭೂಮಿ ಸುಖದ ಸಂದಣಿ ಸತ್ಯ ಶುಭದಾಗು ನಿನ್ನ ಪಾದ।ಗಣತತಿಗಳ ಬೀಡು ತಣುವಿನ ತಾಣ ತತ್ವ ದಣಿಮುಕುತಿಯ ಖಣಿ ನಿನ್ನ ಪಾದ । ಫಣಿಪ ಕಂಕಣ ಕರುಣಾರಸಭರಿತೇಕ್ಷಣ ಗುರುಶಂಭುಲಿಂಗ ನಿನ್ನ ಪಾದ ॥೫॥

೫೫

ಸೋಲದಾತನೆ ವಿರತನು । ಮನದೊಳಗೆ ಬಾಲೆಯರ ಸಿಂಗರವನೆ ಕಂಡು ॥ಪಲ್ಲ॥ ತಳಿರಡಿಯ ನುಣ್ದೊಡೆಗಳ ಚಲುವಿನೊಬ್ಬುಳಿಯುಹ ನಿತಂಬದ ನಡೆಗೆ । ಬಳಕುವತಿ ಬಡನಡುವಿನ ತೆಳುವ ಸುರನಳಿ ತೋಳ ನಲ್ಲಳನುವ ಕಂಡು ॥೧॥ ನಸುದೋರ್ಪ ಬಲ್ಮೊಲೆಗಳ ಲಾವಣ್ಯ ರಸವೊಸರ್ವ ಮುದ್ದುವೊಗದ ಕಾಂತಿ ॥ ಪಸರಿಸುವ ನಿಡುಗಂಗಳ ಜವ್ವನದ ಮಿಸುನಿವಣ್ಣದ ವೈಯ್ಯಾಳ ಕಂಡು ॥೨॥ ಚೊಲ್ಲೆಯದ ಬಳಲು ಮುಡಿಯ ತೊಳಪಕೆಂಬಲ್ಲು ಕಂಬುಗ್ರೀವದ ಸೊಗಸನುಳ್ಳ ಚಂದುಟಿಯ ವೊಗರನುಗುವತೆಳುಗಲ್ಲದ ಸಿಯುಳ ರೀತಿಯ ಕಂಡು ॥೩॥ ಮುರಿದು ನೋಡುವ ಸೋಟದ ಮುಗುಳ್ನಗೆಯ ಸರಸದಿ ನಿಗಲೆಯ ನುಡಿಯ ಸನ್ನೆ । ವೆರಸಿ ತೋರುವ ಭಾವದ ವೋಹ ಮುಂಬರಿವ ಸೊಬಗಿನ ಸುದತಿಯ ಕಂಡು ॥ ೪ ॥ ಮನವನಳ್ಳಿರಿವುದೊಂದು ಭಯವಿಲ್ಲದನುಕೂಲ ನೀರೆ ತನ್ನನೆಳಸಿ । ವಿನಯವಾಂತಿರಲಳುಪದೆ ನಿಜ ಧೈರ್ಯವನು ಶಂಭುಲಿಂಗದಿಂದ ಪಡೆವ ॥೫॥

೫೬

ಶ್ರೀಗುರು ವಚನದಿಂದಧಿಕ ಸುಧೆಯುಂಟೆ । ರಾಗದಿಂ ಬೇರಿನ್ನು ಭವ ಬೀಜವುಂಟೆ ॥ಪಲ್ಲ॥ ನರಜನ್ಮದಿಂದಿಹದೊಳು ಮಿಗಿಲುಂಟೆ । ಕರಣ ವಿಜಯದಿಂದೆ ಕಲಿತನವುಂಟೆ ॥ ಧರೆಗೆ ಯಾಚನೆಯಿಂದ ಲಘುತರವುಂಟೆ ಪರಬೊಮ್ಮದರುವಿನಿಂದುರೆ ಜಾಣ್ಮೆಯುಂಟೆ ॥ ೧ ॥ ಕಡು ಲೋಭದಿಂದೆ ದುರ್ಗಣವನ್ಯವುಂಟೆ ಪಡೆದಪವಾದದಿಂ ಮರಣವಿನ್ನುಂಟೆ ॥ ಎಡವಿಡದಿಹ ಸತ್ಯದಿಂತಪವುಂಟೆ । ಕೆಡಿಸದಿಪ್ಪಭಿಮಾನದಿಂಧನವುಂಟೆ ॥ ೨ ॥ ತನುವಿದನುಳಿದಿಂದ್ರ ಜಾಲದಾಟಗಳುಂಟೆ । ನನೆಗೋಲಿನಿಂದೆ ನೋಯಿಸುವಲಗುಂಟೆ ॥ ವಿನಮಿತನಹುದರಿಂದುಪಚಾರವುಂಟೆ । ತನಗಿಂತ ಪ್ರಿಯವಾದ ವಿಷಯವೊಂದುಂಟೆ ॥೩॥ ಶಮೆಯಿಂದೆ ಮುಕುತಿಸಾಧನ ಪೆರತುಂಟೆ । ವಿಮಲ ಮಾನಸದಿಂದೆ ಶುಭತೀರ್ಥವುಂಟೆ ॥ ಕ್ರಮ ತಪ್ಪಿ ನಡೆವುದರಿಂ ಕಷ್ಟವಿನ್ನುಂಟೆ । ಮಮಕಾರದಿಂದ ಮಿಕ್ಕಿನ ಬಂಧವುಂಟೆ ॥೪॥ ಕರುಣದಿಂದತಿಶಯವಹ ಧರ್ಮವುಂಟೆ । ವಿರತಿಯಿಂದಿತರ ಸಂಪದ ಸುಖವುಂಟೆ॥

ಅವರ ಪಾದವ ತೊಳೆದು । ಅವರ ಪಡುಗೆಯ ಬೆಳಗಿ ತೊಳೆದು ತಂದು ॥ ಅವರ ಪಾವುಗೆವಿಡಿದು । ಅವರಡಿಗಳನು ಒರೆಸಿ । ಅವರಿಚ್ಛೆಯೊಳಗಿರ್ಪ ವರವ ಶಿವನೆ ॥೨॥ ಅವರುಂಡು ಮಿಕ್ಕಿದನು । ಅವರುಟ್ಟು ಬಿಟ್ಟುದನು । ಅವರುಗಿದ ತಾಂಬೂಲವ ಸವಿದು ನಾನು ॥ ಅವರಂಗಳವ ಗುಡಿಸಿ । ಅವರ ಬಾಗಿಲ ಕಾಯ್ದು ಅವರ ಕೇಳಲಿ ಸೇರಿ ಕೊಂಡಿರ್ಪುದ ॥೩॥ ಅವರ ಎತ್ತಾಗಿ ನಾ । ನವರ ತೊತ್ತಾಗಿ ನಾ । ನವರ ಪಶುವಾಗಿ ನಾ । ಸುಖದಿರ್ಪುದ ॥ ಅವರ ಬಾಗಿಲೊಳಿರ್ಪ । ತವೆ ಸೊಣಗ ನಾನಾಗಿ । ಅವರ ಚರಣದ ಧೂಳಿ ತೊಡೆದಿರ್ಪುದ ॥೪॥ ಶಿವ ನಿಮ್ಮ ಘನದಿಂದ । ಅವರ ಘನವತ್ಯಧಿಕ । ಅವರಂಗಳ ದ್ವಿತೀಯ ಕೈಲಾಸವು ॥ ಅವರ ನಾ ಭವಭವದಿ । ತವೆ ಬಿಡದೆ ಇರ್ಪುದನು । ಶಿವಷಡಕ್ಷರಿವರನೆ ಪಾಲಿಸೆನಗೆ ॥೫॥

೨೪

ತಪವ ವಿದ್ಯೆ ಸಾಸಯೋಗ । ಜಪವ ವ್ರತವ ನಡಿಸಬಹುದು । ಗುಪಿತ ಲಿಂಗದಲ್ಲಿ ಮನವನಿಡಲಿಕಾಗದು ॥ಪಲ್ಲ॥ ಶೈಲ ತಟಗಳಲ್ಲಿ ಪರ್ಣ । ಶಾಲೆಯನು ಕಟ್ಟಿ ಕಂದ । ಮೂಲ ಫಲವ ಸವಿದು ತಪವ ಮಾಡಿ ವಿದ್ಯದ॥ ಜಾಲವನ್ನು ಕಲಿತು ಇಂದ್ರ । ಜಾಲಗಳನು ತೋರಬಹುದು । ಮೇಲೆ ಲಿಂಗದಲ್ಲಿ ಮನವನಿಡಲಿಕಾಗದು ॥೧॥ ದೂರ ದೃಷ್ಟಿ ದೂರ ಶ್ರವಣ । ಮಾರಣಾದಿ ಮಂತ್ರ ತಂತ್ರ ಏರಿ ಗಗನದಲ್ಲಿ ಚರಿಸೆ ತನ್ನ ಆಲಿಗೆ॥ ತೋರುವದನು ಪಡೆಯಬಹುದು । ಮಾರಿ ಯಕ್ಷಿಣಿಯರ ರಚಿಸಿ । ಸೇರಿ ಲಿಂಗದಲ್ಲಿ ಮನವನಿಡಲಿಕಾಗದು ॥೨॥ ಹುಲಿಯ ಕೂಡ ಸೆಣಸಬಹುದು । ಮಲೆತ ಗಜದ ಇದಿರಿನಲ್ಲಿ । ಚಲಿಸದಂತೆ ನಿಂದು ಕಾದಬಹುದು ಸಿಂಹದ ॥ ಅಲಗಬಹುದು ಮೀಸೆಯನ್ನು ಉಳಿದ ಸಾಸವಂತದಿರಲಿ । ಒಲಿದು ಲಿಂಗದಲ್ಲಿ ಮನವನಿಡಲಿಕಾಗದು ॥೩॥ ಕುಂಭಕಾದಿ ಯೋಗದಿಂದ । ಕುಂಭಿಣಿಯನು ಸಹಜ ಬಿಟ್ಟು । ಅಂಬರವನು ಏರಬಹುದು ಆದಿಯಿಲ್ಲದೆ ॥ ಸಂಭ್ರಮದಲಿ ನಿತ್ಯಕೋಟಿ । ತುಂಬ ಜಪವ ನಡಿಸಬಹುದು । ನಂಬಿ ಲಿಂಗದಲ್ಲಿ ಮನವನಿಡಲಿಕಾಗದು ॥೪॥ ಅನ್ಯ ವಾಕ್ಯ ಅನ್ಯ ಜಪವ । ನನ್ಯದೈವಗಳನು ಬಿಟ್ಟು ಉನ್ನತದಲಿ ನಡಿಸಬಹುದು ಸಕಲ ವ್ರತವನು ॥ ಚೆನ್ನ ಷಡಕ್ಷರಾಂಕಲಿಂಗ । ತನ್ನ ತಾನೆ ಒಲಿಯುದನಕ । ಇನ್ನು ಲಿಂಗದಲ್ಲಿ ಮನವನಿಡಲಿಕಾಗದು ॥೫॥

೭೫

ಹುಲಿಯು ಕರಡಿ ಕರಿಯು ಫಣಿಯು ಬಲುಹಿನಿಂದಲಾಳ್ವರುಂಟು । ಚಲಿಸದಂತೆ ಮನವನಾಳ್ವರಾರ ಕಾಣೆನು ॥ಪಲ್ಲ॥ ಮೊರೆದು ಗರ್ಜಿಸುತ್ತ ಬರುವ । ಹಿರಿಯ ಹುಲಿಯು ಹಿಡಿದು ತಂದು । ಇರವೆ ತಮ್ಮ ಇಚ್ಛೆಯಲ್ಲಿ ಆಳುತಿರ್ಪರು ॥ ಚರಿಸುತಿಪ್ಪ ಕರಿಯ ಮಾನವ । ಪರಮ ಲಿಂಗದಲ್ಲಿ ಇರಿಸಿ । ಹರಿಯದಂತೆ ಆಳ್ವ ಹಿರಿಯರುಗಳ ಕಾಣೆನು. ॥೧॥ ಕರಿಯ ಹಿಡಿದು ನಿಲಿಸಬಹುದು । ಕರಡಿಯನ್ನು ಕಟ್ಟಬಹುದು । ಮೊರೆವ ಫಣಿಯು ಹೆಡೆಯ ಕೈಯೊಳಿರಿಸಬಹುದೆಲ್ಲೈ ॥ ಕರಿಯ ಮನವ ಹಿಡಿದು ತಂದು । ಇರಿಸಿ ಲಿಂಗದಲ್ಲಿ ನೆರೆವ । ಹಿರಿಯರುಗಳ ಕಾಣೆ ಬರಿಯ ಬಲ್ಮೆ ನುಡಿವರು ॥೨॥ ಹರಿಸುರೇಂದ್ರ ದಿವಿಜರುಗಳ । ಪರಮಯೋಗಿ ಮುನಿಮುನಿಗಳ । ಮರೆವೆಯೆಂಬ ಕೂಪದಲ್ಲಿ ಇಕ್ಕಿ ತುಳಿವುದು ॥ ಒರಿಯ ಧ್ಯಾನಿ ಮೌನಿಯೆಂಬ ಹಿರಿಯರುಗಳನೆಲ್ಲರನ್ನು । ಅರಿವು ಮರೆವೆಯಲ್ಲಿಯಿಕ್ಕಿ ನುಸುಳಿ ಪೋಪುದು ॥೩॥ ಜಪದ ಬಲುಮೆಯಲ್ಲಿ ಇರದು । ತಪದ ಉಗ್ರಕಂಜಿ ನಿಲದು । ಅಪರಿಮಿತದ ಶಾಸ್ತ್ರಸಾರಕರಿಗೆ ಸಿಲುಕದು ॥ ಚಪಲತನದಿ ಓಡಿವೆನೆನಲು । ಉಪರಿಯಾಗಿ ಸಿಲುಕದಿಹುದು । ಕುಪಿತ ಮನವ ಹಿಡಿವ ಪರಿಗಳಾವುವೆಂದೊಡೆ ॥೪॥ ಮುನ್ನ ತಾನು ಯಾರು ಎಂದು । ತನ್ನ ನಿಜವನರಿದ ಬಳಿಕ ಚನ್ನ ಷಡಕ್ಷರಿಯ ಲಿಂಗ ತಾನೆಯಾಗಿಹ ॥ ಇನ್ನು ಸರ್ವಜಗವದೆಲ್ಲ । ತನ್ನ ನಿಲುವೆಯಾಗಿ ತಾಗಿ । ಅನ್ಯವಿಲ್ಲವಾಗಿ ಮನವ ತಾನೆ ನಿಲುವದು ॥೫॥

೭೬

ಚಂದ್ರಧರನಿಗೊಲಿಯದಿರ್ಪ । ಇಂದ್ರಿಯಗಳ ಜಯಿಸದನಕ । ಸಾಂಪ್ರದಾಯದ ಕೋಪವೆನಗೆ ಲೋಪವಾಗದು ॥ಪಲ್ಲ॥ ದುಷ್ಟ ನುಡಿಯ ಬಿಡದೆ ಒಲಿದು । ಮುಟ್ಟಿ ಕೇಳ್ವ ಹಾಗೆ ಶಿವನ । ಶ್ರೇಷ್ಠವಾದ ಶಾಸ್ತ್ರ ಕೇಳದಿರ್ಪ ಕಿವಿಯೊಳು । ಇಟ್ಟು ಮೊಳೆಯ ಕೊಡತಿಯಿಂದ ! ತಟ್ಟಿ ಆಚೆ ಈಚೆಗಾಗು । ವಸ್ತು ಬಡಿಯದನಕ ಎನ್ನ ಸಿಟ್ಟು ಹೋಗದು ॥೧॥ ಮೆಚ್ಚಿ ಶಿವನ ಸೋಂಕಿ ಸೊಕ್ಕಿ ಹೆಚ್ಚಿ ಪುಳಕವೇರದೊಲಿದು । ನಿಚ್ಚಲನ್ಯ ಸೋಂಕುಗಳಿಗೆ ಎಳೆವ ತ್ವಕ್ಕನು ॥ ಕೊಚ್ಚಿ ಕೊಚ್ಚಿ ಕಡಿದು ಕಡಿದು । ನುಚ್ಚು ನುರಿಯ ಮಾಡದನಕ । ಕೆಚ್ಚುಗೊಂಡ ಕೋಪದುರಿಯು ಕಿಚ್ಚು ಪೋಗದು ॥೨॥ ಬಿಡದೆ

ಲಿಂಗವನ್ನು ನೋಡ । ಲೊಡನೆಯುಶ್ರುಜಲಗಳುಕ್ಕಿ । ಕಡೆಗೆ ಪರಿಯದನ್ನ ರೂಪ ನೋಳ್ಪ ನಯನಕೆ ॥ ಒಡೆಯ ಹೆಟ್ಟಿ ಮಳಲ ತಂದು । ಕೆಡಹಿ ಹೊಯ್ದು ದಸಿಗಳಲ್ಲಿ । ಜಡಿಯುದನಕ । ಎನ್ನ ಕೋಪವಡಗಿ ಪೋಗದು ॥೩॥ ಶೂಲಧರನ ಹಾಡಿಪಾಡಿ । ಲೀಲೆ ವಿಕ್ಕ ಹೊಗಳದನ್ನ । ಕಾಳುನುಡಿಯು ಹಗಲು ಇರುಳು ನುಡಿವ ಜಿಹ್ವೆಯು ॥ ಸೀಳಿ ಸೀಳಿ ಹೋಳು ಮಾಡಿ । ಮೇಲೆ ಸುಣ್ಣ ನೀರನೆರೆದು । ಮಾಲೆಗಟ್ಟದನಕ ಮನದ ಜ್ವಾಲೆ ಹೋಗದು ॥೪॥ ಲಿಂಗಕೀಯದಿರುವ ಅರಳ । ಭೃಂಗದಂತೆ ಅರಿವ ಮೂಗ । ಹಾಂಗೆ ಸೀಳದನಕ ಕೋಪ ಹರಿದು ಹೋಗದು ॥ ಮಂಗಳಾತ್ಮ ಷಡಕ್ಷರಿಯು । ಲಿಂಗ ನಡಿಗೆ ಒಲಿಯದಿಂದ್ರಿಯಂಗಳಳಿಯದನಕ ಸುಖವು ಸಾಂಗವಾಗದು ॥೫॥

೭೭

ನಾನು ಒಲಿದು ಫಲವದೇನು । ನೀನು ಒಲಿಯುಧನಕ ಶಿವನೆ । ಏನು ಮಾಡಿ ಫಲವದೇನು ಬಯಲ ಭ್ರಮೆಯದು ॥ಪಲ್ಲ॥ ಜಪವ ಮಾಡಿ ಫಲ ವದೇನು । ತಪವ ಮಾಡಿ ಫಲವದೇನು । ಅಪರಿಮಿತ ಶಾಸ್ತ್ರ ಪಠಿಸಿ ಫಲ ವದೇನಲ್ಲೈ ॥ ತ್ರಿಪುರ ವೈರಿ ತನ್ನ ತಾನೆ । ಸುಪಥದೋರಿ ಒಲಿಯದನಕ । ಉಪಮೆಯಿಂದ ಮಾಡೆ ತುದಿಗೆ ಕೆಟ್ಟು ಪೋಪುದು ॥೧॥ ಹೆಣ್ಣು ಬಿಟ್ಟು ಫಲವದೇನು ಹೊನ್ನ ಬಿಟ್ಟು ಫಲವದೇನು । ಮಣ್ಣನುಳಿದು ಬಡವನಾಗಿ ಫಲವದೇನಲ್ಲೈ ॥ ಪನ್ನಗೇಂದ್ರಭರಣನೊಲಿದು । ತನ್ನ ಸುಪಥ ತೋರದ ನಕ । ಅನ್ಯರುಗಳ ನೋಡಿ ಮಾಡೆ ಕೆಟ್ಟು ಪೋಪುದು ॥೨॥ ಗಿರಿಗಳಲ್ಲಿ ಗವಿಗಳಲ್ಲಿ ತರುಗಳಲ್ಲಿ ಸೇರಿ ತನುವ । ಮರೆದು ಅಸ್ಥಿ ಮಾತ್ರವಿರಲು ಫಲ ವದೇನದು ॥ ಹರನು ತನ್ನ ತಾನೆ ಒಲಿದು । ಪರಮ ಸುಖವ ತೋರದನಕ । ಪರರ ನೋಡಿ ಮಾಡೆ ಕಡೆಗೆ । ಕೆಟ್ಟು ಪೋಪುದೈ ॥೩॥ ಕೋಡುಗಲ್ಲ ತುದಿ ಯಮೇಲೆ । ನೀಡಿಕಾಲ ಗಗನಕಾಗಿ ಕೂಡೆ ಉಗ್ರ ತಪವಮಾಡಿ ಫಲವದೇ ನಲ್ಲೈ ॥ ರೂಢಿಗೀಶ ಕರುಣಹುಟ್ಟಿ । ನೋಡಿ ಒಲಿಯದನಕ ಪರರ । ನೋಡಿ ಮಾಡಲೆಲ್ಲ ಕಡೆಗೆ ಕೆಟ್ಟು ಪೋಪುದು ॥೪॥ ಮುನ್ನ ಮಾಡಿವವರ ಕಂಡು । ಇನ್ನು ನೋಡಿ ಮಾಡಿ ಬಹಳ । ಬನ್ನ ಬಡುತ ಇರಲು ಕಡೆಗೆ ಕೆಟ್ಟು ಪೋ ಪುದೈ ॥ ತನ್ನ ತಾನೆ ಪಕ್ವವಾಗಿ । ತನ್ನ ತಾನೆ ಪಥಕೆ ಬರಲು । ಚನ್ನ ಷಡ ಕ್ಷರಿಯ ಲಿಂಗ ತಾನೇ ಒಲಿವನು ॥೫॥

೭೮

ಏನು ಮಾಡಲಯ್ಯ ಎನ್ನ । ಹೀನ ಮನದ ಬಯಕೆಗಳನು । ಜ್ಞಾನ ಖಡ್ಗದಿಂದ ಕಡಿವರಾರ ಕಾಣೆನು ||ಪಲ್ಲ|| ಹಿಡಿವುದದನೆ ಹಿಡಿಯುದಯ್ಯ । ಹಿಡಿಯುದದನೆ ಹಿಡಿವುದಯ್ಯ । ಕೆಡುವ ನಡೆಯ ನಡೆಸಿಯುನ್ನ । ಭವಕೆ ಬರಿಸಿತು || ಬಡವ ನಾನು ಕಾಡುತಿಹುದು । ಹಿಡಿಯುವವರ ಕಾಣೆ ನಾನು ಕಡಿದು ಕಡಿದು ಹಾಕುವವರನಾರ ಕಾಣೆನು ||೧|| ನಾನು ನಿಮ್ಮ ನೆನೆ ವೆನೆನಲು । ತಾನು ನಿಮ್ಮ ನೆನೆಯುದಯ್ಯ । ಶ್ವಾನನಂತೆ ಹಲವು ಕಡೆಗೆ ಹರಿಯುತಿರ್ಪುದು || ಧ್ಯಾನ ಮೌನ ಜಪದೊಳಿರದು । ನಾನು ಇದರ ಸಂಗ ದಿಂದ । ಜ್ಞಾನ ಹೀನನಾಗಿ ಹೋದೆನಕ್ಕಟಕ್ಕಟ ||೨|| ಅಂಗಗುಣದ ನಡೆ ಗಳೆನಲು । ಹಿಂಗಿಸುತ್ತ ಬರುತಲಿಹುದು । ಲಿಂಗನೆನಹು ಎನಲು ಎಲ್ಲೊ ನುಸುಳಿ ಪೋಪುದು || ಮಂಗಳಾತ್ಮ ಷಡಕ್ಷರಿಯು । ಲಿಂಗ ನಿಮ್ಮ ನೆನೆಯು ದಿರ್ಪ । ಕೊಂಗು ಮನವ ಶಿಕ್ಷಿಸೆನ್ನ ಆಳಲು ಪೋಗಲಿ ||೩||

೭೯

ಕಂಗೆಡಲೇತಕೆ ಕಳವಳಿಸಿಯುನಾ । ಸಂಗಜಮಾಯೆಯು ಮನದಬ್ಬರ ಕಂ । ಲಿಂಗದ ಸೂತ್ರವ ಕರದಲಿ ಪಿಡಿದಿರಲೇತರ ಭಯುವೆಮಗೆ ||ಪಲ್ಲ|| ಅಂಧಕನಿಗೆ ಸತ್ಪಥವನು ತೋರುವ । ಚಂದದಿ ಮೂಕಗೆ ಮಾತು ಜೀವಿತ। ಸಿಂಧುವಿನೊಳಗಣ ಪೊಳವನು ತಪ್ಪಿಸಿ ಪಥವನು ತೋರ್ಪಂತೆ || ಹಿಂದಣ ವಾಸನೆಯುನು ಪರಿಹರಿಸುವ । ಮುಂದಣ ಸದ್ಗತಿಯುನು ತೋರುವ ಘನ । ಸಂದಪುರಾತರ ವಚನಗಳಿರುತಿರೆ ಏತರ ಭಯುವೆಮಗೆ ||೧|| ವರಸಂಜೀವನ ದೌಷಧವಿರುತಿರೆ । ಮರಣದ ಭೀತಿಗೆ ಅಂಜಲದೇತಕೆ । ಪರುಷದ ಖಣಿತಾ ತಮ್ಮನೆಯೊಳಗಿರುತಿರೆ । ಬಡತನಕ್ಕಂಜುವರೆ ಶರಣರ ಸಿಧಿಯುಂದೆನಿಸುವ ಪಂಚಾ । ಕ್ಷರಿ ಜಿಹ್ವಾಗ್ರದ ಕೊನೆಯೊಳಗಿರುತಿರೆ ದುರಿತಕ್ಕಂಜುವರೆ || ಬಡ ಮನವೇ ನಂಬಿರು ಭಯುಬೇಡ ||೨|| ಅಮೃತಾಂಬುಧಿಯಿರೆ ಹಸಿವಿನ ಭಯುವೆ । ದ್ಯುಮಣಿಯು ತಾನಿರೆ ತಿಮಿರದ ಭಯುವೇ । ಹಿಮುಭಯುವೇತಕೆ ತಾನಗ್ನಿಯ ಸನ್ನಿಧಿಯುಲಿ ಮೂರ್ತವ ಮಾಡಿ || ಕ್ರಮುಗೆಡಲೇತಕೆ ಚಿದ್ಘನ ಮೂರುತಿ । ಅಮಲ ನಿರಾಮಯು ನಿರ್ಗುಣ ನಿಷ್ಕಲ ಅಮಲ ಷಡಕ್ಷರಿ ಲಿಂಗವು ಇರುತಿರಲೇತರ ಭಯು ನಮಗೆ ||೩||

೮೦

ಎಲೆ ಮಾನವನೆ ಕೇಳು ಸ್ಥಿರವೆಂದು ಸಂಸಾರ। ಮಲದೇಹವನು ಮೆಚ್ಚಿ ಕೆಡಬೇಡ ಬರಿದೆ ॥ಪಲ್ಲ॥ ನಾರಿ ನಿನ್ನವಳಲ್ಲ ಹೇಮ ನಿನ್ನದು ಅಲ್ಲ। ಧೀರ ಪುತ್ರಾಪ್ತರುಗಳಾರೂ ಅಲ್ಲ ॥ ಸಾರಿ ಹೇಳುವೆನೀಗ ತಿಳಿಯದು ಮುಂದೆ ನೀ। ಘೋರ ನರಕಾರ್ಣವದಿ ಬೀಳ್ವಾಗ ತಿಳಿವೆ ॥೧॥ ಕದನ ಕರ್ಕಶದಿಂದ ಜರಿದೆ ನೀನನ್ಯರನು। ಮದಸೊಕ್ಕಿದಾನೆಯೊಲ್ ಸ್ಥಿರಿಯದಿರು ಮನುಜ ॥ ಕುದಿದು ನಾ ಹೆಚ್ಚು ತಾ ಹೆಚ್ಚೆಂದು ಒಣವಾದ। ಪದವಿಗಿದು ತರವಲ್ಲ ಕುತ್ತು ಹುದು ಮುಂದೆ ॥೨॥ ಗುರು ಹಿರಿಯರನು ಕಂಡು ಕೋಣನಂದದಿ ಮಲೆತು। ಸಿರಬಾಗದಿರೆ ಮುಂದೆ ಘನಬಾಧೆ ಪಡುವೆ ॥ ಮೊರೆವ ಕಾಲನ ಕೈಗೆ ಸೆರೆಯ ಸಿಕ್ಕುವೆ ನೀನು। ಭರದಿ ಮಹಂತೇಶನಡಿವಿಡಿಯೊ ಎಲೆ ಮರುಳೆ ॥.॥

೮೧

ಯರಗದಿರು ಮನವೆ ನೀ ತನು ವರ್ಣವನು ನೋಡಿ। ತೆರಿಯೆ ಹುಳು ಕುಂಟು ಗುಣವಿಲ್ಲ ನಾರಿಯೊಳು ॥ಪಲ್ಲ॥ ಒಳಗೆ ನರಮಾಂಸ ಮಜ್ಜದಪುಂಜ ಮೇಲೆ ಬಹು। ಮಲಿನ ಚರ್ಮದ ಹೊದಿಕೆ ಬೇರಿಲ್ಲವು ॥ ಮಲಮೂತ್ರ ತುಂಬಿ ತುಳುಕುವ ದೇಹವನು ಮೆಚ್ಚಿ। ಮಲಹರನ ಮರೆದು ಭವಕಿಳಿಯ ದಿರು ಮನವೆ ॥೧॥ ಮಾಯೆಯೊಳ್ಳವಳಲ್ಲ ಮೋಹಜಾಲವ ಬೀಸು। ಪಾಯ ದಿಂತನ್ನತ್ತ ಸೆಳೆಯುತಿಹಳಃ ॥ ಹೇಯಮಾಡತಿ ಇವಳ ಸಾಯಗೊಲ್ಲುವಳು ಗುರು। ಕಾಯೆಬಾರಳು ಮುಂದೆ ಜ್ಞಾನವಿರುತಿರಲು ॥೨॥ ಮುದ್ದು ನುಡಿ ಗಳ ನುಡಿದು ಶುದ್ಧ ವೃಷ್ವಾನ್ನವನು। ಸದ್ಧರ್ಮದಿಂದ ನೀಡುಣಿಸುತಿಹಳು॥ ಸಿದ್ಧ ಮಹಂತೇಶನ, ಕುಬುದ್ಧಿಯಿಂದಲೆ ಮರಸಿ। ಬದ್ಧ ಸಂಸಾರದೊಳ್ ಕೆಡಹುತಿಹಳು ॥೩॥

೮೨

ಜೋಕೆ ಕಂಡ್ಯಾ ಅತ್ಮಾ ಜೋಕೆ। ಅತ್ಮಾ ಜೋಕೆ ಕಂಡ್ಯಾ ಅತ್ಮಾ ಜೋಕೆ ॥ ಕಾಕು ಸ್ತ್ರೀಯರ ಬಳಗವನೇಕ ಬರುತಿಹುದಿಲ್ಲಿ ॥ಪಲ್ಲ॥ ಮರ ವೆಯ ಮನೆಯೊಳ ಗರುವಿಲ್ಲದಂಗನೆಯರು। ಪರಿಪರಿ ನೆರೆದು ನಿನ್ನ ಮರಳು ಮಾಡುವರಯ್ಯ ॥೧॥ ವಿರತಿ ವಿರತಿ ಎಂದು ನಿರುತಾಗಿ ನುಡಿವೆ ನೀನು। ವಿರತಿಯೆಂತೆಂಬ ದೃಷ್ಟ ಅರಿತರೆ ತಿಳಿವುದಿಲ್ಲಿ ॥೨॥ ನೋಡದೆ ನುಡಿ

ಸದೆ ಮಾಡಬಹುದು ವಿರತಿ । ನಾಡರಿಯಲು ಮಹಂತ ಪ್ರೌಢನೊಳ್ ರತಿ ಯಿರಲಿ ॥೩॥

೭೩

ಸಾಕು ಪರಿಹರಿಸೆನ್ನ ದೇಹದುರ್ಗುಣಗಳನು । ನೂಕು ನುಗ್ಗನು ಮಾಡಿ ಕಾಡುತಿಹವು ।ಪಲ್ಲ॥ ಹೊರಗೆ ಕಳ್ಳರ ಬಾಧೆಯೊಳಗೆ ಚೋಳ್ಹಾವು ಮದ । ಕರಿ ನಿಕರ ಬಾಧೆಯನು ತಾಳಲಾರೆ ॥ ನರಿ ಶಾರ್ದೂಲದ ಬಾಧೆ । ಕರಡಿ ಮೃಗಗಳ ಬಾಧೆ । ಪರಿಪರಿಯ ಬಾಧೆಗಳನೇಕ ಶಿವನೆ ॥೧॥ ಕೊಂಬೆ ಕೊಂಬೆಗೆ ಹಾರಿ ಕೋಯೆಂದು ಕೂಗುತಿಹ । ಡೊಂಭನಾ ಬಾಧೆ ತ್ರಿಪುರದ ಲ್ಲಿರುವ ॥ ಶುಂಭ ದೈತ್ಯರ ಬಾಧೆ ಶಂಬರಾರಿಯ ಬಾಧೆ ! ಸಂಭ್ರಮಿಪ ಘನ ವನೇಕೊಂಬೆ ಶಿವನೆ ॥೨॥ ಸಾಗರಗಳೇಳು ಮೇಲ್ದಪ್ಪಿ ಬರುತಿಹ ಬಾಧೆ । ಬೇಗ ಬೆಂಬಿಡದಟ್ಟಿ ಸುಡುವುದತಿ ಬಾಧೆ ॥ ನೀಗಿಸೈ ಬಾಧೆಗಳ ತಾಪದಲಿ ನೊಂದೆನಾ । ಬೇಗದೊಳನಾಮಕ ಮಹಂತಲಿಂಗಾ ॥೩॥

೭೪

ಗುರುವೆ ನಿಮ್ಮ ನಾಮಸೇವೆಯ ಮಾಡುವೆ । ಮೊರೆಯ ಹೊಕ್ಕರೆ ಕಾಯ್ವ ಬಿರುದ ನಿಮ್ಮೊಳು ಕೇಳಿ ॥ಪಲ್ಲ॥ ಶರೀರ ಎಡದಿಹ ಕರ್ಮವೆಸಗಲಾ ರದೆ ಸರ್ವ । ದುರವೆ ಚೋಹವ ತೊಟ್ಟು ಮರೆಯಲಾರದೆ ನಿಮ್ಮ ॥ ದುರುಳ ಕಾಮ ಕ್ರೋಧದುರಿಯೊಳು ಬೇಯದೆ । ಪರಶಿವಲಿಂಗದ ಪದವ ಕೊಡುವ ನೆಂದು ॥೧॥ ತಾಯಿಯ ಗರ್ಭಧಿ ಜನಿಸಲಾಗದೆ ಮರಳಿ । ಹೇಯವಾಗುವ ಬಾಲಲೀಲೆಯ ತಾಳದೆ ॥ ಪ್ರಾಯಕಾಲದ ಮಾಯೆ ಬಲೆಗೆ ಬೀಳಲಾರದೆ । ಅಯ್ಯ ಗದಗದಿಸಿ ಭಕ್ತಪ್ರಿಯ ಸಲಹುವನೆಂದು ॥೨॥ ಅರಿವು ಮರವೆಯ ಸಂತಾಪವನೊಲ್ಲದೆ । ಮರಣ ಬಾಧೆಯ ಮುಪ್ಪಿನ ಹೇಸಿಗೆಯ ತಾಳದೆ ॥ ನರಕ ಮೂತ್ರದೊಳು ಬಿದ್ದು ಸೋತು ಹೊರಳಾಡದೆ । ಕರುಣ ಸಮುದ್ರ ಮಹಂತಲಿಂಗ ನೀನಹುದೆಂದು ॥೩॥

೭೫

ಬೇಡುವೆ ವರವ ನಿಮ್ಮೊಂದ ಕೊಡೊ । ರೂಢಿಗೀಶನೆ ಇದು ಚಂದ ॥ಪಲ್ಲ॥ ಬೇಡನೀ ಕೊಡು ಫಲ ಪದವ ನಾನೊಲ್ಲೆ । ಮಾಡದೆರವ ಮುಕ್ತಿ ಕೊಡುವ ಸುಗುಣವ ॥ಅನುಪಲ್ಲ॥ ವರ ಗುರು ಲಿಂಗಜಂಗಮದಿ । ನೈಷ್ಠಿ

ಇರುವ ಭಕ್ತರ ಕಂಡರೆ || ಧರೆಯೊಳಗಾದರೊಮ್ಮೆ ಕೃತ್ಯದಿಂ ಚರಿಸೆನಾ | ಸಿರಬಾಗುವಂತೆ ಮಹಸ್ಥಿರ ಬುದ್ಧಿ ಈಯೋ ||೧|| ಭಕ್ತಿಜ್ಞಾನ ವೈರಾಗ್ಯ ಮೂರು ವ್ಯಕ್ತಿಯಿಂ ಪಿಡಿದು ಚರಿಸುವ || ಶಕ್ತಿ ರಹಿತ ಮಹಾ ವಿರಕ್ತರುಗಳ ಕಂಡು | ಭಕ್ತಿ ಭಯ ಕಿಂಕರತೆ ಇರುವಂತೆ ಮಾಡೋ ||೨|| ಕಂತು ಮರ್ದನ ಮಹಂತಲಿಂಗ ಇವ | ರಂತಿರ್ದರೇನೋ ಭವಭಂಗ | ಅಂತರಂಗ ದ್ಹಲಿ ಸಂತತವಿರ್ಪೆಯಿವರನೀ | ಅಂತು ಇಂತು ಎಂಬ ಭ್ರಾಂತಿಗುಣ ವಳಿಸೋ ||೩||

೮೬

ನಂಬಿಗೆ ಸಾಲದು ಡಾಂಭಿಕ ಭಕ್ತರ | ಸಾಂಬಸದಾಶಿವ ನನಗಿನ್ನು|| ಕುಂಭಿನಿಯೊಳು ಶಿವನಂಬುಗೆಯಿಲ್ಲದೆ | ಶಂಭು ಭಕ್ತರೆಂದುಸುರುವರು |ಪಲ್ಲ| ಮುಂದೆ ಸ್ತುತಿಸಿ ಮೇಣ್ ಹಿಂದೆ ನಿಂದಿಸುವರು | ಚಂದದಿ ನಿಮ್ಮಗಣಂಗ ಳನು || ವಂದಿಸಿ ನಿಂದಿಸಿದಂಥಕ ಭಕ್ತಿಯು | ಎಂದಿಗೆ ಸಲ್ವುದೊ ಶಿವ ನಿನಗೆ || ಹೊಂದಿಕೆ ಯಿಲ್ಲದೆ ಸಂಡೇಹದಿ ಶರ | ಣೆಂದರೆ ಏನಹುದದರಿಂದ|| ಬಂಧನವಲ್ಲದೆ ಮುಂದಕೆ ಇವರಿಗೆ | ಹೊಂದರು ಸದ್ಗತಿಯನು ಬೇರೆ ||೧|| ಧರೆಯೊಳಗಿರುವತಿ ಸಿರಿವಂತರ ಮನೆಗೆ | ಹರಶರಣರು ಬಂದಿರಲವರು || ಗರಹೊಡೆದಂದದಿ ಸಿರಬಾಗದೆ ತಮ್ಮ | ಭರದೊಳಗಿರುವರು ಲಕ್ಷಿಸರು|| ಹಿರಿ ಹೇಡರು ತಮ್ಮ ತುರುಬು ಸಿಂಗರಿಸುವ | ಮರಿಮಕ್ಕಳ ಸಂಭ್ರಮದಿಹರು || ಪರಿಜನರಿಂದಲಿ ಕರಸುತವರು | ಸತ್ಕರಿಸುವರಲ್ಲದೆ ತಾವ್ ಬರರು ||೨|| ಹರ ಶರಣರು ತಮ್ಮ ಸಿರಿಬಂಡ ಕಾಲಕೆ | ಇರುವಿಗೆ ಸಮಮಾಡಿ ಕಾಣುವರು | ಹರಣ ಹೋದರು ಬೇಡ ಹರಸಿರಿಗಾರರು| ಸುರೆಗುಡಿದಂದದೊಳಿರುತಿಹರು|| ದೊರೆ ಮಹಂತೇಶನೆ ಗರ್ವದೊಳಿರುತಿಹ | ಸಿರಿವಂತರ ಮನೆಯನು ಬಿಡಿಸಿ|| ಗುರುಭಕ್ತಿಯನುಳ್ಳ ಕಿರಿಭಕ್ತರ ಮನೆ | ತುರುವ ಕಾವುದು ಬಹುಲೇಸು ಕೊಡೊ ||೩||

೮೭

ಶ್ರೀ ಗುರು ಭಜನೆಯ ಮಾಡುತ ಪರಿಪರಿ ನೀಗುವೆ ಭವಮಾಲೆ ಗಳೀಗ | ಆಗಮವರಿಯದವರು ಮೋಕ್ಷಪ್ರದ ನಾಗಭೂಷಣ ಶರಣರು ಬೇಗ ||ಪಲ್ಲ|| ಬಸವನ ಸಂತತಿ ಪ್ರಭು ಸಂತತಿಗಳ ಹಸನದಿ ಮಹ

ನೀಲಾಂಬಿಕೆಯು । ಕುಶಲತರವ ಮಹದೇವಿಯು ಸಂತತಿ ಪಶುಪತಿ ಶರಣರ ಪಾದವನು ॥೧॥ ಸತ್ಯರ ಭಜನೆಯು ನಿತ್ಯರ•ಭಜನೆಯು ನೆತ್ತಿ ಬಾಗಿ ಹಸ್ತವ ಮುಗಿದು । ಉತ್ತಮ ತನವಲಿ ಚಿತ್ತವಿಟ್ಟು ಶಿವಗತ್ತಿಲಿ ಕುಣಿಯುತ ನಾದ ದೊಳು ॥೨॥ ಪರಶಿವ ಜ್ಞಾನಾ ವ್ರತಗಳ ಕುಡಿಸುವ । ಮರಣರಹಿತ ಮಹಜ್ಞಾನಿಗಳ । ಹರಹರ ಥೈ ಥೈ ಶಿವಶಿವ ಥೈ ಥೈ ಗುರುವ.ಹಂತೇಶ ನಮೋ ಎನುತ ॥೩॥

೮೮

. ಸುಮ್ಮನಿರು ಕಂಡ್ಯಾ ಶಿವಯೋಗಿ ಮಹಲಿಂಗದಂತೆ । ತಮ್ಮ ಭಕ್ತಿ ಯಲಿ ತಾವೇನಮಾಡಿದರು ॥ಪಲ್ಲ॥ ಗುಡಿಯಲಿಂಗಕ್ಕೆ ಕಣ್ಬಟ್ಟುಗಲೀಪಗಳ। ಬಿಡದೆ ಪೂಮಾಲೆಗಳ ಸಿಂಗರಿಸುವಂತೆ ।ಪೊಡವಿಜನ ತಮ್ಮ ಭಕ್ತಿಯ ಲೇನು ಮಾಡಿದರು ಕೊಡಹಬೇಡೆನ್ನದಿರು ಲಿಂಗಾದ ಮೇಲೆ ॥೧॥ ಬೇಕೆಂದು ಮಾಡುವರು ಬೆಡೆಂದರೆ ಬಿಡುತಿಹರೆ ।ಏಕ ಮನಸಿನ ಭಕ್ತಿ ಶಿವಗೆ ಸಲ್ಲುವ ದು ॥ ಸಾಕು ತಗಲಿನ ಭಕ್ತಿ ಮಾಡಿದರು ಸಲ್ಲದು । ಲೋಕದೊಳು ಲೀಲೆ ಮಾತ್ರಾಗಿ ಬಂದ ಮೇಲೆ ॥೨। ಸಲ್ವ ಭಕ್ತಿಯು ಸೇವೆಯುಲ್ಲಿರಲು ಸಲ್ವವು। ಸಲ್ಲದ ಪದಾರ್ಥಗಳು ಸಲ್ಲುತಿಹವೆ ॥ ಎಲ್ಲ ಗುರುಮಹಂತಲಿಂಗೇಶಗೆ ಸಮರ್ಪಿಸುತ ತಲ್ಲೀನವಾಗಿ ಮಹಲಿಂಗದೊಳಗೆ ॥೩॥

೮೯

ಅವರವರ ಭಕ್ತಿಗೆ ಅವರವರ ಭಾವಕ್ಕೆ । ಅವರವರ ತೆರನಾಗಿ ಇರುತಿ ಹನು ಶಿವಯೋಗಿ ॥ಪಲ್ಲ॥ ಇರದೊಂದು ಕನ್ನಡಿಯು ನೂರಾರು ಜನ ಪಿಡೆಯೆ । ಸರಳಾಗಿ ಅವರವರ ರೂಪು ಕಾಣುವಂತೆ । ಹರಿಯ ಭಕ್ತರಿಗೆ ಹರಿ ಹರನ ಭಕ್ತರಿಗೆ ಹರ । ನರರೇನು ಭಾವಿಸುವರವರಂತೆ ತೋರುವನು ॥೧॥ ಮತ ಭೇದದವರು ದುರ್ಮತಿಯಿಂದ ಯತಿವರಗೆ । ಸ್ತುತಿನಿಂದೆ ಮಾಡಿದರೆ ಅವರಿಗೆ ತಿರುಗುವವು । ಯತಿವರನು ತಾ ತನ್ನ ಪಥದಲ್ಲಿಯಿರುವನು । ಕ್ಷಿತಿಯ ಜನರ ಪಾಪ ಪುಣ್ಯಫಲ ಪರೀಕ್ಷೆ ॥೨॥ ಕುಲಛಲವ ಹಿಡಿದಿರುವ ಕಲಕ ಮನದವರಲ್ಲಿ । ತಿಳುವಳಿಕೆ ಶಿವಚಂದ್ರಮ ಕಾಣುವ ಪರಿಯಂತು । ಕುಲಛಲವನತಿಗಳೆದ ತಿಳಿಯುಮನದವರಲ್ಲಿ । ಸಲೆ ಮಹಂತಲಿಂಗ ಚಿತ್ ಸೂರ್ಯ ಕಾಣುವನು ॥೩॥

೯೦

ಮಗನ ತೂಗಿರೋ ಭಕ್ತರು ಮಗನ ತೂಗಿರೋ । ಆಗಜೆ ತನಗೆ ಮೊಲೆ ಹಾಲಿಲ್ಲದೆ ಜಗಕೆ ಕಳುಹಿದಳು ಪುತ್ರನ ॥ಪಲ್ಲ॥ ಭಕ್ತಿರಸವ ದಣಿಯ ಲುಂಡು । ಶಕ್ತಿವಂತನಾಗಿ ಬಹಳ ॥ ಮುಕ್ತಿ ಮಾರ್ಗ ಪಿಡಿದು ಬಾರೆಂ। ದ್ಯುಕ್ತಿಯಿಂದ ಕಳುಹಿದಳು ॥೧॥ ತಾಯಿ ತಂದೆಗಳನು ಆಗಲು । ಪಾಯ ತಪ್ಪಿ ಧರೆಗೆ ಬಂದೆ । ಸಾಯುಗೊಲದೆ ಭವದಿ ಕೆಡಹಿ । ಘಾಯ ಮಾಸಿ ಜನ್ಮ ರೋಗದ ॥೨॥ ಪರುಮ ಶಿಶು ಮಹಂತೇಶ ಗಿರಿಜೆ। ಹಿರಿಯ ತಂದೆ ತಾಯಿ ಗಳಿನ್ನ। ಮರೆತರವರು ಮಗನ ಚಿಂತೆ। ಗುರಿಯಮಾಡಿದವರಯ್ಯ ನಿಮಗೆ॥೩॥

೯೧

ಗುರುವೆ ನೀ ಮಾತನಾಡೊ । ಸುರತರು ಕಲ್ಪತರುವೆ ನೀ ಮಾತ ನಾಡೊ । ಸುರರ ದೇವರ್ಕಳ ಒಡ್ಡೋಲಗದೊಳು ಮೆರೆವೆನೀ ಮಾತನಾಡೊ ॥ಪಲ್ಲ॥ ಲಿಂಗವೆ ಮಾತನಾಡೊ । ಶ್ರೀಗುರು ಮಹಂತಲಿಂಗವೆ ಮಾತ ನಾಡೊ ॥ ಸಂಗನ ಶರಣರ ಅಂಗೈಯೊಳಿರುವಂಥ ಲಿಂಗವೆ ಮಾತನಾಡೊ ॥೧॥ ಹರನೆ ನೀ ಮಾತನಾಡೊ ಗೋಪತಿ ಮೇಲೆ ಮೆರೆವೆನೀ ಮಾತನಾಡೊ ಧರೆಯ ತಾಳಿರುವಂಥ ಉರಗನ ಧರಿಸಿದ ದೊರೆಯೆ ನೀ ಮಾತನಾಡೋ ।೨। ಅಕ್ಷಯ ಮಾತನಾಡೊ । ಅನ್ನವನುಂಬ ಭಿಕ್ಷುಕ ಮಾತನಾಡೊ ॥ ಪಕ್ಷಿ ವಾಹನ ಸಂಪ್ರೀತನಾಗಿರುವಂಥ ಸಾಕ್ಷಾತ್ ಮಾತನಾಡೊ ॥೩॥ ದಕ್ಷರಿಪು ಮಾತನಾಡೊ । ಅಧರ್ಮವನ್ನು ಶಿಕ್ಷಿಪ ಮಾತನಾಡೊ ॥ ಕುಕ್ಷಿಯೊಳಗೆ ತ್ರೈಲೋಕವನೊಳಕೊಂಡು । ರಕ್ಷಿಪ ಮಾತನಾಡೊ ॥೪॥ ಮಸಣ ವಾಸನೆ ಮಾತನಾಡೊ । ಮಾಯೆಗೆ ಸಿಲ್ಕದಸಮನೆ ಮಾತನಾಡೊ । ವಸುಧೆಯೊ ಳಗೆಯೊಬ್ಬ ವನಿತೆಯ ಮೋಹದ ಶಿಶುವೇ ನೀ ಮಾತನಾಡೊ ॥೫॥ ಭಕ್ತಿ ಬಂಧುವೆ ಮಾತನಾಡೊ । ಮುಕ್ತಿಯ ಮಾರ್ಗದ ಗೊತ್ತು ತೋರುವನೀ ಮಾತನಾಡೊ । ಭಕ್ತಿಯುಳ್ಳವರಲ್ಲಿ ನಿತ್ಯವಾಗಿರುವ ವಿರಕ್ತ ನೀ ಮಾತ ನಾಡೊ ॥೬॥ ದೇವನೀ ಮಾತನಾಡೊ । ದೇವರ ಸಂಜೀವನೆ ಮಾತ ನಾಡೊ ॥ ಪಾವನ ಗಂಗೆಯ ಜಡೆಯೊಳು ಧರಿಸಿದ ಸ್ವಾಮಿ ನೀ ಮಾತ ನಾಡೊ ॥೭॥ ಸಂಗನ ಬಸವಣ್ಣನ ಸತಿಯ ನುಂಗಿದವನೆ ನೀ ಮಾತ ನಾಡೊ । ಭೃಂಗೀಶ ಮೊದಲಾದ ಪ್ರಮಥ ಗಣಂಗಳ ಸಂಗಾತಿ ಮಾತ

ನಾಡೊ ||೮|| ಜಂಗವು ರೂಪಿನಲಿ ಜಗವ ನೋ । ಡಲು ಬಂದಾತ ಮಾತನಾಡೊ || ಜಂಗುಳಿ ದೇವರ ಒಡೆಯ ಶ್ರೀಗುರು ಮಹಂತಲಿಂಗವೆ ನೀ ಮಾತನಾಡೊ ||೯||

೯೨

ಯಾರು ಬಂದರೆ ಏನು । ಯಾರು ಹೋದರೆ ಏನು । ಪೂರ ನಿಜ ಧ್ಯಾಸನವ ಸೇರಿ ನಿಂದರಿಗೆ||ಪಲ್ಲ|| ಕ್ರಿಯೆ ಮಾರ್ಗ ಕನ್ನಡಿಯ ಸ್ವಯಸೂಕ್ಷ್ಮ ದಿಂ ಪಿಡಿದು । ದಯದಿ ಗುರುತತ್ವವುಸಿಕಂಡು ಲೌಕಿಕರ || ಕಾಯ ವರ್ಣಾಶ್ರಮದ ಭೇದ ವರ್ತನೆ ಬಿಟ್ಟು || ಪಾಯದಿಂ ಮಹಾಲಿಂಗ ಭೋಗಿಯೆನಿಸಿದಗೆ ||೧|| ರಾಗ ವಿರಾಗ ವರ್ಜಿತನಾದ ಮಹಿಮನಿಗೆ । ತ್ಯಾಗ ಭೋಗಗಳುಳ್ಳ ಅರಸು ಆಳೊಂದೆ || ಯೋಗ ಶಿವಮುದ್ರೆಯಲಿ । ಎರಡಳಿದು ಭವ ಮಾಲೆ । ನೀಗೆಸವ ಶ್ರೀ ಶಿವೋಹಂಭಾವಿಗೆ ||೨|| ಅಂದಳವು ಸಿದಿಕೆಯು ಗಂಧ ಕಸ್ತೂರಿ ಕೇಸರಿ । ವಂದೆ ಮಾಡಿಹ ಭಕ್ತಿಭೋಗಕ್ಷೇತ್ರದೊಳು|| ಇಂದು ಜಲದೊಳಗಿರ್ದು ಇಲ್ಲದಂತಿರುವ ಮಹಾ । ಸಂದಮಯ ಗುರುಮಹಾಂತ ಲಿಂಗನಿಗೆ ಗೌರಿ ||೩||

೯೩

ಧನ್ಯನಾದೆನು ಶಾಂತವೀರಸ್ವಾಮಿ । ನಿನ್ನ ಪಾದಾರವಿಂದವ ಕಂಡುದ್ಧಾರ ||ಪಲ್ಲ|| ಎಚ್ಚರ ಮರೆದಿರ್ದೆನಯ್ಯ । ನಿನ್ನ ಕಚ್ಚಿ ತ್ರೈಮಲಗಳ ಪಶ್ಚಿಮದಯ್ಯ || ಎಚ್ಚರ ಕೊಟ್ಟೆನ್ನಜೀಯ । ನೀನೆ ಸಚ್ಚಿದಾನಂದ ನೆಂದೊರೆದೆದಮ್ಮಯ್ಯ ||೧|| ಹೃದಯವಾರಿಜದಿಂದ ಬಂದು । ಯನಗಿಹುದು ಮರವೆ ಕದವನು ತೆರೆದು ನೋಡೆಂದು || ಪದುಳದಿಂವಳಗಲ್ಲೆನಿಂದು । ನಿನ್ನ ಸವಮಲ ರೂಪವ ತೋರಿದೆ ಇಂದು ||೨|| ಚಿದ್ಗವಿಯೊಳಗಿರುವಂಥ । ನಿತ್ಯಮುದ್ಗುರು ಚರರೂಪದಿ ಚರಿಪಂತ || ಸದ್ಗುಣ ಗಣನುಳ್ಳ ಶಾಂತ । ಕರಗದ್ದಿಯೊಳಗೆ ಮಹಂತಲಿಂಗಾಗಿ ನಿಂತ ||೩||

೯೪

ಗುರುವೆ ನಿಮ್ಮ ಕರುಣಾದೃಷ್ಟಿಯ ತೆರೆದು ನೋಡೆನ್ನ । ದುರಿತ ಹರಿದು ಹೋಗುವಂತೆ ಮಹಂತ ಬಾಲಬ್ರಹ್ಮಿಯೇ ||ಪಲ್ಲ|| ಇರಿವೆ ಮೊದಲು ಆನೆ ಕಡೆಯು ಸಕಲ ಜನ್ಮವ ತಿರುಗಿ । ನರಶರೀರ ತಾಳಿ ನಿಮ್ಮ ಕೃಪೆಯ

ಪಡೆಯದೆ ॥ ಮರಳಿ ಹುಳಗಿಡಂಗಳಾಗಿ ಹುಟ್ಟುತಿರುವರ ಕಂಡು । ಶರಣು ಹೊಕ್ಕೆ ಹೆದರಿ ನಿಮ್ಮ ಗುರುವರೇಣ್ಯನೆ ॥೧॥ ಎಷ್ಟು ಉಂಟು ಭೂಮಿಯ ಮೇಲೆ ಕಣ್ಣಿಗೆ ಕಾಣುವದು ತನಗೆ । ಅಷ್ಟರೊಳಗೆ ತಾನೆಹುಟ್ಟಿ ಬರುವು ದೆಂದಿಗೆ ॥ ಶ್ರೇಷ್ಠವಾದ ಮನುಜ ಜನ್ಮ ದೊರಕುದೆಂದಿಗೆ । ತಾನು ಸೃಷ್ಟಿಗೀಶ ಶಿವನ ಪಾದ ಕಾಣುವುದೆಂದಿಗೆ ॥೨॥ ಪಾಹಿ ಮಾಯಾ ಕೋಲಾಹಲ ಮದನ ಮರ್ದನ ಶೂರ । ಪಾಹಿ ನಿಮ್ಮ ಪಾದಕಮಲ ಭಜಕ ಭಕ್ತರ ॥ ಪಾಹಿ ಭಕ್ತಿ ಪ್ರಮೆ ವೈರಾಗ್ಯ ರತ್ನ ಸಾಗರ ಸಾಧ್ಯ । ಪಾಹಿಮಹಂತ ಲಿಂಗರಾಜ ಶಿವಯೋಗೀಶ್ವರಾ ॥೩॥

೯೫

ಧರ್ಮವೆ ಇದು ಶಂಕರಾ । ಪ್ರಾಣಿಗಳ ಕರ್ಮ ನಿರ್ಮಾಣ ಮಾಡಿ ಕೊಲ್ಲುವದು ॥ಪಲ್ಲ॥ ಪರಿಪರಿಯದೋಷಹಚ್ಚಿ । ನರಿ ನಾಯಿ ಕುರಿಕೋಳಿ ಜನ್ಮ ಮೊದಲಾದಿರುವಿಯಂಭತ್ತು ನಾಲ್ಕು ಲಕ್ಷ । ಶರೀರದೊಳು ಪುಟ್ಟು ವಂತೆ ಮಾಡಿದೆಯ ॥೧॥ ಸುರಿವ ರಕ್ತದ ಯೋನಿಯ ಒಳಗೊಮ್ಮೆ । ಬರುವಾಗ್ಗೆ ಕೋಟಿ ಸಿಡಿಲು ಹೊಡೆದಂತೆ । ಹಿರಿಬಾಧೆಯಾಗುತಿಹುದು । ಮುಂದಿನ್ನು ಸರ್ವಜನ್ಮದ ಬಾಧೆಗೆ ನೆಲೆಯಿಲ್ಲ ॥೨॥ ನರಜನ್ಮ ದೊರಕು ದೆಂದು ಸರ್ವರಿಗೆ ಅರಿವು ತಾ ಹುಟ್ಟುದೆಂದು । ಜ್ಞಾನುಳ್ಳ ಪರಮ ಗುರು ದೊರಕುದೆಂದು । ಇವರಿನ್ನು ಸ್ಥಿರಮುಕ್ತ ರಾಗುವದೆಂದೊ ನಾ ಕಾಣೆ ॥೩॥ ಮರೆತು ನಿರ್ಮಿಸಿದೆ ಕರ್ಮವನು ಶಂಕರಾ । ಶರಣರಾರಿದ್ದಿಲ್ಲವೆ ಎಚ್ಚರ। ಕರ ದು ಹೇಳಲ್ಕೆ ನಿಮಗೆ ಮೂಲೋಕ ಪಿರಿಯರಿಗೆ ಎಚ್ಚರುಂಟೆ ಶಿವನೆ ॥೪॥ ಕರ್ಮವೆಂಬುವ ನೀರಿನ ಸೆಲೆಯಲ್ಲಿ ಅರಿತುಕಲ್ಪಡೆ ಕುಡೇನಿ । ಮುಂದಿನ್ನು ಗುರು ಮಹಂತೇಶ್ವರ । ಜೀವಿಗಳು ಪರಿಪರಿಯ ಬಳಲುತಿಹರು ನಿಮಗೆ ॥೫॥

೯೬

ಜಯಜಯ ಗುರುವೆ ಪಾಲಿಸಿ । ದಯಮಾಡೋ ಪದವ ॥ಪಲ್ಲ॥ ಮೋಕ್ಷದಾಯಕ ಗಣ । ಸಾಕ್ಷಿಸಹಿತ ತ್ರೈದೀಕ್ಷೆನೇನೊಲಿದಿತ್ತೆ ॥೧॥ ನಿತ್ಯ ನಿತ್ಯನಿರಂಜನ ವಸ್ತುವಿದೆಂ । ದುತ್ತಮ ಹಸ್ತದೊಳಿತ್ತೆ ॥೨॥ ಲಿಂಗದ ನಡೆ ನಿಜಲಿಂಗ ನುಡಿ । ಚಿಲ್ಲಿಂಗದ ಜ್ಞಾನವನಿತ್ತೆ ॥೩॥ ಸ್ವಯ ಚರಪರ ಜಂಗಮ ಚರಣದ ಚಿನ್ । ಮಯ ತೀರ್ಥವ ಸಲಿಸುತ್ತೆ ॥೪॥ ಶುದ್ಧ ಸಿದ್ಧ ಪ್ರಸಿದ್ಧ

ಪ್ರಸಾದವ । ನಿರ್ಝರದಿಂದ ಣಲಿತ್ತಿ ||೫|| ನಿನ್ನ ಪದಾಬ್ಜದ ರೇಣು ಭಸಿತವ । ನನ್ನ ಲಲಾಟದೊಳಿಟ್ಟೆ ||೬|| ಆರು ಮೊಗದ ಮೊಗವಾಗಿಹ ಮಣಿಗಳ ಸೇರಿಸಿ ಕೊರಳೊಳಗಿಟ್ಟೆ ||೭|| ಶಿವಪೆಸರಾದ ಮಹಮಂತ್ರವನೆ । ನ್ನ ವಿರಳ ಕಿವಿಯೊಳು ಪೇಳ್ದೆ ||೮|| ಅಷ್ಟಾವರಣ ತನುವಿಗಳವಡಿಸಿ । ಶಿಷ್ಟಾಚಾರವ ಪೇಳ್ದೆ ||೯|| ಚನ್ನವೀರೇಶ ಮಹೇಶ ಶಿಖಾಮಣಿ । ಎನ್ನನು ದಯದಿಂ ಪೊರೆಯೋ ||೧೦||

೯೭

ತಾನೆ ಬೆಳಗುತಿದೆ ಸ್ವಯಂ ಜ್ಯೋತಿ ತಾನೆ ಬೆಳಗುತಿದೆ । ಮಾನಸ ವಾಚಕ ಕಾಯಕದೊಳು ತನ್ನ ||ಪಲ್ಲ|| ತನ್ನ ವಾಮಕರ ಪೀಠ ಪಾತ್ರೆಯೊಳು । ನಿರ್ಭಿನ್ನ ಭಕ್ತಿಯ ರಸತೈಲ ತೀವಿ । ಸನ್ನುತ ನಡೆನುಡಿಭಕ್ತಿ ವಿಡಿದು । ಸುಪ್ರಸನ್ನ ಪ್ರಕಾಶ ಸತ್‌ಕ್ರಿಯಾ ಜ್ಯೋತಿ ||೧|| ಪರತತ್ವಹೃದಯ ಪ್ರಣತೆಯೊಳು । ಷಣ್ಮಂತ್ರದರುವೆಂಬಸುರಸ ತೈಲವ ಹೀರುತ । ವರದೃಢ ಚಿತ್ತ ಭಿತ್ತಿಯ ಕೊನೆಯೊಳು । ಲಿಂಗಕಿರಣದೊಬ್ಬಳಿಯ ಸುಜ್ಞಾನ ಜ್ಯೋತಿ ||೨|| ಚಾರು ಸದ್ಭಾವ ಪಣತೆಯೊಳು । ತತ್ವವಿಚಾರ ಸುಸಾರ ಘೃತವನೀಂಟುತ । ಮೀರಿದಾಚರಣೆ ಬತ್ತಿಯ ಕೊನೆಯೊಳು । ಚನ್ನವೀರ ಮದ್ಗುರು ಮಹಾಜ್ಞಾನ ಜ್ಯೋತಿ ||೩||

೯೮

ಆನಂದವಾನಂದ ಭಜನಾ ಶಿವಯೋಗಿ ಧ್ಯಾನಾ । ಆನಂದವಾನಂದ ಹರನ ನಾಮಾಮೃತಪಾನ ||ಪಲ್ಲ|| ಬೈಗು ಬೆಳಗು ಬಿಡದೆ ಭಜಿಪೆ । ಭವಹರನೆ ನಿನ್ನ ನುತಿಪೆ || ಯುಗದವತಾರಿ ನಮಿಪೆ । ಶಿವಯೋಗಿ ಬಾರೊ ||೧|| ಭಕ್ತಗಣವು ನೊಂದಿಹುದೆಂದು । ಮುಕ್ತಿಪಥವ ತೋರದಿಂದು || ಭಕ್ತಿಮುಕ್ತಿ ಅರುಹಲಿಂದು । ಜಗಯೋಗಿ ಬಾರೊ ||೨|| ಗಚ್ಚಿನ ಮಠದಿ ನೆಲಿಸಿ । ಸಗ್ಗದ ಸಂಭ್ರಮ ತರಿಸಿ । ಸಗ್ಗವ ಮೀರಿದೆ ದೇವಾ । ಮನೋದಿವ್ಯಭಾವಾ ||೩|| ಹೇ ದಯಾಘನ ಲೀಲಾ । ಪರಮಪಾವನಲೋಲಾ || ಎಮ್ಮ ಹೃದಯ ಕಮಲ ಮಾಲಾ ಜಗದ ಕೃಪಾಲಾ ||೪||

೯೯

ಪರಿಪಾಲಿಸೊ ಗುರುವರ್ಯ ಘನಶೀಲನೆ ಮುರುಘಾರ್ಯ ||ಪಲ್ಲ|| ಪೊಡವಿಗೊಡೆಯ ನಿನ್ನ ಅಡಿಯ ಪಿಡಿಯ ಬಂದೆನೆನ್ನ ನುಡಿಯ ಬಿಡದೆ ಲಾಲಿ

ಸಯ್ಯ ಜಡ ಧೃಡಮತಿಯ । ಕೊಡುವುದಯ್ಯ ತಡವೇಕಯ್ಯ ಸಡಗರದಿಂದ ಸೌರಿಮಯ್ಯ । ಇಡುವುದೀಗೆನ್ನೊಳುದಯ ಪಿಡಿದುಕೋ ನೀನೆನ್ನ ॥೧॥ ಯೋಗಿ ನಿನ್ನ ಸೇವೆಗಾಗಿ ತಾಗ ಬಾಗಿ ತಲೆತೂಗಿ ಸಾಗಿಬೇಗ ಬಂದೆ ನಿನ್ನ ಜಾಗಕೀಗಳೆ । ಹೋಗದೆ ಸಂಸ್ಕೃತಿದಯುವಾಗದೆಯುನ್ನೊಳು ನಿಗಮಾಗಂಗ ಳೆಲ್ಲ ನಿತ್ಯ ಕೂಗಿ ಕೂಗಿ ಪೇಳ್ವವು ॥೨॥ ಕಾಶಿಗಿಂತ ಮೇಲುತರ ಭಾಸುರಥ ಣಿಯ ಪುರವಾಸ ದೋಷ ನಾಶಭವ ಪಾಶವಿಹರ । ಆಶಿಸುತ್ತಿ ಬರುವರು ಸೋಸಿ ನೋಡಿ ನೀನಂಕರ । ದಾಶಯು ಪರಮೇಶನಾಗಿ ಸ್ತುತಿಪರಿ ॥೩॥

೧೦೦

ಗುರುದೇವಾ ಪೊರೆಯೈ ಜ್ಞಾನು ಭಾವಾ ವರವೈಭವಾ ಚರಪುಂಗವಾ ॥ಪಲ್ಲ॥ ಸಾರಗುಣಾಂಕಲಿ ತಾ ಕೃಪಾಲಾ ಸುರಿಸೊಜಾಲಾ ಪಾಲಲೋಲ । ಚಾರು ನಿರ್ಮಲ ಘನಶೀಲಾ ॥೧॥ ಯೋಗಕಲಾಮುಖಿ ತಾ ಸ್ವರೂಪಾ ಭೋಗ ಸಂತಾಪಾ ದೂರ ಕೋಪ ರಾಗಾ ವಿರಹಿತ ಜಿತಪಾಪಾ ॥೨॥ ಭಾಸುರ ಮಾದಥಣೀ ನಿವಾಸಾ । ಶ್ರೀ ಮುರಘೇಶಾ ಸ್ತೋತ್ರ ತೋಷಾ । ಭೂಸೇವ್ಯಾ ಸಿದ್ಧಲಿಂಗೇಶಾ ॥೩॥

೧೦೧

ದೇವ ಜನಜೀವ ಸದ್ಭಾವ ಮುನಿಪುಂಗವಾ । ಅಥಣಿಯ ಪುರವಾಸಿ ಮಹಿಪಾವನಾ ॥ಪಲ್ಲ॥ ಜ್ಞಾನಹತಪಾಪ ಜಿತಕೋಪ ಯತಿ ಮಾನಸಾ ಮಾನಾಪಮಾನಯೋ ಸಮಮಾನಸಾ ॥೧॥ ನಿತ್ಯ ಶಿವತತ್ವ ಶಿವಧ್ಯಾನ ಮತಿಸ್ಥಾಪಿತಾ। ತವ ಭೃತ್ಯಾ ವೀರಾ ಬಾಲಾನುತಾ॥೨॥ ಸ್ವಾಮಿ ಶಿವಯೋಗಿ ಕುಲಪಾಲ ಭವನಾಶಕಾ ಕಾಮಾರಿ ಜಿತಸೋಮ ನುತಪಾಲಕಾ ॥೩॥

೧೦೨

ಶ್ರೀಗುರುಪ್ರೇಮವು ಶಿವಯೋಗಿ ನಾಮವು ಶ್ರೀಪಾದಪದ್ಮವು ಓಂ ಓಂ ಓಂ ॥ಪಲ್ಲ॥ ಶ್ರೀ ದೇವನೇ ಶ್ರೀ ಸುಭಾವನೆ । ನೀಗಿ ಭವದ ಭಾವ ಸಾಗಿ ಸಾಯುಜ್ಯಪದ । ಭೋಗಿಸುವನು ಸದಾ ಓಂ ಓಂ ಓಂ ॥೧॥ ಸುಶೀಲನೇ ಬಲು ವಿಶಾಲನೇ । ಭಾಸುರಥಣಿಪುರ ವಾಸರಜತಗಿರಿ । ಪೋಷಿಸದ್ಗುರಿ ದೂರಿ ಓಂ ಓಂ ಓಂ ॥೨॥ ಚಿನುಮಯನೆ ಘನ ತನುಮಯನೆ । ಮನ ಮದನಹರ ಜ್ಞಾನ ಧಾರಣಧರ । ಜ್ಞಾನಮಂಗಲಕರ ಓಂ ಓಂ ಓಂ ॥೩॥

ಉನ್ನತನೆ ಧರ್ಮ ಸನ್ನುತನೆ । ಚಿನ್ನಚೆನ್ನಿಗವೀರ ಚನ್ನನಮನಧೀರ ಶೂನ್ಯ ಸಿಂಹಾಸನ ಶೂರ ಓಂ ಓಂ ಓಂ ॥೪॥ ನಿಶ್ಚಿಂತನೆ ಸುಖಸುಚಿಂತನೆ । ವಾಚೆ ವಚನ ವರ್ಣ ಯೋಚನೆಯ ಕಾರಣ । ಲೋಚನೇರನೆ ಕರುಣಾ ಓಂ ಓಂ ಓಂ ॥೫॥

೧೦೩

ಶ್ರೀ ಮುರುಘೇಂದ್ರನ ಸುಂದರ ಪಾದವ । ಪ್ರೇಮ ಲೀಲೆಗಳ ಪಾಡುತ ನಮಿಸುವ ॥ಪಲ್ಲ॥ ವೀಣೆಯ ನುಡಿಸುತ ಗಾನವ ಪಾಡುತ । ತಾಳದಿ ಪಿಡಿಯುತ ಮೇಳದಿ ಕುಣಿಯುವ । ಅಥಣಿಯ ಶ್ರೀ ಶಿವಯೋಗಿಯ ಭಜಿಸುವ ॥೧। ಬಗೆಬಗೆ ಲೀಲೆಯ ಜಗದೊಳು ತೋರುತ । ಭಾವಿಕ ಜನರನು ಪಾವನ ಗೈಯುವ । ಪರತರ ಯೋಗಿಯ ಹರುಷದಿ ಹಾಡುವ ॥೨॥ ಭಕ್ತರ ಭವ ಬಂಧನವನು ಕಳೆಯುತ। ಲಿಂಗಾನಂದದ ನಿಜವನು ತೋರುವ। ಮಂಗಲ ಮೂರ್ತಿಯ ಮೋದದಿ ನೆನೆಯುವ ॥೩॥

೧೦೪

ಶ್ರೀ ಶಿವಯೋಗಿ । ಅಥಣಿಯ ಶ್ರೀ ಶಿವಯೋಗಿ ॥ ಅಥಣಿಯ ಶ್ರೀ ಶಿವಯೋಗಿ ॥ಪಲ್ಲ॥ ಇಂಗಳಗಾವಿಯೊಳ್ ಬೇಗನೆ ಜನಿಸಿ । ಬಗೆಬಗೆ ಲೀಲೆಯ ತೋರುತಲಿ । ಅಥಣಿಯ ಶ್ರೀ ಗಚ್ಚಿನಮಠವಾಸಿ ॥೧॥ ಮುಕ್ತಿಯ ಪಡೆಯಲು ಗುಹೇಶ್ವರ ಗದ್ದೆಯೊಳ್ । ಸತತದಿ ತಪವನು ಆಚರಿಸಿ । ಸುತ್ತಲು ಜನರನು ಮುಗ್ಧಗೊಳಿಸಿದಿ ॥೨। ಬಸವಾದಿ ಪ್ರಮಥರಂತೆ ನಡೆಯುತ । ಯೋಗಿ ಮಣಿಯೆಂದೆನಿಸಿದಿ । ಪಾವನವಾಗಲು ಪರಶಿವನೊಳ್ ಬೆರಿದಿ ॥ ೩ ॥

೧೦೫

ನೋಡಿ ಧನ್ಯನಾದೆ ನಾನೀಗ । ಶಿವಯೋಗಿಯ ಪಾದವ ನೋಡಿ ಧನ್ಯನಾದೆ ನಾನೀಗ ॥ಪಲ್ಲ॥ ನೋಡಿ ಪಾದವ । ಮಾಡಿ ಸ್ತೋತ್ರವ। ಕೂಡಿ ಧ್ಯಾನದಿಂ ಬೇಡಿ ಮೋಕ್ಷವ ॥೧॥ ತೂರಿ ಮಾಯೆ ಜಾಲವನ್ನು। ಸಾರಿ ನಿತ್ಯ ತತ್ವ ಸುಖಕೆ । ಸೇರಿ ಬ್ರಹ್ಮವನ್ನು ಭವದ ದಾರಿ ಮೀರಿ ರಾಜಿಪುದರಿಂ॥ ೨ ॥ ಭಾಸುರಥಣಿಯ ನಾಮಪತ್ತನ । ವಾಸುರುಚಿರ ಗಚ್ಚಿನಮಠ । ಧೀಶ ಮುಕ್ತಿಕೋಶ ಶ್ರೀ ಮುರುಘೇಶನೆಂದು ಬಾಸಿಪುದರಿಂ ॥ ೩ ॥

೧೦೬

ಶಿವಯೋಗಿರಾಜಬಾರೈ ಭವದೀಯಪಾದ ತೋರೈ । ತವೆ ನಿನ್ನ ನುತಿ ಸದರಾರೈ ಜವದಿಂದೆ ಕರುಣವ ಬೀರೈ ॥ಪಲ್ಲ॥ ನೀನೆನ್ನ ಪೊರೆಯ್ಯೆ ತಂದೆ । ನೀನೆನ್ನ ಕರೆಯ್ಯೆ ಮುಂದೆ । ಸ್ವಾನೂನ ಸುಖಕೊಡು ತಂದೆ ನೀನೀಗನುಗ್ರಹ ದಿಂದೆ ॥೧॥ ಪತಿತಾಳಿ ಪಾವನ ನಾಮಾ । ಮತಿಯೀಯೊ ನೀನಭಿರಾಮಾ । ಗತಿಯಾಗೊ ಭಕ್ತರಧಾಮಾ । ಹಿತಮಾಡೊ ನಿನಗಿದು ನೇಮ ॥೨॥ ಅಡಿ ದಾವರೆಯೊಳಗಿರುವೆ । ಬಿಡದೋತು ಸಲಹೈ ಗುರುವೆ । ಕೊಡುಬೇಡಿದುದ ಸುರ ತರುವೆ । ತಡಮಾಡದಿರು ಎನ್ನರುವೆ॥ ೩ ॥ ಮಲವೆಲ್ಲ ಹೊನ್ನು ಹೆಣ್ಣು ನಿನಗುಂಟು ಜ್ಞಾನದ ಕಣ್ಣು । ನೆಲಿಸಿಗ ಸೇವೆಯಗನ್ನು ಒಲಿಯೋ ಸದಾ ಶಿವಗಿನ್ನು ॥ ೪ ॥

೧೦೭

ಯೋಗಿಯ ಪಾದವ ತೋರೊ ಶಿವ । ಯೋಗಿಯ ಪಾದವ ತೋರೊ ಶಿವ ॥ಪಲ್ಲ॥ ನಿನ್ನ ಮಹಿಮೆಯು ಯಾರಿಗು ತಿಳಿಯದು । ಶಿವಸರ್ವಾನಂದ ದಲಿರುವ ॥ ೧ ॥ ನಿರ್ಮಲ ಭಾವದಿ ಲಿಂಗಪೂಜೆಯ ಮಾಡಿ । ಪುರಹರನಿಗೆ ತೋಷಿಸುವಾ ॥೨॥ ಶ್ರೀ ಗುರುಶಾಂತನ ಶಿಷ್ಯರೆಂದೆನಿಸುವ । ಮುರುಘೇಂದ್ರ ನಾಮದಿಂದಿರುವ ॥ ೩ ॥ ಅಥಣಿಯ ಪುರದೊಳು ವಾಸ ಶ್ರೀ ಗಚ್ಚಿನಮಠ ದೋಳಾನಂದದಲಿರುವ ॥ ೪ ॥

೧೦೮

ಯೋಗಿ ಪಾಲಿಸೈ ಶ್ರೀ ಶಿವಯೋಗಿ ಪಾಲಿಸೈ । ಯತಿವರ್ಯ ಧೃತ ಚರ್ಯ ನುತಿಸುವೆ ಸತತದಿ ॥ಪಲ್ಲ॥ ಶಿವಯೋಗ ನಿದ್ರೆಯೊಳಿರ್ಪನೆ । ಸುವಿ ರಕ್ತ ಅಥಣಿಯವಾಸನೆ । ಕವಿದಿರ್ಪ ಭವವನ್ನು ತವೆಸವಿಸೆನ್ನನು ॥ ೧ ॥ ಅಷ್ಟಮದಂಗಳ ನೋಡಿಸಿ । ದುಷ್ಟ ಸಮ ಭಾವಿಸಿ । ಶ್ರೇಷ್ಠ ಸದ್ಭಕ್ತರಿ ಗಿಷ್ಟಾರ್ಥವಿತ್ತಿಹ ॥ ೨ ॥ ಆರು ಭ್ರಮೆಗಳೆನ್ನ ಕೊಲ್ವವು । ಮೂರು ತಾಪಂ ಗಳು ದಹಿಪವು । ಸಾರಸ ಮೋಕ್ಷದ ಮಾರ್ಗವ ತೋರಿ ॥ ೩ ॥ ಕಾಲಭಯ ವನು ಕೀಳುತ್ತೆ । ಬಾಲನಂದದೊಳೆನ್ನ ನೋಡುತೆ । ಶೂಲಿಯ ನೊಲಿಸಿರ್ದ ಶೀಲಗುಣ ಸಚ್ಚರಿತ ॥ ೪ ॥ ಗುರುವರ ಶರಣರ ಕಾಯ್ವನೆ । ಧರೆಯೊಳು ಮಹಿಮೆಯ ತೋರ್ದನೆ । ಪರಮಾತ್ಮನೊಳಕೊಂಡ ಮುರುಘೇಶ ಶ್ರೀಕರ ॥ ೫ ॥

೧೦೯

ಅಗಲಿದಿಯಾ ಶಿವಯೋಗಿವರೇಣ್ಯ । ಅಗಲಿದಿಯಾ ಜಗವನೀಗಿದೆಯಾ ॥ಪಲ್ಲ॥ ಪರವೈರಾಗ್ಯನೆ ಲೌಕಿಕ ಭೋಗದೊಳ್ ಉರುತರ ಯೋಗಿಸಿನಾಚಾರದಲಿ ॥೧॥ ಅತಿಶಯ ಕೈಲಾಸದಧಿಪತಿ ಶಿವರೂಪನೆ ಹತಮಾಡಿ ಕಾಮನ ಖ್ಯಾತಿಯೊಂದಿದೆಯಾ ॥೨॥ ಭಕ್ತ ಸಮೂಹಕೆ ಮುಕ್ತಿಮಾರ್ಗವ । ಯುಕ್ತಿಯಿಂ ಬೋಧಿಸಿ ಮುಕ್ತರೊಳ್ ಕೂಡಿದೆಯಾ ॥೩॥ ಶಿವಯೋಗ ಭರಿತನೆ ಭವರೋಗ ವೈದ್ಯನೆ । ಭುವಿಯೊಳ್ ಮಹಿಮೆಯ ತೋರಿಯೈದಿದೆಯಾ ॥೪॥ ಧರೆಯೊಳು ಮೆರೆಯುವ ಅಘಣಿಯ ಪುರವಂ ತೊರೆದು ಶಿವಲೋಕವನೈದಿದೆಯಾ ॥೫॥

೧೧೦

ಶಿವ ಶಿವ ಜನ್ಮವಿದು ವ್ಯರ್ಥವು । ಸೇವೆ ಸತ್ಕರ್ಮಂಗಳನೆ ಮಾಡದಾ ॥ಪಲ್ಲ॥ ಸ್ವಾಮಿಯ ಪಾದವ ನೇಮದಿ ಪೂಜಿಸೆ । ಕಾಮಿತ ಫಲಗಳ ಪಡೆಯದಲೆ ॥ ಕಾಮಿಸಿಯರೊಳು ಕಾಮಿಸಿ ಬೀಳುವ ॥೧॥ ಲೋಕ ಕಲ್ಯಾಣಕೆ ತನುಮನ ಧನಗಳ । ಸಾಕಾಗುವಂತೆ ಮಾಡಿಸದಲೆ । ಕಾಕುಮನದಿಂದ ನೂಕಿ ನುಗ್ಗಾಗುವ ॥೨॥ ಬಾಸುರಘಣಿಮಠಧೀಶನಂ ಮುಕ್ತಿ । ಸಂತೋಷದಿಂದಲೆ ಆಶಿಸದೆ । ಹೇಸಿ ಸಂಸಾರದಿ ಘಾಸಿಯಿಂ ನಾಶಿಪ ॥೩॥

೧೧೧

ಭಜಿಸು ಭಜಿಸು ಶಿವ ನಾಮವನು । ಅಜಹರಿಗರಿಯದ ಪಾದವನು । ಮೂಜಗ ತೇಜದ ಶೇಖರನು । ಮಾಜದೀವ ನಿಜ ಮೋಕ್ಷವನು ॥ಪಲ್ಲ॥ ಸತಿಸುತ ಹಿತರರು ಮಡಿದಿರಲಿ । ಅತಿಸಂಕಟವದು ಒದಗಿರಲಿ । ಕ್ಷಿತಿಜನಾಧನದು ಕಾಡುತ್ತಿರಲಿ । ಸತತ ಬಿಡದೆ ನಿರುಪಮ ಶಿವನ ॥೧॥ ರೋಗಬಾಧೆಯದು ಒದಗಿರಲಿ । ಭೋಗರಹಿತನಾಗಿರುತಿರಲಿ । ನಾಗಪರಿದು ಘೂರ್ಣಿಸುತಿರಲಿ । ರಾಗದಿ ಸಂತತ ಚಿನ್ಮಯನ ॥೨॥ ನಾಶಪ್ರಪಂಚವ ಮೋಹವನಳಿದು । ನಾಶವಳಿವ ದೇಹವನುಳಿದು । ರೋಷ ಮದ ಮತ್ಸರವಳಿದು ಈಶ ಮುರುಘೇಶನ ಪಾದವಿಡಿದು ॥೩॥

೧೧೨

ಶಿವಯೋಗಿ ಜಗ ಪಾವನ ಮಾಡಿದ ಯೋಗಿ ।ಅಥಣಿ ವಿರಾಗಿ ಶ್ರೀ ಶಿವ ಯೋಗಿ ॥ಪಲ್ಲ॥ ನಿತ್ಯನಿರಂಜನ ಚಿತ್ಸುಖಿಯಾಗಿ । ಮೃತ್ಯು ಭಯುವನೆ ತಾನೀಗಿ ॥೧॥ ಬೆಳಗುವ ಜ್ಯೋತಿಯು । ಒಳಹೊರಗಾಗಿ ತಿಳಿ ಬೆಳಗುವ ರುಚಿ ತಾನಾಗಿ ॥೨॥ ಅಮಲ ಆರೋಗಿನಿ ಸ್ವಯಂವಿಧನಾಗಿ । ನುತಿಸುವ ಗುರು ಪಾದನು ಶಿರಬಾಗಿ ॥೩॥

೧೧೩

ನೀನೆಲ್ಲಿ ಮಾಯವಾದ್ಯೋ ಮುರುಘದೇವಾ ತೊರದೆನಗೆ ಚಿನ್ಮಯಾ॥ ಅರಿಯದವರು ನಾವು ನಿಮ್ಮಯ ನಿಲವ। ತಿಳಿಯದವರೋ ನಾವು। ತಿಳಿಯದೆ ಕೆಟ್ಟೆವು ಮಾಯಾ ಸಂಸಾರದೊಳು । ತೋರೋ ಮಹಿಮನೆ ದೇವಾ ಹೇಸ್ವಾಮಿ ॥ಪಲ್ಲ॥ ತಂದೆ ತಾಯಿ ನೀನೆ ಲೋಕದೊಳು ಬಂಧು ಬಳಗ ನೀನೆ । ಬಂದ ಕಂಟಕಗಳನು ಪಾರುಮಾಡುವಂಥ ಸಂಗಮನಾಥನೇ ನೀ ಮುರುಘಯೋಗಿ ॥೧॥ ಪರಶಿವ ನವತಾರಿಯೇ ಭೂಲೋಕದೊಳು ಭಕ್ತೋದ್ಧಾರಕನೇ । ಪರಮಾನಂದದಿ ಭಕ್ತರ ಕಾಯುವಂಥ ಮುಕ್ಕಣ್ಣ ಮುರುಘೇಂದ್ರನೆ ಹೇಸ್ವಾಮಿ ॥೨॥ ಶ್ರೀ ಕ್ಷೇತ್ರ ಅಥಣಿಯೊಳು ಗಚ್ಚಿನ ಮಠವು ಕೈಲಾಸವಾಗಿಹುದೊ । ಯೋಗ ಮಂಟಪದೊಳು ಪೂಜೆಗೈಯುವ ಮುರುಘ ದೇವನೆ ಬಾರೊ ಹೇಸ್ವಾಮಿ ॥೩॥

೧೧೪

ಶಂಭೋ ಶಂಕರಾ ನೀಲಕಂಠಾ ಬೇಗಬಾರೋ ಶಿವ ಶಂಭೋ ಬೇಗ ಬಾರೋ ॥ಪಲ್ಲ॥ ಭಜಿಸುವ ಭಕ್ತರ್ಗೆ ನಿಜಪದವಂ ತೋರೊ । ಸುಜನರ ಹೃದಯನೇ ಬೇಗ ಬಾರೋ ॥೧॥ ವರಚೋಳರಾಯಗೆ ಉರುತರ ಸಂಪದ ವಿತ್ತು । ಹರಶರಣರ ಹೃದಯನೇ ಬೇಗ ಬಾರೋ ॥೨॥ ಧರೆಯೊಳು ಅಥಣಿಯ ಪುರದೊಳು ಮೆರೆಯುವ । ಗುರುವರ ಮಹಾ ಶಿವಯೋಗಿ ಬೇಗ ಬಾರೋ ॥೩॥

೧೧೫

ಶರಣರ ಮಹಿಮೆ ತಿಳಿಯುವದೇ ಶಿವ ಪರಿಪರಿ ಪಾಪದ ನರ ಗುರಿಗಳಿಗೆ॥ಪಲ್ಲ॥ ದುರುಳರ ಸಂಗದಿ ಸರಸವನಾಡುತ। ಪರದ್ರವ್ಯವನಪಹರಿಸುವ

ವರಿಗೆ ||೧|| ಹೆಣ್ಣಿನ ರೂಪವ ಕಣ್ಣಿಲಿಕಂಡು | ಸಣ್ಣಾಗುವ ಈ ನರಗುರಿ ಗಳಿಗೆ ||೨|| ಧರೆಯೊಳು ಮೆರೆಯುವ ಪರತರ ಇಫಣಿಯ | ವರಶಿವಯೋ ಗಿಯ ನೆನೆಯದವರಿಗೆ ||೩||

೧೧೬

ಜಗದೇಕನಲಾ ಕರ್ನಾಟಕ ಕೀರ್ತಿಕಲಾಪಾ | ಭಗವಾನ್ ಭಲಾ ಕಲ್ಯಾಣದ ಕನ್ನಡ ದೀಪಾ ||ಪಲ್ಲ|| ಧರ್ಮಾವತಾರಿ ನೀನೆ ಭುವನಾದಿ ಮಂಗಲಾ | ನಿರ್ಮೋಹ ಮಾಯಿ ನೀನೆ ಶಿವಭಕ್ತಿ ಶೀತಲಾ | ಶಿವಶಕ್ತಿ ಕಲಾ ಯುಕ್ತನಲಾ ಜಗದನುಕೂಲನಲಾ ||೧|| ಸರ್ವಾತ್ಮ ಸತ್ಯ ನೀನೆ ಪರಿ ಪೂರ್ಣ ಭಾವನಾ | ಹೇಪುಣ್ಯ ವತಿರ್ಥವನೂತ ಮನಿಷ್ಯಾಯ ಜೀವನಾ | ಕನ್ನಡದಿ ವೇದ ನುಡಿದ ದಿವ್ಯವಾಗ್ಮಯಾ ||೨|| ಮಡಿವಾಳ ಮಾಚಿದೇವ ಶ್ರೀ ಸಿದ್ಧರಾಮನಾ | ಉಡುತಡಿಯ ಅಕ್ಕಮಹಾದೇವಿಯ ಪ್ರೇಮ ಜೀವನ | ಹಡಪದಪ್ಪ ಹರಳಯ್ಯಗಳು ಸುಪ್ರಸಾದ ಸೇವನಾ ||೩|| ನವಯುಗ ಧರ್ಮ ಪ್ರವರ್ತಕಾ ಪ್ರಭಾವಮಯಾ | ಭುವಿಯೊಳ್ ಸಮತಾವಿವಾದಿ ಕ್ರಾಂತಿ ಆರಸಿಂಯಾ | ಶಿವತತ್ವದಿ ಜಯವ ಪಡೆದ ಬಸವ ಚಿನ್ಮಾಯಾ ||೪||

೧೧೭

ಪೊರೆಯೈ ಬಸವ ಸುಕುಮಾರಾ ಸುಧೀರಾ ಭಜಕ ಭವದೂರಾ | ಪುರಹರಾ ಭಕ್ತಿ ಸುಖ ಪೂರಾ ಸುಧೀರಾ ಶೈವಮತ ಸಾರಾ ||ಪಲ್ಲ|| ಅನಿ ಮಿಷನೆಂಬ ಭೂವರನ ಘನತರ ತಾಪವನು ಕಂಡು | ಕನಿಕರಪಟ್ಟು ಲಿಂಗ ವನು ಕೊಟ್ಟು ಕರುಣಿಸಿದ ಮಹಿಮನ್ ||೧|| ಪರಶಿವನಾಜ್ಞೆಯನು ಸರಿಸಿ ಬಾಗೇವಾಡಿಯೊಳ್ ಜನಿಸಿ | ಭೂಸುರನ ಕರ್ಮವನು ತ್ಯಜಿಸಿ | ಎರಡನೆ ಶಂಭುವೆಂದಿನಿಸಿ ||೨|| ಸೂಕ್ತಿಯ ಸದನವನು ಬೀರಿ | ಭಕ್ತಿಯ ಮಾರ್ಗ ವನು ತೋರಿ | ಮುಕ್ತಿಯ ಮಾರ್ಗವನು ಸಾರಿ | ಭಕ್ತಿಯ ಪದದಿ ನೀ ಮೆರೆವಾ ||೩||

೧೧೮

ಪತೀತ ಪಾವನ ಬಸವಣ್ಣಾ | ಪಾವನ ಚರಿತನು ಚನ್ನಣ್ಣಾ | ಯತಿ ಕುಲ ಪುಂಗವ ಮಂಗಲಮಯ ಗುರು ಪ್ರಭುದೇವರು ಜಗದಣ್ಣಾ ||ಪಲ್ಲ|| ಪ್ರಮಥರ ಪುಂಗವ ಮಂಚಣ್ಣಾ | ಸಮತಾವಾದಿಯು ಅಪ್ಪಣ್ಣ |

ಕುಮತಿಗಳಿದೆಯುನು ಕ.ಟ್ಟೀ ಹಾಡುವ ನಮಿತ ಪರಾಕ್ರಮ ಬೊಮ್ಮಣ್ಣಾ ||೧|| ದೇವರ ದಾಸಿಮಯ್ಯನವರಣ್ಣಾ | ಸೇವಕ ಜನಸುರ ತರುವಣ್ಣಾ | ಪಾವನಪೆನಿಸುವ ಲಿಂಗ ತತ್ವವ ಸ್ತ್ರೀ ಪುರುಷರಿಗರುಹಿಪರಣ್ಣಾ ||೨|| ಅಂದಿಂದೆನ್ನಲು ಬೇಡಣ್ಣಾ ಸೀ ಇಂದಿದು ಮುಂದಿನ ದಿನವಣ್ಣಾ | ಚಂದ್ರಶೇಖರನ ಸುಂದರ ಭಾಗ್ಯದ ಕಂದನು ಬರುವದು ದಿನವಣ್ಣಾ ||೩||

೧೧೯

ಬಸವಾ ಮುಕ್ತಿದಾತಾ ದ್ವಿತೀಯ ಶಂಭುವೆನೀ ||ಪಲ್ಲ|| ನಿತ್ಯ ನಿನ್ನಯ ನಾಮ ನೆನೆದು ಸತ್ಯತನದಲಿ ಸೇವೆಗೈದು | ಭೃತ್ಯನುತನ ಪಾದವಿಡಿದು ನಿತ್ಯ ನಿನ್ನನು ಭಜಿಪೆವು | ಸತ್ಯ ಸಂಘನುತ ಸಂಗಮೇಶಸುತ ||೧|| ಮಂದಮತಿಯ ಕಂದ ನಾನು ಎಂದು ನಿನ್ನನು ಕಾಂಬೆನು | ಚಂದ ಚಂದದ ಕುಸುಮಗಳನು ತಂದು ನಿಮಗರ್ಪಿಸುವೆನು | ತಂದೆ ವಂದಿಸುವೆ ಸಂಗಮೇಶಸುತ ||೨|| ಯಜ್ಞಯಾಗಾದಿಗಳಲಿ ಅಜ್ಞಮೂಕ ಪ್ರಾಣಿಗಳಲಿ | ಸುಜ್ಞ ಜನಕೆ ಸೇರದೆಂದು ಯಜ್ಞಮಾಡಕೂಡದೆಂದು ! ಆಜ್ಞಾಮಾಡಿದಾತಾ ಸಂಗಮೇಶಸುತ ||೩|| ಸದಹೃದಯ ವಿಧವೆ ಜನರ ಮದುವೆ ಮುದದಿ ಮಾಡಿದ | ಹಾದಿ ಹುಡುಕಿ ಆಬಲೆಯರ ಮಾನ ಕಾಯ್ದು ಮಾನವರ | ಮಾನ ಉಳಿಸಿದಾತಾ ಸಂಗಮೇಶಸುತ ||೪|| ವೀರಶೈವ ಧರ್ಮ ಗುರುವೆ ಕಲ್ಯಾಣಪುರದಿಯಿರುವೆ | ವೀರಭದ್ರನವರವಯಿರುವೆ ಭಜನೆಸಂಗಮೇಶ ಗುರುವೆ | ಗುರುವೆವಂದಿಸುವೆ ಸಂಗಮೇಶಸುತ ||೫||

೧೨೦

ಬಸವಾ ಬಾಬಾ ವಸುಧಿಗೆ ನಿನ್ನಯ | ಜಸವನು ತೋರಲು ಬೇಗನೆ ಬಾ || ರಸಿಕರ ಮನಸಿಗೆ ಕುಶಲವ ಬೀರುತ | ಪೊಸರಾಜ್ಯವ ನೀನಾಳಲು ಬಾ ||೧|| ಮಂತ್ರಿಯ ಕೆಲಸವ ತಂತ್ರದಿ ನಡಿಸುತ ಜಂತ್ರವ ನೀ ತಿರುಗಿಸಲು ಬಾ || ತಂತುವ ತೆಗೆಯುತ ಸ್ವಂತದಿ ನೇದಿಹ ಮಂತ್ರದ ಬಟ್ಟೆಯ ಧರಿಸಲು ಬಾ ||೨|| ಕನ್ನಡ ನುಡಿಯಿದು ಸಣ್ಣಾಗುತ್ತಿದೆ | ಚನ್ನಿಗ ಬಸವನೆ ಪೊರೆಯಲು ಬಾ || ಉನ್ನತ ಜನರಿಗೆ ಕನ್ನಡ ಮಂತ್ರದಿ ನಿನ್ನಯ ವಚನದಿ ಪೇಳಲು ಬಾ ||೩||

೧೨೧

ಬಸವಭೂಮಿ ನಿನ್ನ ಸೇವೆ ಹರುಷದಿಂದ ಮಾಡುವಾ । ಹಸುಳರೆಲ್ಲ ನಿನ್ನ ಚರಣದಲ್ಲಿ ಕೊರಳ ನೀಡುವಾ ।ಪಲ್ಲ। ಕಳೆದು ಹೋದ ಘನತೆಯನ್ನು ಮರಳಿ ಜಗಕೆ ತೋರುವಾ । ಹೊಳೆವ ಬಾಲ ಸೂರ್ಯನಂತೆ ಧರೆಯನೆಲ್ಲ ಬೆಳಗುವಾ ।।೧।। ವೀರಶೈವ ಧರ್ಮ ಕ್ರಾಂತಿಗಾಗಿ ದೇಹ ನೀಡುವಾ । ವೀರ ತರುಣ ವೃದ್ಧರೆಲ್ಲ । ರಣಕೆ ಬೇಗಸಾಗುವ ।।೨।। ಗುರುವಿರಕ್ತರೆಲ್ಲ ಭೇದ ಬುದ್ಧಿಯನ್ನು ತಾಳದೆ । ನಿರುತ ನಿನ್ನ ಸೇವೆಗೈದು । ಶಾಂತಿಗೊಳಿಸ ಬಾರದೆ ।।೩।। ವೀರಶೈವ ಬಂಟರೆಲ್ಲ ಶೂರತನವ ತೋರುತ । ವೀರ ಮರಣ ವನ್ನು ನಾವು ಬೇಗ ಅಪ್ಪಿಕೊಳ್ಳುವಾ ।।೪।। ಮಾನಹೀನರಾಗಿಹೆವು ನಿಮ್ಮನ್ನು ಅರಿಯುವೆ । ಜ್ಞಾನ ತೋರಲೀಗ ಚನ್ನಬಸವ ಜನಿಸಬಾರದೆ ।।೫।।

೧೨೨

ದಯಮಾಡೊ ದುರದುಂಡಿ ಸಾಂಬನೀನೆ । ದಯಮಾಡೊ ದುರ ದುಂಡಿ । ದಯಮಾಡೊ ದುರದುಂಡಿ ಹರಹರ ದಯಮಾಡೊ ದುರ ದುಂಡಿ ।।ಪಲ್ಲ।। ಕೊಡುವ ಕಾಲಕೆ ಕರುಣದಿಂದಲಿ ನೋಡುವ । ಬೇಡಿ ಕೊಂಬೆನು ಕೃಪೆಮಾಡೊ ಮಹದೇವಾ ।।೧।। ಮಡುವಿನೊಳಗೆ ಬಿದ್ದು ಮುಳು ಮುಳುಗೇಳುತ । ಕೊಡು ಆಸೆಯನ್ನು ಗುಣದೊಡೆಯ ಶಂಕರನೆ ।।೨।। ಸಕ ಲನೇ ಐಶ್ವರ್ಯ ಕೊಡುವ ಸಮರ್ಥನೆ । ಗೋಕಾವಿವೀರಧರದಾತನೆ ತವೆ।।೩।।

೧೨೩

ಹಾಸಗಲ್ಲ ಶ್ರೀ ಕುಮಾರದೇವಾ ಚಿರ ಚಿದ ಭವಪರಮ ವಿತರ ಮಾರ್ಗನಯ ಪ್ರಮಥರ ।।ಪಲ್ಲ।। ಮದನ ಮದವಹರದಿಂ ಹಾರಿಪವಿಧಿ ಪೂರ । ಸದಮಲ ಸುಖವಿಕಾಸ ಗತಿಹಿತದ ಗುರುವೇ ।।೧।। ಭವದ ಬೇರ ನಗಿದು ಕೇಳುವ ಶಿವಯೋಗ ಸೇರಿಸುಖವ । ನಿರ್ಮಿಸಿದನು ಪರಮ ಶರಣ ಧಾಮ ।।೨।। ಆರು ಮೂರನೊರಿದು ಮೀರಿದ ಮನಸೇರಿ ಅನುದಿನದ ಸುಖ ಯೋಗಿ । ವರಘನಾವಿರಾಗಿ ।।೩।।

೧೨೪

ಬಾರೈ ಗಾನಮಯ ಮೂರ್ತಿ । ತೋರೈ ಮಂಗಲದ ಕೀರ್ತಿ । ನೀನೆ ಗತಿ ದೀನೋನ್ನತಿ ಗೈದ ವಿಮಲಸುಕೃತಿ ।।ಪಲ್ಲ।। ಪಂಚಾಕ್ಷರ ಮಹಾಮಂತ್ರದ

ನಾವಮಾ । ಪಂಚಮುಖ ಮನೋ ಜಪಕ್ರಮ । ಪಂಚವದನ ಧರ್ಮ ಪ್ರೇಮ ||೧|| ಭೂತಲದೊಳು ಸಂಗೀತ । ನೀತಿ ಪ್ರಸಾದ ಗೊಳಿಸುತ ಶಾಂತಾತ್ಮನಾಗಿ ಚರಿಸುವ । ಅಂಗಹೀನರ ಸಲುಹಲು ಬಾ ||೨|| ಗುರು ಕುಮಾರ ಸ್ವಾಮಿಗೆ ತನುವ ಕರದಲಿಂಗಕೆಸುಮನವ ನರಸಮಾಜಕೆ ಪ್ರಾಣಧನವ । ಅರ್ಪಿಸಿದ ಗಾಯನಸುಧಾರ್ಣವ ||೩||

೧೨೫

ಭೋಧವ ಕೊಡುದೇವಾ ಮನಕೆ । ಶಿವಯೋಗದ ಸುಸ್ವಾದವ ತಿಳಿವಾ ||ಪಲ್ಲ|| ಹೊನ್ನಿನ ಹೆಣ್ಣಿನ ಭ್ರಾಂತಿಯ ದೂಡಿ । ಜಂಗಮಾರ್ಯನ ಅಂಗಸೇವಿಸುವಾ||೧|| ಜ್ಞಾನಬಲಿತು ಭವ ಬಾಧೆಯು ನೀಗಿ । ಬೇಗಮೋಕ್ಷದ ಮಾರ್ಗವ ಪಿಡಿವಾ ||೨|| ವರಮಠದೀಶನೆ ತೋಂಟದಾರ್ಯ । ಬೇಗ ಅಂಗವು ಲಿಂಗದಿ ಬೆರೆವಾ ||೩||

೧೨೬

ಎಲ್ಲಾ ರೂಪವು ತಾನಂತೆ ಶಿವ । ಎಲ್ಲೆಲ್ಲಿಯು ತುಂಬಿಹನಂತೆ । ಅಲ್ಲಲ್ಲರಸುತ ಗುಡಿಗಳ ತಿರುಗುವ । ಕಳ್ಳಜನರಿಗೆ ಕಲ್ಲಂತೆ ಶಿವ ||ಪಲ್ಲ|| ಕಣ್ಣೆಂಬುದು ತನಗಿಲ್ಲಂತೆ ಶಿವ । ಕಣ್ಣಿಗೆ ಕಾಣಿಸದಿಹನಂತೆ। ಕಣ್ಣು ತೆರೆದು ತನ್ನರಸುವ ಜನರಿಗೆ ಬಣ್ಣ ಬಣ್ಣವಾಗಿಹನಂತೆ ||೧|| ದೃಶ್ಯಾದೃಶ್ಯವು ತಾನಂತೆ ಶಿವ । ದೃಶ್ಯಾದ್ವೈತಗಳೆರಡಂತೆ । ದೃಶ್ಯಾದ್ವೈತಗಳೆರಡರ ನಡುವೆ ಶಾಶ್ವತ ರೂಪವು ತಾನಂತೆಶಿವ ||೨|| ಶಂಕರನಾದವು ತಾನಂತೆಶಿವ । ಕಿಂಕರರೊಳು ಸಾರಿಹನಂತೆ । ಬಿಂಕನು ಮುರಿಸುವ ಕಿಂಕರಿಗೆ ಗುರು ಮುರುಘೇಶ ರೂಪವು ತಾನಂತೆ ಶಿವ ||೩||

೧೨೭

ನಿಜವೆಂದು ತಿಳದು ಪೂಜಿಸು ಗುರುಚರಣಾ । ತ್ಯಜಿಸೋ ನೀಮಾಯ ಪ್ರಪಂಚದ ಸ್ಮರಣೆ ||ಪಲ್ಲ|| ವನಿತೆಯರ ಮೋಹವೆಂಬದು ದೊಡ್ಡ ಶರಧಿ । ಅನುಕೂಲದಿಂದಲಿ ದಾಟೋ ನೀ ಭರದಿ ||೧|| ನಿತ್ಯವಲ್ಲದ ಕಾಯ ನೆಚ್ಚಿರ ಬೇಡಾ । ವ್ಯರ್ಥ ಮೋಹಕೆ ಸಿಲುಕಿ ಕೆಡದಿರು ಮೂಢಾ ||೨|| ಎಂದಿಗು ಮರಣ ತಪ್ಪದು ಕೇಳ್ ಮರುಳೇ । ಚಂದ್ರಶೇಖರನ ಪೂಜಿಸು ಹಗಲಿರುಳೆ ||೩||

೧೨೮

ಸೃಷ್ಟಿ ಸದ್ಗುರುವಿನದಯ ದಯದಿಂದೆಲ್ಲಾನು ಮೈಮರೆತೆನೆ ಇದು ಏನ ಕಾರಣ ಮೈಮರೆತು ಮತ್ತನಾದೆನೆ । ಕೈ ತಲೆಮೇಲೆ ಇಡಲು ವೈರಾಗ್ಯವ ಪಡೆದೆನೆ । ಘೃಘ್ರಘ್ಯ ಅಂತಾ ಕಾಣಿಸಿ ತನ್ನಂತೆ ತಾವಮಾಡಿದನೆ ಹರ ॥ಪಲ್ಲ॥ ನಾನು ನೀನೆಂಬುದು ಎರಡು ತಾನೆ ತಾನಾದನೆ । ಮಾನ ಅಪಮಾನವೆರಡು ತಾನೆತಾನಾದನೆ ॥ ಜ್ಞಾನ ಮಾರ್ಗವ ತೋರಿ ಧ್ಯಾನ ಹೇಳಿದನೆ ಬಾನ ತೋರಿಸಿ ವಿನೋದ ಮಾಡಿದನೆ ॥೧॥ ನಾದ ಶಬ್ದದೊಳ್ ಮನಲುಬ್ಧ ಮಾಡಿದನೆ । ವಾದಿ ದುರ್ವಾದಿ ಕೂಡ ಕಾಟ ಗೆಲಿಸಿದನೆ । ಭೇದಾಭೇದವಕ್ಕರಿಯದ ಬುದ್ಧಿ ತೋರಿದನೆ ॥ ಹದ ಹುಲಿಯಂಥ ಮನಸ್ಸು ಮಾಡಿದನೆ ॥೨॥ ಭೃಕುಟಿ ಮಧ್ಯದಲಿ ವಸ್ತು ಪ್ರಕಟ ಮಾಡಿದನೆ । ನಾಸಿಕಾಗ್ರದ ಕೊನೆಯ ಮೇಲೆ ಧ್ಯಾನುಪ್ರಕಾಶ ತೋರಿದನೆ । ಈಶನುದತ್ತ ಮಹಾದಿಗಂಬರ ಘೋಷದೊಳಗೆ ಮನವಿರಿಸಿದನೆ ॥೩॥

೧೨೯

ಆದಿವೃಷಭನೆ ಅಸುರ ವಿನಾಶಕ ಬಾಗುವೆ ತವ ಪದಕೆ । ಪ್ರಭುವರ । ಬಾಗುವೆ ತವಪದಕೆ ॥ಪ॥ ಪೂರ್ವದಿ ಮುನಿಪನಿಗೆ ನಂದೀರೂಪದಿ ಜಡೆಯೊಳು ಜನಿಸಿದಿ ನೀ ಪ್ರಭುವರ । ಪಾರ್ವತೀಶನ ಪುರದೊಳು ಸೋಲಿಸಿ ವರವನು ನೀಡಿದಿ ನೀ ॥೧॥ ಹರನ ನೇಮದಿ ಬಸವನಾಮದಿ ವಸುಧೆಯೊಳವತರಿಸಿ । ವರ ವೀರಶೈವಾಚಾರ ಧರ್ಮವ ಧರೆಯೊಳು ನೆಲಿಸಿದಿ ನೀ ॥೨॥ ಮಾದಲಾಂಬಿಕೆ ಮಾತೆಯು ನಿನ್ನನು ಅನುದಿನ ಅರ್ಚಿಸಲು । ಮೋದದಿಂದಲಿ ಬಾಲಲೀಲೆಯ ಸಲಿಸಿದಿ ಭಕುತರಿಗೆ ॥೩॥ ನೃಪನಾ ಸಭೆಯೊಳು ಲಿಪಿಯುದು ಬೀಳಲು ತ್ವರಿತದಿ ಓದಿದಿನೀ । ಅಪಾರ ಮಹಿಮನೆ ಆದಿ ವಸ್ತುವೆ ಲೀಲೆಯ ತೋರಿಸಿದಿ ॥೪॥ ಕಾಲು ಜಾರಿದ ಬಾಲೆಯು ನಿನ್ನಯ ನಾಮವನುಚ್ಚರಿಸೆ । ಲೀಲೆಯಿಂದಲಿ ಹಸ್ತವ ನೀಡುತ ರಕ್ಷಿಸಿದೀ ಅವಳ ॥೫॥ ಜಂಗಮನೋರ್ವನು ನಿನ್ನಯ ಪತ್ನಿಯ ವಸ್ತ್ರವ ಬೇಡಿದೊಡೆ । ಅಂಗನೆಯು ಅಕ್ಷಯ ವಸ್ತ್ರವ ದಾನವ ಮಾಡಿದಿ ನೀ ॥೬॥ ಮೂರು ಲೋಕವ ಧರ್ಮರೂಪದಿ ಬಿಡದಲೆ ತುಂಬಿರುವಿ । ಮಾರಮರ್ದನ ಶಂಭುಹೃದಯದಿ ನಿರುತವು ವಾಸಿಸುವಿ ॥೭॥ ಅಸಮ ಚರಿತನೆ ಅನುಪಮ ಮಹಿಮನೆ ಅದ್ಭುತ ಕೃತಿಲೀಲಾ । ವಸುಧಾ ತಲದೊಳು ಮರೆವಾಡ ಗ್ರಾಮದಿ ನಿರುತವು ನೆಲೆಸಿರುವಿ ॥೮॥

೧೩೦

ಶಿವ ನಿನ್ನ ಪಾದವ ನಂಬಿದೆ । ಎನ್ನ ಕಾಯುವ ಭಾರವು ನಿನ್ನದು ತಂದೆ ॥ಪಲ್ಲ॥ ನಾನೆಂಬೊ ಮಮಕಾರದಿಂದೆ । ಶಿವನಾನೆಂಬೊ ಮಮಕಾರದಿಂದೆ । ನಾನಾ ಜನ್ಮಗಳೆಲ್ಲ ತಿರುಗಿ ನಾಬಂದೆ । ಎನಗಿನ್ನು ದಾರಿಯು ತೋರದು ಮುಂದೆ । ದೀನ ರಕ್ಷಕ ಎನ್ನ ಕರಿಯೈಯ್ಯ ಮುಂದೆ ॥೧॥ ತನುಮನಧನ ನಿನ್ನದಯ್ಯ । ಶಿವ ತನುಮನ ನಿನ್ನದಯ್ಯ । ನಿನ್ನ ದಾಸನ ಸೇವೆಯು ಎನ್ನದು ನೋಡಯ್ಯ । ಅನುದಿನ ತವನಾಮ ನೆನೆಯುವೆನಯ್ಯ । ಘನಮೋಕ್ಷ ಪದವಿಯ ನಾನೊಲ್ಲೆನಯ್ಯ ॥೨॥ ಭಕುತರ ಬಂಟ ನೀನಂತೆ । ಶಿವ ಭಕುತರ ಬಂಟ ನೀನಂತೆ । ಮುನ್ನ ಬಾಣನ ಬಾಗಿಲ ಕಾಯ್ದವನಂತೆ । ಭಾಳಲೋಚನ ನಿನ್ನ ಭಜಿಸಿದ ಉಪಮನ್ಯು ಬಾಲಭಾವಕೆ ಮೆಚ್ಚಿ ಕ್ಷೀರವಾರಿಧಿಯಿತ್ತೆ ॥೩॥ ಶಿರದೊಳು ಗಂಗೆಯ ಧರಿಸಿ । ಶಿವ ಶಿರದೊಳು ಗಂಗೆಯ ಧರಿಸಿ । ಗಿರಿಜಾತೆ ವಾಮಾಂಕ ಭಾಗದೊಳಿರಿಸಿ । ಪೊರೆಯುವ ಪರಮೇಶ ಮರಣವಿನಾಶಾ । ವರಯಾಳನಳನಿಧಿ ವಾಸರಾಮೇಶಾ ॥೪॥

೧೩೧

ಮಂಗಲಕಾರಿ ದುರಿತವಿಹಾರಿ । ನಿಗಮಾಗಮನುತ ಪರತರ ಸುಚರಿತ ॥ಪಲ್ಲ॥ ವೀರಶೈವಮತ ಜೀರ್ಣೋದ್ಧಾರಿ ಧರ್ಮಶಾಸ್ತ್ರಸಮುದ್ಧಾರಿ । ಚಿರಮಾರಾರಿ ಭೂತನಿಸ್ಸಾರಿ । ಮತಹಿತ ಕೃತಪಿತ ಪರತರ ಸುಚರಿತ ॥೧॥ ಶ್ರೀ ಶಿವಯೋಗ ಸುಮಂದಿರ ಸ್ಥಾಪಿತ । ವಿದ್ಯಾರ್ಥ್ಯಯನ ಜನತಾದಿ ಪ್ರೀತಾ । ಬೋಧವಿಖ್ಯಾತಾ ಭೋವಿಖ್ಯಾತಾ । ಮತಹಿತ ಕೃತಪಿತ ಪರತರ ಸುಚರಿತ ॥೨॥ ಕ್ರೂರ ಮನಸಿಜ ಸಾಯಕ ನಾಶಕ । ಶಿವಸುಖದಾಯಕ ಪಾವನ ರೂಪಕ । ವರಸುಕುಮಾರಾ ಭವಭಯದೂರ । ಮತಹಿತಕೃತಪಿತ ಪರತರ ಸುಚರಿತ ॥೩॥

೧೩೨

ಜಯಶಾಂಭವ ಯೋಗಸಮಾಧಿಕಲಾಗುರು ತೋಂಟದಾರ್ಯ । ಜಯಗುರು ತೋಂಟದಾರ್ಯಾ ॥ಪಲ್ಲ॥ ದೇವನಿರಂಜನ ಭಾವಜ ಭಂಜನ ಭಾವಿತ ಕಾಮಾಂಜನ ಹೃದಯ । ಭಾವಸುಭಾಜನ ಭಾವವಿನೋದ ॥೧॥ [illegible] ನೋಟಗರ ಶಸ ಸಚರಿತ ನಿರಸ್ತಭಯ । ಪ್ರಸ್ತುತ

ಜನವಿಧ್ವಸ್ಥವುಹಾಭಯ ||೨|| ಬಾಧವುುವುಪ್ರಭು ಗೂಢಸವಾಧಿಗ | ಬೇಡಿದಪದಯಡೆಯಾಡುತಲೆ | ಯೋಗಿ ಮಣಿ ಶಿವಯೋಗಸುವುಂದಿರ||೩||

೧೩೩

ಜಯುವುಂಗಲ ವುುರುಘೇಶಾ | ಜಯುವುಂಗಲ ಪರವೇಶಾ | ಜಯ ಜಯ ಸದ್ಗುಣಕೋಶಾ ||ಪಲ್ಲ|| ದುಷ್ಟನಿವಾರಣದೇವಾ | ಶಿಷ್ಟಸುಪೋಷಣ ಲೋಕಾ | ಇಷ್ಟವರದ ಚಿದ್ರೂಪಾ ||೧|| ನಿರುಪಮ ನಿರ್ಗುಣದೇವಾ | ನಿರಮುಯ ನಿರಹಂಕಾರಾ ! ಪರತರ ಪಾವನರೂಪಾ ||೨|| ಕ್ಲೇಶವಿರಹಿತ ಸುಗಾತ್ರಾ | ಕೇಶವನವಿುತಸುಚರಣಾ | ಭಾಸುರಥಣಿಪುರವಾಸಾ ||೩||

೧೩೪

ಪರಮ ಶ್ರೀ ಶಿವಯೋಗೀಶ್ವರ ಯೋಗಾನಂದ ಲೀಲಾ ಶಿವಯೋಗಾನಂದ ಲೀಲಾ ||ಪಲ್ಲ|| ಮಂಗಲಂತೇ ಚರ ಲಿಂಗಪುಂಗವ ವೂರ | ಭಂಗ ಶಿವಲಿಂಗಾ ಸಂಗಲಿಂಗಾ ಜ್ಞಾನಪೂರ್ಣ ||೧|| ನಿರಘನಿರಾಶಾ ಹರ ಮುನಿತೋಷಾ | ಮುುರುಘಾವುಹಂತ ಕೃತ ಚಿತ್ತ ಪ್ರಾಣಿಧಾನಾ ||೨|| ಶ್ರೀ ಕರಥಣಿಪುರ ಲೋಕ ಕೃಪಾಕರ | ಶ್ರೀಕಂಠಾ ವಿಬುಧನುತಾ ನಿತ್ಯ ಶಿವ ಧ್ಯಾನಾ ||೩||

೧೩೫

ಕರ್ಪುರಾರತಿ ಬೆಳಗಿರೆ | ಕಾರುಣ್ಯವ್ಮೃಗಕರದೇವಗೆ ||ಪಲ್ಲ|| ನೀಲ ಕಂಧರನಿಗಮುಗೋಚರ ಬಾಲಚಂದ್ರಾಭರಣಗೆ | ಬಾಲಗೊಲಿದನು ಹಾಲಸ ವಿದನು | ಲೋಲ ಶ್ರೀಗುರುರಾಯುಗೆ ||೧|| ವಾರಿಜೋದ್ಭವ ಶಿರವಹರಿದಿಹ ಮಾರಹರಮುಹಾದೇವಗೆ | ಘೋರ ದುರಿತವ ದೂರಮಾಡುವ ಶೂರ ಷಣ್ಮುಖನಯ್ಯಗೆ ||೨|| ಶರಣು ಜನರಿಗೆ ವರವನಿತ್ತಿಹ ಪರಮ ಪಾರ್ವತಿ ಯರಸಗೆ | ಧರೆಯೊಳಧಿಕವಾದ ಅಥಣಿಯು ಪುರದ ಶ್ರೀ ಶಿವಯೋಗಿಗೆ ||೩||

೧೩೬

ಕೊಡು ಮಂಗಲವನು ಬಸವರಾಜಾ ಬಿಡದೆ ಮಾಡುವೆ ನಿಮ್ಮಯ ಪೂಜಾ ||ಪಲ್ಲ|| ವಿಶ್ವದೊಳುದಯಿಸಿ ವೀರಶೈವ ಮತವ ವಿಸ್ತಾರ ಮಾಡಿದ ವಿಚಾರಶೀಲ ||೧|| ಜಂಗಮ ಗುರುಲಿಂಗ ಒಂದೇ ಎಂದರಿಯುತ | ಪಿಂಗದೆ

ಜಯಿಸಿದ ತುಂಗ ಮಹಿಮನೆ ||೨|| ಕೂಡಲಸಂಗಮನಾಥನಲ್ಲಿಗೆ ಪೋಗಿ | ಕೂಡಿ ಬೇರೆನಿಸದಾ ಕುಶಲ ಬಸವನೆ ||೩||

೧೩೭

ಜಯಮಂಗಲಮಯ ಶಿವಲಿಂಗಾ ||ಪಲ್ಲ|| ಗುರುಕರ ಯೋಗಾ ಗುರು ರೂಪಾಂಚಿತ | ಪರಶಿವಭಕ್ತಸುದೇಹಕೆ ಇಷ್ಟಾಲಿಂಗ ||೧|| ದಿನಕರಹಿಮಕರ ಸೂನ್ಯ ಸಂಗತ ಜಾತ | ಮನೋಂಭುಜವಾಸ ಸಕಲ ನಿಷ್ಕಲಚಿಲ್ಲಿಂಗಾ||೨|| ಭಾವಗವ್ಯಾರೂಪಾ ದೇವಗೆ ಹರಪ್ರಭೋ ಪಾವನಶಿವಯೋಗ ಮಂದಿರ ಭಾವಲಿಂಗಾ ||೩||

೧೩೮

ಜಯ ಮಂಗಲಂ ನಿತ್ಯ ಶುಭ ಮಂಗಲಂ | ಜಯ ಜಯತು ಶಿಶು ಮಹಂತ ಲಿಂಗೇಶಗೆ ||ಪಲ್ಲ|| ಧರಿಯ ಭಕ್ತರು ಮಹೇಶ್ವರರುಗಳ ಪುತ್ರನಿಗೆ | ಶರಣು ಬಸವಾದಿ ಪ್ರಮಥರ ಕಂದಗೆ || ಪರಶಿವನು ಪಾರ್ವತಿಯ ತೊಡೆಯ ಮೇಲಾಡುತಲಿ | ಹರುಷಾಬ್ಧಿ ಹೆಚ್ಚಿಸುವ ಗುರುಪುತ್ರಗೆ ||೧|| ಆಕಾಶವನು ಮೋಡ ಮುಸುಕಿದರೆ ಕೆಡದಂತೆ | ಏಕಾಗ್ರ ಚಿತ್ತದಲಿ ಮನವ ನಿಲಿಸಿ || ಬೇಕುಬೇಡೆಂಬೆರಡು ಭವಬೀಜಗಳ ಹುರಿದು | ಲೋಕದೊಳಗಿದ್ದು ಇಲ್ಲದ ಮಹಿಮಗೆ ||೨|| ಹೇಗೆ ಮಾಳ್ಪರು ಹಾಗೆ ಸಕಲ ಉಪಚಾರಗಳ | ಮಂಗಲದ ಶಿಶುವಾಗಿ ಕೈಕೊಳುತಲಿ || ಭಂಗಾರ ಕಬ್ಬಿಣವು ಹಿರಿಕಿರಿದು ಸಮಗಂದ | ಲಿಂಗಮಹಂತೇಶಮಹಾ ಜಗತ್ಪುತ್ರಗೆ ||೩||

೧೩೯

ಮಂಗಲಮಯ ಮಹಂತ ಲಿಂಗದೇಶಿಕನೇ ಜಯ ಜಯ ಹರ ಮಂಗಲಂ ||ಪಲ್ಲ|| ಜೀವ ಪರಮೈಕ್ಯ ಭಾವವ ತೋರಿದ | ಕೋವಿದ ಮದ್ಗುರು ದೇವ ಸುಂದರನೇ ||೧|| ಲಿಂಗವ ಪೂಜಿಸಿ ಲಿಂಗನೆಯಾಗುವ | ಇಂಗಿತವರುಪಿದ ಕಂಗಳಾಲಯನೆ ||೨|| ನಾಮ ರೂಪುಕ್ರಿಯೆ ಸೀಮೆಯ ಮೀರಿದ | ಸ್ವಾಮಿ ಮಹಂತೇಶ ಮತ್ ಪ್ರೇಮಿ ದಯಾಳೊ ||೩||

೧೪೦

ಮಂಗಳಾರುತಿಯೆತ್ತಿರೇ ಸರ್ವಾಂಗ ಲಿಂಗಮಯಶಿವಯೋಗಿಗೇ| ಗಂಗೆ ಸರಸ್ವತಿ ಯಮುನೆ ನದಿ ಮಂತ್ರಮಯವಾಗಿ ರಂಜಿಸುವ ಪರಮಾತ್ಮಗೆ

ಹರಗೆ ||ಪಲ್ಲ|| ಶಿವಯೋಗ ನಿದ್ರೆಯೊಳಗೆ ತಾನಿರ್ದು ಭವಜಾಡ್ಯ ಜಯಸಿರ್ಪಗೆ | ಭುವಿಜನರ ಸಂಸಾರ ಗೋಷ್ಠಿಗಳ ನತಿಗಳೆದ ಸವೆಯದಾನಂದ ಪರಗೆ ಹರಗೆ ||೧|| ವೇದಶಾಸ್ತ್ರಕೆ ನಿಲುಕದಾ ಮಹಮಂತ್ರ ಬೋಧೆ ನೆಲೆಗೊಂಡಾತಗೆ | ಮೇದಿನಿಗೆ ಚಿದ್ವಿಲಾಸವತಾರ ಮಾಡಿದನಾದಿಪರಶಿವಮೂರ್ತಿಗೇ ಹರಗೆ ||೨|| ಆನೆನುಂಗಿದ ಬೆಳವಲಾ ಫಲದಂತೆ ತಾನು ತಾನಾಗಿರುವಗೆ | ಮೌನಿ ನೀ ಾಲಂಬ ಚದುರಮಹಂತೇಶ್ವರಗೆ ಜ್ಞಾನಶಕ್ತಿಯರುಪಿೀವು ಹರಗೆ ||೩||

೧೪೧

ಮಂಗಲಂ ಸದಾ ತುಂಗ ಮುರುಘೇಂದ್ರ ಮಂಗಲಂ ಸದಾ ||ಪಲ್ಲ|| ಯತಿಕುಲಾಗ್ರಗಣ್ಯ ನುತಿವರೇಣ್ಯ ಪುಣ್ಯ | ಸತತಲೋಕ ಪೂಜ್ಯ ವಿತತಕೀರ್ತಿಖ್ಯಾತ ||೧|| ಸಾರಕಂಜರೂಪ ಮಾರಗರ್ವ ಲೋಪ ! ಧೀರಭಕ್ತ ಪೋಷ ಸಾರಮುಕ್ತಿ ಕೋಶಾ ||೨|| ಕರುಣಾಲವಾಲ ಚರಣವಿಶಾಲ | ಮರಣವಿದೂರ ಶರಣವಿಹಾರ ||೩||

೧೪೨

ಜಯಲಿಂಗಾ ಜಯಲಿಂಗಾ | ಜಯಮಂಗಲ ಚಿಲ್ಲಿಂಗಾ | ಜಯಪರತರ ಶಿವಲಿಂಗಾ ||ಪಲ್ಲ|| ಕರದೀ ಪಾಲಿಪ ಲಿಂಗಾ| ವರಬಿಂದು ಘೃಣಿಲಿಂಗ| ಸುರಚಿರಶಿವ ರುಚಿಲಿಂಗಾ ||೧|| ಭೂವನ-ಮಾಯ ಪತಿಲಿಂಗಾ | ಭಾವಕಮುದ್ಗುರುಲಿಂಗಾ | ಭಾವಕ ನಭ ಮಹಲಿಂಗಾ ||೨|| ಶಿವಯೋಗಿಷ್ಟದಲಿಂಗಾ | ಶಿವಹೃದಯಾ ಪ್ರಭುಲಿಂಗಾ | ಶಿವಯೋಗಾಲಯಲಿಂಗಾ ||೩||

೧೪೩

ಶಿವ ಶಿವ ಶಿವ ಶಿವ ಮಂಗಲಂ ದೇಹಿ | ಭವಹರ ಸ್ಮರಹರ ಪುರಹರ ಪಾಹಿ ||ಪಲ್ಲ|| ಭವ ಭಯದೊಳು ಎನ್ನ ಬರಿಸಿದಿ ಯಾಕೋ | ಭವಹರ ಸಾಕಿನ್ನು ದಯಮಾಡಬೇಕೋ ||೧|| ಕಷ್ಟದೇಹವ ನೆಚ್ಚಿ ಹುಟ್ಟಿತು ಜೀವಾ| ಅಷ್ಟಮದವ ನೆಚ್ಚಿ ಕೆಟ್ಟೆನೊ ದೇವಾ ||೨|| ಮಾನಪಮಾನಕೆ ನೀನೆ ದಯಾಳೋ | ದಯಮಾಡೊ ಗುರುಸಿದ್ಧ ನೀನೆ ಕೃಪಾಳೊ ||೩||

೧೪೪

ಅವತಾರ ಪ್ರಭುವೆಂದೆನಿಸಿದ ಬಸವಗೆ ಎತ್ತುವೆನಾರತಿಯಾ | ದೇವಾ ಬೆಳಗುವೆನಾರತಿಯಾ ||ಪಲ್ಲ|| ಬಾಗೆವಾಡಿಯೊಳು ಬೇಗನೆ ಜನಿಸಿ ಆಗಮ

ಬೋಧಿಸಿದಿ । ಬಸವಾ ಆಗಮ ಬೋಧಿಸಿದಿ ॥ ಯೋಗಾನಂದ ಶಿವಯೋಗ ಮಾರ್ಗದೊಳು ರಾಗವ ತೋರಿಸಿದಿ । ಬಸವಾ ರಾಗವ ತೋರಿಸಿದಿ ॥೧॥ ಭಕ್ತಿಭಾವಗಣ ಯುಕ್ತಿ ಕಲ್ಯಾಣದಿ ಭಕ್ತರ ಬೋಧಿಸಿದಿ । ಬಸವಾ ಭಕ್ತರ ಬೋಧಿಸಿದಿ ॥ ಭಕ್ತಾನಂದ ಶಿವ ಭಕ್ತರ ಮಾಯೆಯೊಳ್ ಮುಕ್ತಿಯಂ ತಿಳಿಸಿದಿ । ಬಸವಾ ಮುಕ್ತಿಯಂ ತಿಳಿಸಿದಿ ॥೨॥ ಅಂಗಲಿಂಗದೊಳು ಮೆರೆಯುವ ಕಪ್ಪಡಿ ಸಂಗಮನೆನಿಸಿದಿ । ಬಸವಾ ಸಂಗಮನೆನಿಸಿದಿ ॥ ಲಿಂಗಾನಂದಶಿವ ಜಂಗಮಯುತಪದ ಪುಂಗವನೆನಿಸಿದಿ । ಬಸವಾ ಪುಂಗವನೆನಿಸಿದಿ ॥೩॥

೧೪೫

ಜ್ಞಾನಪೂರ್ಣಂ ಜಗಜ್ಯೋತಿ ನಿರ್ಮಲವಾದ ಮನವೇ ಕರ್ಪುರ ದಾರುತಿ ॥ಪಲ್ಲ॥ ಅನುದಿನ ಗುರುವಿನ ಅನುರಾಗ ಭಕ್ತಿಯುಲಿ । ಜನನ ಮರಣ ರಹಿತ ಜಂಗಮಗೆ ಬೆಳಗಿರಿ ॥೧॥ ನಾನೀನೆಂಬುದ ಬೇಡಿರಿ ನರಕವ ಪ್ರಾಪ್ತಿ ಜ್ಞಾನಿಗಳೊಡನಾಡಿರಿ । ಹೀನಾಮಿಷಯ ಜನ್ಮ ಹಿಂದುಳಿಸಿ ಲಿಂಗಕ್ಕೆ । ದೇವನೆ ಗತಿ ಎಂದು ಮನವೆತ್ತಿ ಬೆಳಗಿರಿ ॥೨॥ ಅಷ್ಟವರ್ಣದ ಸ್ಥೂಲವು ಮಾನವ ಜನ್ಮ ಹುಟ್ಟಿ ಬರುವದು ದುರ್ಲಭವು । ಕೊಟ್ಟಾನು ಗುರು ಎಮಗೆ ಮಾಡಿದ ಫಲದಿಂದ । ಹುಟ್ಟಿದ ಮಗನ್ಹೆಸರು ಶಿವನೆಂದು ಕರೆಯಿರಿ ॥೩॥

೧೪೬

ಶಿವಮಂಗಲವನು ಕೊಡುಬೇಗಾ । ಭವದುಃಖದಿ ಬಳಲುವೆವೀಗ ॥ ಭುವಿಗವತರಿಸಿದ ಕಾರಣವಾ। ಜವದೊಳು ಮೆರೆಯುತ ಗುರುದೇವ ।ಪಲ್ಲ। ಮನುಜ ಜನ್ಮವನು ತೊಟ್ಟೆಹೆವು ಘನಮಹಿಮರ ಪಥ ಬಿಟ್ಟಿಹೆವು ॥ ಮನದಿ ಹೀನ ಗುಣ ತೊಡರಿಹೆವು । ಮುನಿವಂದನೆ ನವಿಸುತ್ತಿಹೆವು ॥೧॥ ಹುಟ್ಟಿ ಹುಟ್ಟಿ ಸಾಯ್ವುದ ನೋಡಿ । ಕಷ್ಟತರದಿ ಬಹು ಚರಿಸಾಡಿ ॥ ದುಷ್ಟರೆನಿಸಿ ಕೊಂಬುದ ನೋಡಿ । ಶಿಷ್ಟನೆ ನೀನತಿ ದಯಮಾಡಿ॥೨॥ ಇದ್ದ ಗುಣಗಳೆಲ್ಲವ ಮರೆಸಿ । ಶುದ್ಧ ಮನದಿ ಮನವಂದಿರಸಿ ॥ ಸಿದ್ಧರಾಮಗುರು ದಯವೆರಸಿ । ತಿದ್ದುವೆ ನೀನತಿ ಮುದವೆರಸಿ ॥೩॥

೧೪೭

ಹರನಾಮವನು ಬಿಡದೆ ಜಪಿಸಿಬಲ್ಲವರುಭವ। ಮರಣಮಾಯಾಕರ್ಮ ಮಲಪಾಶಬಂಧಬಹು। ದುರಿತಸಂಸಾರ ಸಂತಾಪಸಂಚಯನಳಿದು ವರಭೋಗ

ಮೋಕ್ಷವಹುದು|ಪ|ಶಿವ ಮಹಾದೇವ ಶಂಕರ ಶರ್ವ ಪಾರ್ವತೀ|ಧವ ನಂದಿ ವಾಹ ದೇವೇಶಾನುದಕ್ಷವಾ । ಸವನತಪದಾಂಭೋಜನಗಚಾಪ ನಿರ್ಮಲ ನಿರಾತಂಕ ನೀಲಕಂಠ ॥ ಭುವನೇಶ ವಿಜಯ ಮೇವಾಂಗ ವೈಶ್ರವಣಸಖ । ಪವಮಾನ ಪುಚವು ಖ ಪಶುಪತಿ ಸಹಸ್ರಾಕ್ಷ । ಭವ ಭರ್ಗ ಭಸಿತಾಂಗ ಫಾಳಲೋಚನ ಮೇರುಶಾರ್ಮುಕ ಕಪರ್ದಿಯೆಂದು ॥೧॥ ಸೋಮ ಶಾಂತಾ ಭಯ ವಿರೂಪಾಕ್ಷ ವಿಶ್ವಾಭ । ರಾಮ ಗಂಭೀರ ಕಾಲಾರಿ ಕೂಟಸ್ಥ ವಿಭು । ವಾಮ ದೇವಾಘೋರ ಪಂಚಾಕ್ಷರೋಂಕಾರ ತತ್ಪುರ ಷ ರ ಗ್ರ ಭರ್ಗ॥ ಭೀಮ ಸದ್ಯೋಜಾತ ವೃಡಮಹಾಕಾಲಜಿತ ಕಾಮಮೃತ್ಯುಂಜಯ ಪುರಾತನಪರಾ ತ್ಪರನಿ। ರಾಮಯಾನಂತತೇಜೋರಾಶಿಸರ್ವಜ್ಞ ಶಾಶ್ವತಕಪಾಲಿಯೆಂದು॥೨॥ ಶೂಲಿ ಸುಜನೈಕಬಾಂಧವ ಸದಾಶಿವ ಚಂದ್ರ । ಮೌಳಿ ಮುಖಿಮೋಗ್ರ ಚರ್ಮಾಂಬರಾಸುರಶಿರೋ । ಮಾಲಿ ಮಂದಾಕಿನೀಧರ ವ ಹೇಶ್ವರ ಮೇಘ ವಾಹ ಮಂದರನಿವಾಸ ॥ ನೀಲಲೋಹಿತ ಪಾರಿಜಾತಪಾವನ ಲೋಕ । ಪಾಲ ಕೈಲಾಸಮಂದಿರ ಮಂತ್ರಮ ಯ ಭಕ್ತ॥ಲೋಲ ಪಂಚಬ್ರಹ್ಮಪರನಾದ ಬಿಂದುಮಯ ಪರಮಾತ್ಮಪುರ ವೈರಿಯೆಂದು॥೩॥ ವರದ ವಾಗೀಶ ವರ್ಣಾತೀತ ವಂದ್ಯಜಯ । ಪರಮ ಪರತರ ಪರಂಜೋತಿ ಪರಮಾನಂದ । ನಿರಪಾಯ ನಿರುಪಮ ನಿರಾವರಣನಿರ್ಲೇಪನಿರವಯವ ನಿತ್ಯತೃಪ್ತ॥ ಉರಗಕಂಕಣ ವಿಶ್ವ ತೋಬಾಹು ವಿಶ್ವಾತ್ಮ |ಸುರಗಣಾರ್ಚಿತ ಸನಾತನ ಸದಾಗತಿಹಂಸ। ಗಿರೀಶ ಗಾಂಗೇಯ ಪಿತ ಗಣನಾಥ ಜಗದೀಶ ವಿಷಧರ ಪಿನಾಕಿಯೆಂದು ॥೪॥ ಉದ ಯಾಸ್ತಮಾನದೊಳು ನೂರೆಂಟುನಾಮವನು । ಪದಳುದಿಂದೋದಿಕೇಳಿದ ವರ್ಗೆಶಂಭುಲಿಂ| ಗದ ಕರುಣದಿಂದನಿತು ಕೊರತೆಯಿಲ್ಲದೆ ಸಕಲಸಂಪದದೊ ಳೊಂದುಗೂಡಿ ॥ ಸದಮಳಜ್ಞಾನ ಸದ್ಭಕ್ತಿಗಳು ಮೇಲಿಪ್ಪೆ । ಲೊದಗಿ ಕೈ ಸಾರುತಿಹವಿಹದಲ್ಲಿ ಪರದೊಳೊಂ । ದಿದಗಣಪದವನೈದಿ ನಿಜಸುಖದೊಳಿಹ ಮುಕುತಿ ದೊರೆವುದಿದು ಸತ್ಯವೆಂದು ॥೫॥

೧೪೮

ಪರಮೇಶ್ವರಿಯಪುಣ್ಯನಾಮವನು ಪಗಲಿರುಳು । ಸರಸಾನುರಾಗದಿಂ ದೋದಿ ಕೇಳಿದವರ್ಗೆ|ದುರಿತಕಂಟಕವಳಿದು ಕೈಸಾರುತಿಹವಮಳತರಭೋಗ ಮೋಕ್ಷಂಗಳು॥ಪ॥ ಹ್ರೀಂಕಾರಿ ವಾಣಿ ಕಲ್ಯಾಣಿ ರುದ್ರಾಣಿ ರಮೆ।ಓಂಕಾರರೂ

ಪಿಣಿ ಗಣಾನಿ ಗಾನಪ್ರೀತೆ । ಐಂಕಿಲಾಪಮಾಲಿನಿ ಮಹಾಮಾಯೆ ಮಾತಂಗಿ ಕ್ಲೀಂಕಲೇವರೆವರೇಣ್ಯೆ ॥ ಸೌಂಕಾರಸದನೆ ಶರ್ವಾಣಿ ಶಾರದೆ ಸತ್ಯೆ। ಕ್ರೋಂಕವಚ ಮುಖ್ಯೆ ಮಂತ್ರಾದಿದೇವತೆ ದೇವಿ। ಶ್ರೀಂಕಿಲಾಕಾರಿ ವಿದಾಂಗಿಮಾತೃಕೆ ಮಾನ್ಯೆಶಾಂಕರೀಶಾಸಿಯೆಂದು ॥೧॥ ಗಿರಿಜೆ ಗೀರ್ವಾಣಪೂಜಿತೆ ಗೌರಿಗುಹಜನನಿ ಪರನಾದಬಿಂದುಮಂದಿರೆ ಮನೋಂಬುಜಹಂಸೆ। ವರದೆ ವೈಭವೇ ನಿತ್ಯಮುಕ್ತೆ ನಿರ್ಮಲೆ ನಿರಾವರಣೆ ಶಿವ ಶಾಂತೆ ಕಾಂತೆ ॥ ಧರಣಿಘನರ್ಮಾನುಗತೆ ಸಾವಿತ್ರಿ ಗಾಯತ್ರಿ। ವಿರಜೆ ವಿಶ್ವಾತ್ಮಕೆ ವಿದೂತಪಾಪವ್ರಾತೆ ಶರಣಪಿತೆ ಸರ್ವಮಂಗಳೆ ಸಚ್ಚಿದಾನಂದೆ ಪರೆ ಸುಧಾಕಾರಿಯೆಂದು ॥೨॥ ಚಂಡೆಚಂಡೇಶ್ವರಿ ಚತುರೆ ಕಾಳಿಕೌಮಾರಿ । ಕುಂಡಲೆ ಕುಟಿಲೆ ಬಾಲೆ ಭೈರವಿ ಭವಾನಿ ಚಾ । ಮುಂಡಿ ಮೂಲಾಧಾರೆ ಮನುವಂದ್ಯೆಮುನಿಪೂಜ್ಯೆಪಿಂಡಾಂಡಮಯೆ ಚಂಡಿಕೆ।ಮಂಡಲತ್ರಯನಿಳಯೆ ದಂಡಿ ಜಯದುರ್ಗೆ ಫಣಿ।ಕುಂಡಲೆ ಮಹೇಶ್ವರಿ ಮನೋನ್ಮನಿ ಜಗನ್ಮಾತೆ।ಖಂಡಶಶಿಮಂಡನೆ ಮೃಡಾಣಿಪಾರ್ವತಿಪರಮಚಂಡಕರಮೂರ್ತಿಯೆಂದು॥೩॥ ವಿಮಲೆ ವಿಖ್ಯಾತೆ ಮಧುಮತೆ ಮುಖ್ಯೆ ಮಹಸೀಯೆ। ಸುಮತಿ ಸುಲಲಿತೆ ಹೈಮವತಿ ಭಾವೆ ಭೋಗಾರ್ಥೆ। ಕಮಲೆಕಾತ್ಯಾಯನಿ ಕರಾಳೆತ್ರಿಪುರವಿಜಯೋ ದಮೆ ದಯಾರಸಪೂರಿತೆ॥ ಅಮೃತೆಯಂಬಿಕೆಯನ್ನ ಪೂರ್ಣೆಯಶ್ವಾರೂಢೆ। ಶಮೆ ಶುದ್ಧೆ ಸಿಂಹಾವಾಹಿನಿ ಶುಭಕಲಾಪೆಸು । ಪ್ರಮದೆಪಾವನೆಪದ್ಮೆಪಾಶವೆ ಪರಬ್ರಹ್ಮಿಯುಮೆ ಸಹಜಸುಮುಖಿಯೆಂದು॥೪॥ ಇಂತು ಗುರುಶಂಭುಲಿಂಗದ ಶಕ್ತಿಸೌಭಾಗ್ಯಸಂತತಶರೀರ ಸಮಜ್ಞಾನಸತ್ಕ್ರಿಯೆಸ । ಮಂತು ಕರುಣಾಸನಾಭರಣಾಯುಧಾದಿ ಸಗುಣಾಂತರಾದಿಗಳಾಗುತ ॥ ಸಂತಸವನೀವ ಶಾಂಭವಿಯ ನೂರೆಂಟು ಶುಭ।ವಾಂತ ನಾಮಂಗಳನುಜಪಿಸಿದೊಡೆಸತಿಪುತ್ರ। ಸಂತಾನ ಸಕಲಸಂಪದಸಿದ್ಧಿಯಪ್ಪುದೋರಂತೆ ನಿಶ್ಚಯಮಿದೆಂದು ॥

—ಈಶ ಈಶ ಧೀಶ ಪಾಲಿಸೊ, ಆಶಪಾಶ ನಾಶಗೊಳಿಸೊ—

॥ ಈಶ ಮುರುಘೇಶಾ ॥

ಶ್ರೀ ಬಾಲಲೀಲಾ ಮಹಂತ ಶಿವಯೋಗೀಶ್ವರ ಗ್ರಂಥಮಾಲೆ



ಸಿದ್ಧವಾಗಿರುವ ಪ್ರಕಟನೆಗಳು :

ಬಾಲಲೀಲಾ ಮಹಂತಲಿಂಗ ಶಿವಯೋಗಿ ವಿರಚಿತ

೧ ಕೈವಲ್ಯದರ್ಪಣ

ಶ್ರೀ ಷಣ್ಮುಖಸ್ವಾಮಿ ಕೃತ

೨ ಅಖಂಡೇಶ್ವರ ವಚನ

ಶ್ರೀ ಘನಮಠ ಶಿವಯೋಗಿ ವಿರಚಿತ

೩ ಭಕ್ತಿಸುಧಾಸಾರ

೪ ಶ್ರೀ ಮೈಲಾರ ಬಸವಲಿಂಗಶರಣರ ಕೃತಿಗಳು

ಶ್ರೀ ಚನ್ನಕವಿ ವಿರಚಿತ

೫ ಬಾಲಲೀಲಾ ಮಹಂತ ಶಿವಯೋಗೀಶ್ವರ ಪುರಾಣ

ಗುಬ್ಬಿ ಮಲ್ಲಣಾರ್ಯಕೃತ

೬ ಗಣಭಾಷ್ಯ ರತ್ನಮಾಲಾ

ಶ್ರೀ ನಂಜೇಶ್ವರ ವಿರಚಿತ

೭ ಗುರುರಾಜ ಚಾರಿತ್ರ

೮ ಭಕ್ತಿ ಗೀತೆಗಳು